ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 16 ಶುಕ್ರವಾರ 2022 | ₹4

43

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 239 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಮೈಸೂರು ಹನುಮಂತೋತ್ಸವ ಸಮಿತಿಯ ವತಿಯಿಂದ ಹನುಮ ಜಯಂತಿಯ ಪ್ರಯುಕ್ತ ಸತತ ನಾಲ್ಕನೇ ವರ್ಷ ಆಯೋಜಿಸಲಾಗಿರುವ "ಮೈಸೂರು ಹನುಮ ಹಬ್ಬ"ದ ಪೋಸ್ಟರ್ ಅನ್ನು ಮೈಸೂರು ಮಹಾಪೌರರಾದ ಶಿವಕುಮಾರ್ ಅವರು ಗುರುವಾರ ಬಿಡುಗಡೆ ಮಾಡಿದರು.ಈ ಸಂದರ್ಭದಲ್ಲಿ ಮೈಸೂರು ನಗರ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್, ಅಂಬಾರಿ ಕನ್ವೆನ್ಷನ್ ಮಾಲೀಕರಾದ ಸ್ವೀಟ್ ಮಹೇಶ್, ಕೆ.ಆರ್ ಬಿಜೆಪಿ ಉಪಾಧ್ಯಕ್ಷರಾದ ಸಂತೋಷ್(ಶಂಭು), ಮೈ ಟಾರ್ಪಾಲಿನ್ಸ್ ಮಾಲೀಕರಾದ ಪ್ರದೀಪ್ ಸಿಂಗ್, ನಗರ ಪಾಲಿಕೆ ಸದಸ್ಯರಾದ ಜಗದೀಶ್, ಆಶ್ರಯ ಸಮಿತಿಯ ಸದಸ್ಯರಾದ ಹೇಮಂತ್ ಕುಮಾರ್, ಕೆ.ಆರ್.ಯುವ ಮೋರ್ಚಾ ಅಧ್ಯಕ್ಷರಾದ ಮನು ಶೈವ್, ಎಸ್.ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪುನೀತ್ ಹಾಗೂ ಹನುಮೋತ್ಸವ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.

ಜಾಗತಿಕ ಲಿಂಗಾಯತ ಮಹಾಸಭಾದಿಂದ ನಾಳೆ ಮೈಸೂರಲ್ಲಿ ರಾಷ್ಟ್ರೀಯ ಕಾರ್ಯಕಾರಣಿ ಸಭೆ



ಮೈಸೂರು, ಡಿ.15(ಆರ್‌ಕೆಬಿ)–ಲಿಂಗಾಯತ ಧರ್ಮದ ಜಾಗೃತಿಗಾಗಿ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ಹಾಗೂ ಲಿಂಗಾಯತ ಸಮುದಾಯದಲ್ಲಿ ಒಗ್ಗಟ್ಟು ಸೇರಿ ಇನ್ನಿತರ ಉದ್ದೇಶಗಳನ್ನು ಹೊಂದಿರುವ ಜಾಗತಿಕ ಲಿಂಗಾಯತ ಮಹಾಸಭಾದ ಪ್ರಥಮ ರಾಷ್ಟ್ರೀಯ (ಕೇಂದ್ರ) ಕಾರ್ಯಕಾರಿಣಿ ಸಭೆ ಡಿ.17ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಶ್ರೀಹೊಸಮಠದ ನಟರಾಜ ಸಭಾಭವನದಲ್ಲಿ ಏರ್ಪಡಿಸಲಾಗಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಶರಣು ಮಹದೇವಪ್ಪ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕಾರಿಣಿಯಲ್ಲಿ ರಾಷ್ಟ್ರೀಯ ಅಧ್ಯಕ್ಷ, ಉಪಾಧ್ಯಕ್ಷರು, ಇನ್ನಿತರೆ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಎಂ.ಜಮಾದಾರ್ ನೇತೃತ್ವದಲ್ಲಿ ರಾಜ್ಯದ ಎಲ್ಲಾ 20 ಜಿಲ್ಲೆಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ. ಲಿಂಗಾಯತ ಧರ್ಮದ ಬಗ್ಗೆ ಈಗಿರುವ ಅನುಮಾನಗಳಿಗೆ ಅಲ್ಲಿ ಉತ್ತರ ದೊರೆಯಲಿದೆ. ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದರು.

ಡಿ.18ರಂದು ತಿ.ನರಸೀಪುರದ ಎಪಿಎಂಸಿ ಆವರಣದಲ್ಲಿ ಮಹಾಸಭಾದ ತಿ.ನರಸೀಪುರ ತಾಲೂಕು ಘಟಕ ಹಮ್ಮಿಕೊಂಡಿರುವ 'ಲಿಂಗಾಯತ ಧರ್ಮ– ಜಾಗೃತಿ ಸಮಾವೇಶ'ದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧಿಪತಿಗಳು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಎಲ್.ಶಿವಲಿಂಗಪ್ಪ, ಬಿ.ಎಂ.ಮರಪ್ಪ, ಸುರೇಶ್ ಕಾವೇರಿಪುರ, ಪಿ.ಎನ್.ನಾಗರಾಜು, ಎಂ.ಮಹೇಶ್, ಆರ್.ವೀರೇಶ್ ಉಪಸ್ಥಿತರಿದ್ದರು.

ಬಿ.ವೈ.ವಿಜಯೇಂದ್ರರಿಗೆ ಸೋಲು ಎಂಬ ಮಾತು ಸಲ್ಲದು: ಎಲ್.ಆರ್.ಮಹದೇವಸ್ವಾಮಿ



ಮೈಸೂರು, ಡಿ.15– ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಪಕ್ಷದ ಮುಂಚೂಣಿ ನಾಯಕರಾಗಿದ್ದು, ಅವರು ಒಂದು ಕ್ಷೇತ್ರಕ್ಕೆ ಸೀಮಿತವಲ್ಲ ಎಂಬುದು ಕಳೆದ ಹಲವು ಚುನಾವಣೆಯಲ್ಲಿ ಸಾಬೀತಾಗಿದೆ. ಹೀಗಿರುವಾಗ ವರುಣದಲ್ಲಿ ಸೋಲು ಎಂಬ ಮಾತು ಅವರಿಗೆ ಸಲ್ಲದು ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರುಣ ವಿಧಾನಸಭಾ ಕ್ಷೇತ್ರಕ್ಕೆ ವಿಜಯೇಂದ್ರ ಅಭ್ಯರ್ಥಿ ಆಗಬಹುದು ಎಂಬ ಸುದ್ದಿಗೆ ಕಾಂಗ್ರೆಸ್ ನಾಯಕರು ಹೆದರಿದ್ದಾರೆ ಎಂಬುದು ಅವರ ಹೇಳಿಕೆಗಳಿಂದ ತಿಳಿಯುತ್ತಿದೆ. ಚುನಾವಣೆಯಲ್ಲಿ ಯಾರನ್ನು ಗೆಲ್ಲಿಸಬೇಕು ಎಂಬುದನ್ನು ಜನರು ತೀರ್ಮಾನಿಸುತ್ತಾರೆ. ಜನರ ಭಾವನೆಗಳಿಗೆ ಸ್ಪಂದಿಸುವುದಷ್ಟೆ ನಮ್ಮ ಕೆಲಸ. ಈ ಕೆಲಸವನ್ನು ವಿಜಯೇಂದ್ರ ಮೊದಲ ದಿನದಿಂದಲೂ ಮಾಡುತ್ತಿದ್ದಾರೆ.

ಎಲ್ಲ ಟೀಕೆಗಳಿಗೂ ಕಾಲವೇ ಉತ್ತರಿಸಲಿದೆ. ಕ್ಷೇತ್ರದ ಅಭಿವೃದ್ಧಿಗೆ ಪಿಡಬ್ಲ್ಯೂಡಿಯಿಂದ 42 ಕೋಟಿ ರೂ., ಹಿಂದುಳಿದ ವರ್ಗಗಳ ಇಲಾಖೆಯಿಂದ 68 ಕೋಟಿ ರೂ.ಗಳನ್ನು ಸರ್ಕಾರಕ್ಕೆ ಮನವಿ ಮಾಡಿ ಬಿಡುಗಡೆ ಮಾಡಿಸಿದ್ದರು. ಈ ಅನುದಾನದಲ್ಲಿ ಸಮುದಾಯ ಭವನ, ರಸ್ತೆ, ಚರಂಡಿ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಿಗೆ ಯೋಜನೆ ರೂಪಿಸಲಾಗಿತ್ತು. ಆದರೆ ಸ್ಥಳೀಯ ಶಾಸಕರು ಹಕ್ಕುಚ್ಯುತಿ ಮಂಡನೆ ಹೆಸರಿನಲ್ಲಿ ತಡೆಯೊಡ್ಡಿದರು. ಆದರೂ ಸಹ ಕ್ಷೇತ್ರಕ್ಕೆ ವಿವಿಧ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಲಲಿತಾದ್ರಿಪುರ, ಆಯರಹಳ್ಳಿ, ಕಿರಾಳು ಸೇರಿದಂತೆ ಸಾಕಷ್ಟು ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಮಾಹಿತಿ ಇಲ್ಲದವರು ಒಮ್ಮೆ ನೋಡಿ ಬರಲಿ ಎಂದು ಕಿಡಿಕಾರಿದ್ದಾರೆ.



ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ರಾಜ್‌ಕುಮಾರ್ ಡಿ.13 ರಂದು ಮೈಸೂರಿನ ಶ್ರೀರಾಂಪುರದಲ್ಲಿ ಸ್ಪಾರ್ಟನ್ಸ್ ಜಿಮ್ ಉದ್ಘಾಟಿಸಿದರು. ಚಿತ್ರದಲ್ಲಿ ಜಿಮ್ ಮಾಲೀಕ ಶಿವಾನಂದ್, ಇತರರನ್ನು ಕಾಣಬಹುದು.

ನೂತನ ಪಶು ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ



ಮೈಸೂರು,ಡಿ.15–ಮೈಸೂರಿನ ಪಡುವಾರಹಳ್ಳಿಯಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ 20 ಲಕ್ಷ ರೂ. ಅನುದಾನದಲ್ಲಿ ನೂತನ ಪಶು ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಶಾಸಕ ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನಗರ ಪ್ರದೇಶದಲ್ಲಿ ಹೈನುಗಾರಿಕೆ ನಶಿಸುತ್ತಿದ್ದು, ಪಡುವಾರಹಳ್ಳಿ ಒಂಟಿಕೊಪ್ಪಲು ಸುತ್ತಮುತ್ತಲಿನ ಭಾಗದಲ್ಲಿ ಇಂದಿಗೂ ಹೈನುಗಾರಿಕೆಯನ್ನು ಜನರು ಅವಲಂಬಿಸಿದ್ದಾರೆ. ಈ ಸ್ಥಳದಲ್ಲಿ 1985ರಲ್ಲಿ ಖಾಸಗಿ ಕಟ್ಟಡದಲ್ಲಿ ಆರಂಭವಾದ ಆಸ್ಪತ್ರೆಗೆ 35 ವರ್ಷದ ನಂತರ ನನ್ನ ಅವಧಿಯಲ್ಲಿ ಸ್ವಂತವಾಗಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದು, ಇಲ್ಲಿನ ಪಶು ಅವಲಂಬಿತ ರೈತಾಪಿ ಜನರು ಸದುಪಯೋಗಪಡಿಸಿಕೊಳ್ಳುವಂತೆ ಕೋರಿದರು.

ಈ ವೇಳೆ ನಗರಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಪಡುವಾರಹಳ್ಳಿಯ ಗ್ರಾಮಾಭ್ಯುದಯ ಟ್ರಸ್ಟ್ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ಭೈರಪ್ಪ, ಎಂ.ರಮೇಶ್, ರಾಮಣ್ಣ, ರಾಮಸ್ವಾಮಿ, ಸೋಮಣ್ಣ, ಲೋಕೇಶ್ವರ, ವಾರ್ಡ್ ಬಿಜೆಪಿ ಅಧ್ಯಕ್ಷ ಆಟೋ ಮಂಜು, ಮಾಜಿ ನಗರಪಾಲಿಕೆ ಸದಸ್ಯ ಸಿ.ಶ್ರೀರಾಮ, ಈ.ಬಸವರಾಜು, ಎಸ್.ಬಿ.ಶಿವು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಉಮೇಶ್, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ವೇಣು, ಸ್ವಾಮಿ, ಗುರುದತ್ತ, ಎಂ.ಸಿ.ಕುಮಾರ್, ಗಿರೀಶ್, ಗೋಪಾಲ, ಉಮಾ ಬೋರಪ್ಪ, ಸುಧಾ ರಾಮಚಂದ್ರ, ಛಾಯಾ ಪ್ರಸಾದ್, ಜಯರಾಂ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಎ.ಎಸ್.ರಘು



ಮೈಸೂರು, ಡಿ.15– ಮೈಸೂರಿನ ಶಾರದಾದೇವಿನಗರದ ಕೋವೈಕೇರ್ ತಪೋವನ ಸೋಲೇಸ್ ಅಪಾರ್ಟ್‌ಮೆಂಟ್ ನಿವಾಸಿ ಹಾಗೂ ತಮಿಳುನಾಡಿನ ಕಲ್ಪಾಕ್ಕಂ ಆಟೋಮಿಕ್ ಎನರ್ಜಿ ಇಲಾಖೆಯ ನಿವೃತ್ತ ವೈಜ್ಞಾನಿಕ ಅಧಿಕಾರಿ ಎ.ಎಸ್.ರಘು(77) ಕಳೆದ ರಾತ್ರಿ (ಬುಧವಾರ) ನಿಧನರಾದರು.

ಮೃತರು ಪತ್ನಿ ಉಷಾ, ಪುತ್ರಿ ಪ್ರಿಯಾ, ಅಳಿಯ ಶ್ರೀವತ್ಸ, ಮೊಮ್ಮಕ್ಕಳು, ಕುಟುಂಬ ಸದಸ್ಯರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಶುಕ್ರವಾರ ಅಮೇರಿಕಾದಿಂದ ಅವರ ಮಗಳು ಬಂದ ನಂತರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಸ್.ಲಲಿತಾ



ಮೈಸೂರು, ಡಿ.15– ಮೈಸೂರಿನ ಜಯಲಕ್ಷ್ಮಿಪುರಂ ನಿವಾಸಿ, ಲೆಕ್ಕಪರಿಶೋಧಕ ಹೆಚ್.ವಿ.ಪ್ರಸಾದ್ ಪತ್ನಿ ಹೆಚ್.ಎಸ್.ಲಲಿತಾ(66) ಗುರುವಾರ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತಿ, ಪುತ್ರ ಸ್ವರೂಪ್, ಪುತ್ರಿ ಯಶಸ್ವಿನಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವಕ್ಕೆ ಸಂಭ್ರಮದ ತೆರೆ

ಅಂತಿಮ ದಿನವೂ ಪ್ರಸಿದ್ಧ ನಾಟಕ 'ಮಾಯಾಬಜಾರ್', 'ಅವನಿ', 'ಛಾಯಾಚಿತ್ರಂ ಮಾಯಾಚಿತ್ರಂ' ರಸದೌತಣ

ಮೈಸೂರು, ಡಿ.15(ಎಂಕೆ)– 'ತಾಯಿ ಭಾರತೀಯ ಪಾದ ಪದ್ಮಗಳಿಗೆ ನಮಿಸುತ್ತಾ' 'ಭಾರತ್ ಮಾತಾ ಕೀ ಜೈ' ಘೋಷಣೆಯೊಂದಿಗೆ 'ಭಾರತೀಯತೆ'ಯನ್ನು ಪ್ರತಿಬಿಂಬಿಸಿದ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ–2022'ಕ್ಕೆ ಗುರುವಾರ ಭವ್ಯ ತೆರೆಬಿತ್ತು.

ಮೈಸೂರು ರಂಗಾಯಣದಲ್ಲಿ ಡಿ.8ರಿಂದ ಹತ್ತು–ಹಲವು ಸುಪ್ರಸಿದ್ಧ ನಾಟಕಗಳು, ಜಾನಪದ ನೃತ್ಯ ಪ್ರಕಾರಗಳಿಂದ ಸಾವಿರಾರು ಮಂದಿ ರಂಗ ಪ್ರೇಮಿಗಳ ಮನಗೆದ್ದ ಈ ಸಾಲಿನ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ' ಸಡಗರ–ಸಂಭ್ರಮದ ನಡುವೆ ಅಂತ್ಯಗೊಂಡಿತು.

ಬಹುರೂಪಿ ರಂಗೋತ್ಸವ ಕಡೆಯ ದಿನ ವಿವಿಧ ರಂಗಮಂದಿರಗಳಲ್ಲಿ ಪ್ರದರ್ಶನಗೊಂಡ ನಾಟಕಗಳು ಮಹಾಭಾರತದಲ್ಲಿನ ಪ್ರೇಮಕತೆಯೊಂದಿಗೆ ಉಬ್ಬುತಗ್ಗುಗಳ ವೈವಿಧ್ಯತೆಯನ್ನೊಳಗೊಂಡ ಭೂಮಿಯಲ್ಲಿ ಮನುಷ್ಯನ ಅಂತಿಮ



'ಅವನಿ' ನಾಟಕದ ದೃಶ್ಯ



ಬಿ.ವಿ.ಕಾರಂತರ ಪುತ್ಥಳಿ ಎದುರು 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ದ ಸಮಾರೋಪ ಗೀತೆ ಹಾಡಿದ ರಂಗಾಯಣದ ಕಲಾವಿದರು.

ಕ್ಷಣಗಳ ಗ್ರಹಿಕೆಯ ಜ್ಞಾನೋದಯಕ್ಕೆ ಕಾರಣಗಳನ್ನು ತಿಳಿಸಿದವು. ಕಲಾಮಂದಿರದಲ್ಲಿ 'ಮಾಯಾಬಜಾರ್'(ತೆಲುಗು), ಸಂಪತ್‌ರಂಗಮಂದಿರ (ಕಿರುರಂಗಮಂದಿರ)ದಲ್ಲಿ 'ಅವನಿ'(ಕನ್ನಡ) ಹಾಗೂ ಭೂಮಿಗೀತದಲ್ಲಿ 'ಛಾಯಾಚಿತ್ರ ಮಾಯಾಚಿತ್ರಂ'(ಮಲಯಾಳಂ) ನಾಟಕಗಳು ರಂಗ ಪ್ರೇಮಿಗಳ ಮನದಾಳಕ್ಕಿಳಿದವು.

ಕಲಾಮಂದಿರ: ಶ್ರೀ ಕೃಷ್ಣನ ಅಣ್ಣ ಬಲರಾಮನ ಮಗಳು ಶಶಿರೇಖಾ ಮತ್ತು ಅವನ ಸಹೋದರಿ ಸುಭದ್ರೆಯ ಮಗ ಅಭಿಮನ್ಯುವಿನ ಪ್ರೇಮಕಥೆಯಾದ ತೆಲುಗಿನ 'ಮಾಯಾಬಜಾರ್' ನಾಟಕ ಕಲಾಮಂದಿರದಲ್ಲಿ ಪ್ರದರ್ಶನಗೊಂಡಿತು. ರಂಗಾಸಕ್ತರಿಂದ ತುಂಬಿದ್ದ ವೇದಿಕೆಯಲ್ಲಿ ಮಲ್ಲಾಡಿ ವೆಂಕಟಕೃಷ್ಣ ಶರ್ಮ ರಚನೆ, ಸುರಭಿ ಜಯಚಂದ್ರ ವರ್ಮ ನಿರ್ದೇಶನ ಹಾಗೂ ತೆಲಂಗಾಣದ ಶ್ರೀ ವೆಂಕಟೇಶ್ವರ ಸುರಭಿ ಥಿಯೇಟರ್ ಕಲಾವಿದರ ಅಚ್ಚುಕಟ್ಟಿನ ಅಭಿನಯ ಭಾರೀ ಮೆಚ್ಚುಗೆ ಪಡೆಯಿತು.

ಸಂಪತ್‌ರಂಗಮಂದಿರ(ಕಿರುರಂಗಮಂದಿರ): 'ಅವನಿ' ಎಂದರೆ ಭೂಮಿ, ಭೂಮಿ ಎಂದರೆ ಹೆಣ್ಣು ಭಾರತೀಯ ಸಾಹಿತ್ಯದಲ್ಲಿ ಪರಂಪರೆಯಲ್ಲಿ ಅರಳಿದ ಸೀತೆ, ದ್ರೌಪದಿ, ದಮಯಂತಿ,



ಕಲಾಮಂದಿರದಲ್ಲಿ ಸುಪ್ರಸಿದ್ಧ 'ಮಾಯಾ ಬಜಾರ್' ನಾಟಕ ಪ್ರದರ್ಶನ.

ಅಂಬೆ, ಶಕುಂತಲೆ, ಮಾದವಿಯಂತಹ ಪಾತ್ರಗಳು ಪ್ರಸ್ತುತ ಭಾರತೀಯ ಜೀವನ ವಿಧಾನಗಳಲ್ಲಿ ಸ್ಪಂದಿಸುವ ವಿಭಿನ್ನ ರೀತಿಯನ್ನು 'ಅವನಿ' ನಾಟಕದ ಮೂಲಕ ಪ್ರಸ್ತುತಪಡಿಸಲಾಯಿತು. ಕೆ.ವಿ.ರಾಧಾಕೃಷ್ಣ ರಚನೆ, ಅಕ್ಷತಾ ಮಾಯಸಂದ್ರ ನಿರ್ದೇಶನದಲ್ಲಿ ಬೆಂಗಳೂರಿನ ಸಮನ್ವಿತ ತಂಡದ ಕಲಾವಿದರು ತಮ್ಮ ಕಲಾತ್ಮಕ ಅಭಿನಯದ ಮೂಲಕ ಅಪಾರ ಅಭಿಮಾನಿಗಳನ್ನು ಸೆಳೆದು ಸೈ ಎನಿಸಿಕೊಂಡರು.

ಭೂಮಿಗೀತ: ಸ್ತ್ರೀ–ಪುರುಷರ ನಡುವಿನ ಪರಸ್ಪರ ಸಂಘರ್ಷವನ್ನೊಳಗೊಂಡ ಮಲಯಾಳಂನ 'ಛಾಯಾಚಿತ್ರಂ ಮಾಯಾಚಿತ್ರಂ' ನಾಟಕ ರಂಗಾಯಣದ ಭೂಮಿಗೀತ ವೇದಿಕೆಯಲ್ಲಿ ಪ್ರದರ್ಶನಗೊಂಡಿತು. ನಯನ ಮನೋಹರ ದೃಶ್ಯ ಕಾವ್ಯ, ಶೃಂಗಾರಮಯ ಸಂಭಾಷಣೆಯನ್ನೊಳಗೊಂಡ ಈ ನಾಟಕ ಭೂತ ಮತ್ತು ವರ್ತಮಾನ, ಪ್ರಾಪಂಚಿಕ ಮತ್ತು ಅಲೌಕಿಕ ಹೇಗೆ ಮನುಷ್ಯನನ್ನು ಕಾಡುತ್ತವೆ ಎಂಬುದನ್ನು ಚಿತ್ರಸಹಿತ ತಿಳಿಸಿಕೊಟ್ಟಿತು.

ನಾಟಕಗಳ ಆರಂಭಕ್ಕೂ ಮುನ್ನ ರಂಗಾಯಣ ಆವರಣದಲ್ಲಿರುವ ಬಿ.ವಿ. ಕಾರಂತರ ಪುತ್ಥಳಿ ಎದುರು ಜಮಾವಣೆಗೊಂಡ ರಂಗಾಯಣ ಕಲಾವಿದರು 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ–2022'ರ 'ತಾಯಿ ಭಾರತೀಯ ಪಾದ ಪದ್ಮಗಳಿಗೆ ನಮಿಸುವ ಬನ್ನಿ' ಹಾಡನ್ನು ಹಾಡಿ, ಕಲಾಭಿಮಾನಿಗಳೊಂದಿಗೆ ಒಟ್ಟಾಗಿ ಕುಣಿದು ಕುಪ್ಪಳಿಸುವ ಮೂಲಕ ಬಹುರೂಪಿಯನ್ನು ಯಶಸ್ವಿಯಾಗಿ ಸಂಪನ್ನಗೊಳಿಸಿದರು.




ಜಾನಪದ ನೃತ್ಯ ಪ್ರಕಾರಗಳ ವೈಭವ ಅನಾವರಣ...



ರಂಗಾಯಣದ ವನರಂಗ ಹಾಗೂ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಜಾನಪದ ನೃತ್ಯ ಪ್ರಕಾರಗಳ ವೈಭವ ಅನಾವರಣಗೊಂಡಿತು. ವನರಂಗದಲ್ಲಿ ಕೊಡವರ ಸಾಂಪ್ರದಾಯಿಕ 'ಬೊಳಕಾಟ್' ಹಾಗೂ 'ಪುತ್ತರಿ ಕೋಲಾಟ' ನೃತ್ಯವನ್ನು ಚಂಗುಲಂಡ ಸೂರಜ್ ಮತ್ತು ತಂಡ ಪ್ರಸ್ತುತಪಡಿಸಿದರೆ, ಕೆ.ಬಿ.ಮಹೇಶ್ ಮತ್ತು ತಂಡದ 'ವೀರಗಾಸೆ' ನೃತ್ಯ ಅಭಿಮಾನಿಗಳಿಗೆ ರೋಮಾಂಚನ ನೀಡಿತು. ಹಾಗೆಯೇ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಮೈಸೂರಿನ ನಿತ್ಯನಿರಂತರ ಟ್ರಸ್ಟ್‌ನ ವಿಶೇಷಚೇತನ ಕಲಾವಿದರ ಜಾನಪದ ನೃತ್ಯ ಹಾಗೂ 'ಭಾರತ ವರ್ಷ ವಿಶೇಷ' ಶೀರ್ಷಿಕೆಯಲ್ಲಿ ಮೈಸೂರು ದಿವಾಕರ ಹೆಗಡೆ ಮತ್ತು ತಂಡ ನಡೆಸಿಕೊಟ್ಟ 'ತಾಳಮದ್ದಳೆ' ನೆರೆದಿದ್ದವರಿಗೆ ರಸದೌತಣ ನೀಡಿತು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.12.2022 ಶುಕ್ರವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ : ಉಫ, ರಾಹುಕಾಲ: ಬೆಳಗ್ಗೆ 10.30 ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಡಯಾಬಿಟಿಸ್ ಮತ್ತು ಸಂಧಿವಾತ ಕಾಯಿಲೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ತರಳಬಾಳು ಶಿಕ್ಷಣ ಕೇಂದ್ರ:** ಕಲಾ ವಾಣಿಜ್ಯ ಹಾಗೂ ವಿಜ್ಞಾನ ವಸ್ತುಪ್ರದರ್ಶನ, ಉದ್ಘಾಟನೆ: ನಿವೃತ್ತ ಹಿರಿಯ ಭೌತಶಾಸ್ತ್ರ ಉಪನ್ಯಾಸಕ ಕೆ.ಎಸ್.ಮುರುಗೇಶ್, ಮುಖ್ಯ ಅತಿಥಿಗಳು: ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ನಿವೃತ್ತ ಪ್ರಾಧ್ಯಾಪಕ ಡಾ.ಜಿ.ಆರ್.ಶಿವಮೂರ್ತಿ, ಉಪಸ್ಥಿತರು: ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ.ಆನಂದಪ್ಪ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಡಿ.ನಾಗೇಂದ್ರಪ್ಪ, ಸ್ಥಳ: ಶಾಲಾ ಆವರಣ, ಬೆಳಗ್ಗೆ 9.30ಕ್ಕೆ

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಸದ್ವಿದ್ಯಾ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ, ಸದ್ವಿದ್ಯಾ ಪ್ರೌಢಶಾಲೆ:** ಸಂಸ್ಕೃತಿ ಸೌರಭ ಶಾಲಾ ವಾರ್ಷಿಕೋತ್ಸವ, ಅಧ್ಯಕ್ಷತೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ.ವಿ.ಕೆ. ಗೋಪಾಲಾಚಾರ್, ಮುಖ್ಯ ಅತಿಥಿಗಳು: ಸಂಸ್ಕೃತಿ ಚಿಂತಕರಾದ ಡಾ.ವಿದುಷಿ ವಿ.ಬಿ.ಆರತಿ, ಬಹುಮಾನ ವಿತರಣೆ: ಸಂಸ್ಥೆ ಕಾರ್ಯದರ್ಶಿ ಪ್ರೊ.ಕೆ.ನರಹರಿಬಾಬು, ಉಪಸ್ಥಿತರು: ಸಂಸ್ಥೆ ಉಪಾಧ್ಯಕ್ಷ ನಾಗರಾಜ್, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್.ಹಿರಿಯಣ್ಣ, ಸ್ಥಳ: ಜಗನ್ಮೋಹನ ಅರಮನೆ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಕಾಲೇಜು:** ವಿದ್ಯಾರ್ಥಿ ವೇದಿಕೆ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವ ವಿ.ಆರ್. ಶೈಲಜ, ಗೌರವ ಅತಿಥಿಗಳು: ರಂಗಭೂಮಿ ಕಲಾವಿದ ಎನ್. ಧನಂಜಯ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ.ದೇವಿಕ, ಸ್ಥಳ: ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜಾನಪದ ಕಲಾಪ್ರಕಾರಗಳ ತರಬೇತಿ ಶಿಬಿರ, ಉದ್ಘಾಟನೆ : ಚಿಂತಕ ಡಾ. ಅರವಿಂದ ಮಾಲಗತ್ತಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್, ಡಾ. ಟಿ.ಆರ್. ಗುರುಪ್ರಸಾದ್, ಪ್ರೊ ಮೈಸೂರು ಕೃಷ್ಣಮೂರ್ತಿ, ಡಾ. ಆರ್. ಜಯರಾಜು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜೆ, ಲಕ್ಷಾರ್ಚನಾ, ವಾರ್ಷಿಕ ಕುಂಬಾಭಿಷೇಕ ಪೂಜೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ.

■ **ಶರಣ ಸಾಹಿತ್ಯ ಪರಿಷತ್ತು, ಜ್ಯೋತಿ ಶಿಕ್ಷಣ ಸಂಸ್ಥೆ :** ವಿದ್ಯಾರ್ಥಿಗಳಿಗೆ ವಚನ ಗಾಯನ ಸ್ಪರ್ಧೆ, ಉದ್ಘಾಟನೆ : ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಸಿ. ಮುದ್ದುವೀರಪ್ಪ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಜ್ಯೋತಿ ಶಿಕ್ಷಣ ಸಂಸ್ಥೆ ಆವರಣ, ಮಧ್ಯಾಹ್ನ 2ಕ್ಕೆ.

■ **ಅಭ್ಯುದಯ ಮಹಿಳಾ ಸಮಾಜ :** ವಿವಿಧ ಜಾನಪದ ಮತ್ತು ಸಂಗೀತ ವಿದ್ವಾಂಸರಿಂದ ಜನಪದ ಗೀತೆ ಮತ್ತು ಸುಗಮ ಸಂಗೀತ ಕಾರ್ಯಾಗಾರ, ಸ್ಥಳ: ಅಭ್ಯುದಯ ಮಹಿಳಾ ಸಮಾಜ, ಜೆ.ಪಿ.ನಗರ, ಸಂಜೆ 4ರಿಂದ.

■ **ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆ:** ಶ್ರೀ ಕಾಲಭೈರವೇಶ್ವರಸ್ವಾಮಿ ಜನ್ಮಾಷ್ಟಮಿ ಪ್ರಯುಕ್ತ ಬೆಳಗ್ಗೆ 8.30ಕ್ಕೆ ಅಭಿಷೇಕ, ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಸಹಸ್ರನಾಮಾರ್ಚನೆ, ಮಹಾಮಂಗಳಾರತಿ, ಸಂಜೆ 5.30ಕ್ಕೆ ವೇದಘೋಷ, ರುದ್ರಾಭಿಷೇಕ, ಹೂವಿನ ಅಲಂಕಾರ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸ್ಥಳ: ಶ್ರೀ ಕಾಲ ಭೈರವೇಶ್ವರಸ್ವಾಮಿ ದೇವಸ್ಥಾನ, ಕೆ.ಟಿ. ರಸ್ತೆ.

■ **ಶ್ರೀ ಜಯಚಾಮರಾಜೇಂದ್ರ ಪಿಯು ಕಾಲೇಜು :** ಶಾರದೋತ್ಸವ, ಮುಖ್ಯ ಅತಿಥಿಗಳು : ಎಸ್‌ಪಿ ಆರ್. ಚೇತನ್, ಸ್ಥಳ: ಕಲಾಮಂದಿರ, ಸಂಜೆ 5ಕ್ಕೆ.

■ **ಪಲ್ಲವ ಪ್ರಕಾಶನ :** ನಟರಾಜ್ ಹುಳಿಯಾರ್ ಅವರ ಎಲ್ಲರ ಗಾಂಧೀಜಿ, ಮಹಾತ್ಮ ಗಾಂಧೀಜಿಯವರ ಮಾತು ಬರಹ ಚಿಂತನೆ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಗಾಂಧೀವಾದಿ ಪ್ರೊ. ಜಿ.ಬಿ. ಶಿವರಾಜ್, ಮುಖ್ಯ ಅತಿಥಿಗಳು : ಕವಯತ್ರಿ ಸವಿತಾ ನಾಗಭೂಷಣ, ಉಪಸ್ಥಿತರು : ಲೇಖಕ ನಟರಾಜ್ ಹುಳಿಯಾರ್, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಜಿ.ಎಸ್. ಗಣೇಶ್, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ– ಜಯಂತಿ ವಿ.ಭಟ್, ಅಂಬಯ್ಯನುಲಿ, ಡಾ.ಜ್ಯೋತಿಶಂಕರ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಎಂ.ಚಂದ್ರಶೇಖರನ್– ವಯೋಲಿನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.20 ಭಾವಗೀತೆ–ದೀಪಾ ಸತ್ಯನಾರಾಯಣ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರನಾರೇಯಣ– ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ.ಎನ್.ರಘು, ಸಾಹಿತ್ಯ ಮತ್ತು ನಿರೂಪಣೆ–ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ, ಸಖೀಪದ, ಪ್ರಸ್ತುತಿ– ನಿಶಿತಾ ಕೃಷ್ಣಸ್ವಾಮಿ, 4.30 ವೃತ್ತಿ ಮಾರ್ಗದರ್ಶನ–ಸಂಖ್ಯಾಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ವಿದ್ಯಾ ಆರ್. ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ –ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಸುದರ್ಶನ್ ರಾವ್ ಶಿಂಧೆ ಅವರೊಂದಿಗೆ ಸಂದರ್ಶನ, 8.00 ರಸಮಂಜರಿ–ಚರ್ಚೆ "ಸಂಸ್ಕೃತ ಪತ್ರಿಕೆಗಳು" ಭಾಗವಹಿಸುವವರು ಕೆ.ಎಸ್. ಜಯಲಕ್ಷ್ಮಿ ಶ್ರೀನಿವಾಸ ಸಿದ್ಧಾಂತ ಹಾಗೂ ಟಿ.ಎನ್. ಪ್ರಭಾಕರ್, 9.15 ಜನಪದ ಸಂಗೀತ–ಬಿ.ಕೆ. ಶಿವನಂಜಪ್ಪ ಮತ್ತು ತಂಡ, 10.00 ಬಾಲಾಜಿ ಶಂಕರ್ –ಹಾಡುಗಾರಿಕೆ, 10.30 ಸವಿನೆನಪು

■ **ಗಾನಭಾರತೀ :** ವಿದ್ವಾನ್ ಹರೀಶ್ ಪಾಂಡವ್ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಕೃತಿಕ್ ಕೌಶಿಕ್ ಎಂ.ಪಿ.–ಪಿಟೀಲು, ವಿದ್ವಾನ್ ಪುತ್ತೂರು ನಿಕ್ಷಿತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ವಸುಂಧರಾ ಪ್ರದರ್ಶಕ ಕಲೆಗಳ ಕೇಂದ್ರ :** ಗಾನ ನೃತ್ಯ ಸುವರ್ಣ ಸಂಗಮ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮ, ಉದ್ಘಾಟನೆ : ಕೈಗಾರಿಕೋದ್ಯಮಿ ಡಾ. ಎಂ. ಜಗನ್ನಾಥ್ ಶೆಣೈ, ಮುಖ್ಯ ಅತಿಥಿಗಳು: ವಿದುಷಿ ಡಾ. ಸುಕನ್ಯಾ ಪ್ರಭಾಕರ್, ವಿದುಷಿ ಡಾ. ಜ್ಯೋತಿಶಂಕರ್, ವಿದುಷಿ ಡಾ. ತುಳಸಿ ರಾಮಚಂದ್ರ, ಅಧ್ಯಕ್ಷತೆ : ವಸುಂಧರಾ ಪ್ರದರ್ಶಕ ಕಲೆಗಳ ಕೇಂದ್ರದ ಅಧ್ಯಕ್ಷೆ ಶ್ರೀಮತಿ ಸವಿತಾ ರಮೇಶ್, ಡಾ. ವಸುಂಧರಾ ದೊರೆಸ್ವಾಮಿ ಅವರಿಂದ ಭರತನಾಟ್ಯ, ವಿದ್ವಾನ್ ಸಂದೇಶ್ ಭಾರ್ಗವ್–ನಟುವಾಂಗ, ವಿದುಷಿ ಡಾ. ಪಿ.ರಮಾ ಅವರಿಂದ ಗಾಯನ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಕೃಷ್ಣಪ್ರಸಾದ್–ಕೊಳಲು, ಸ್ಥಳ: ರಮಾ ಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 6ರಿಂದ.

■ **ಅಖಿಲ ಭಾರತೀಯ ಗ್ರಾಹಕರ ಪಂಚಾಯತ್:** ಗ್ರಾಹಕ ಜಾಗರಣ ಪಾಕ್ಷಿಕ 2022 ಅಂಗವಾಗಿ ಗ್ರಾಹಕರ ಹಕ್ಕುಗಳ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರ ಸಂಶೋಧನಾ ಮತ್ತು ಅಧ್ಯಯನ ವಿಭಾಗದ ಅಧ್ಯಕ್ಷೆ ಪವಿತ್ರ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಅಧ್ಯಕ್ಷ ಡಾ.ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸ್ಥಳ: ವಿದ್ಯಾರಣ್ಯ ಕೋಚಿಂಗ್ ಸೆಂಟರ್, ವಿದ್ಯಾರಣ್ಯಪುರಂ, ಸಂಜೆ 6ಕ್ಕೆ

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಶ್ರೀಕೃಷ್ಣಮೂರ್ತಿಪುರಂ ಶ್ರೀರಾಮಮಂದಿರ, ಕಾಂತರಾಜ ಅರಸು ರಸ್ತೆ, ಸಂಜೆ 6.15 ರಿಂದ.

■ **ಹೆಬ್ಬಾರ್ ಶ್ರೀವೈಷ್ಣವ ಉಪಸಭಾ, ಕೆ.ಆರ್. ವನಂ :** ಡಾ.ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

■ **ಇನ್ನೋವೇಟಿವ್ ಮೈಸೂರು, ಕನ್ನಡ ಸಾಹಿತ್ಯ ಕಲಾಕೂಟ :** ಯಕ್ಷ ಸಂಭ್ರಮ, ಉದ್ಘಾಟನೆ : ಉದ್ಯಮಿ ಜಿ.ಎಂ. ಹೆಗಡೆ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಎ.ಪಿ. ನಾಗೇಶ್, ಅಧ್ಯಕ್ಷತೆ : ಯಕ್ಷಗಾನ ಚಿಂತಕ ಜಿ.ಎಸ್. ಭಟ್ಟ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಇನ್ನೋವೇಟಿವ್ ಕೋಶಾಧ್ಯಕ್ಷ ಡಾ. ಎಸ್.ಎನ್. ಹೆಗಡೆ, ಕಾರ್ಯದರ್ಶಿ ಹೇರಂಬ ಭಟ್ಟ, ಸಂಜೆ 6.30 ರಿಂದ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ ಅವರಿಂದ ಸೀತಾಪಹರಣ ಯಕ್ಷಗಾನ ಪ್ರದರ್ಶನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಗ್ರಾಪಂ ಸದಸ್ಯ ಬಿ. ಗುರುಸ್ವಾಮಿ ಅವರಿಂದ ಧ್ವಜಾರೋಹಣ, ಸಂಜೆ 4.30ಕ್ಕೆ ಡಾ. ಜಿ.ಹೆಚ್. ಯೋಗೇಶ್ ಅವರಿಂದ ಮಣ್ಣಿನ ಆರೋಗ್ಯ ನಿರ್ವಹಣೆ ಕುರಿತು ಉಪನ್ಯಾಸ, ಡಾ. ಎಸ್.ಬಿ. ಮಮತಾ ಅವರಿಂದ ಮಣ್ಣಿನ ಪರೀಕ್ಷೆಯ ಮಹತ್ವ, ವಿಧಾನ ಮತ್ತು ಉಪಯೋಗ ಕುರಿತು ಉಪನ್ಯಾಸ, ಅಧ್ಯಕ್ಷತೆ : ವಿಜಯ ಪ್ರಥಮ ದರ್ಜೆ ಕಾಲೇಜು ವಿಶ್ರಾಂತ ಪ್ರಾಧ್ಯಾಪಕ ಡಾ. ಸ್ವಾಮಿಗೌಡ, ಮುಖ್ಯ ಅತಿಥಿಗಳು : ಎಸ್. ಸುಗ್ರೀವ, ಜಿ. ಜಗದೀಶ್.

ಶ್ರೀಸುತ್ತೂರು ಕ್ಷೇತ್ರ, ನಂಜನಗೂಡು ತಾಲೂಕು

■ **ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 16 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 239 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ಅಮ್ಮ : (ಹಾಸ್ಟೆಲ್‌ನಲ್ಲಿದ್ದ ಮಗನಿಗೆ ಫೋನ್ ಮಾಡಿ) ಏನೋ ಮಾಡ್ತಿದ್ದೀಯಾ?
ಮಗ : ಓದ್ತಾ ಇದ್ನಮ್ಮ
ಅಮ್ಮ : ವೆರಿಗುಡ್. ಏನು ಓದ್ತಾ ಇದ್ದೆ?
ಮಗ : ನಿನ್ನ ಭಾವಿ ಸೊಸೆ ಮೆಸೇಜ್!

ಮೈಸೂರು ಮಿತ್ರ

ಶುಕ್ರವಾರ, 16 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮನಸ್ಸು ಮತ್ತು ಭಾವನೆಗಳು ಶುದ್ಧವಾಗಿದ್ದರೆ ಮನುಷ್ಯನಿಗೆ ರೋಗ ರುಜಿನಗಳ ಬಾಧೆ ಇರುವುದಿಲ್ಲ. –ಸ್ವಾಮಿ ಶಿವಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಮಟ ಕೊಬ್ಬರಿಗೂ ಚಿಗುಟು ಬೆಲ್ಲಕ್ಕೂ ನಂಟು

ನಿಮ್ಮ ಪತ್ರಗಳು

ಕೋಟೆ ತಾಲೂಕಿನ ವಿದ್ಯಾರ್ಥಿಗಳ ಗೋಳು ಕೇ(ಹೇ)ಳುವವರು ಯಾರು...?



ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಗ್ರಾಮದ ಮಾರ್ಗವಾಗಿ ರಾಜ್ಯ ಹೆದ್ದಾರಿಯಲ್ಲಿ ಮೈಸೂರು ತಲುಪುವ ವೇಗದೂತ ಬಸ್ ಹಾಗೂ ತಡೆರಹಿತ ವೇಗದೂತ ಬಸ್‌ಗಳು ಸರಗೂರು ಮತ್ತು ಹೆಚ್.ಡಿ.ಕೋಟೆಯಿಂದಲೇ ಭರ್ತಿಯಾಗಿ ಬರುವುದರಿಂದ ಹಂಪಾಪುರದಲ್ಲಿ ನಿಲ್ಲಿಸುವುದಿಲ್ಲ. ಇದರಿಂದ ವಿದ್ಯಾರ್ಥಿಗಳು, ಕಾರ್ಮಿಕರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಅಂತರರಾಜ್ಯ ಬಸ್‌ಗಳಾದ ಮಾನಂದವಾಡಿ–ಕಲ್ಪೆಟ್ಟ ಬಸ್‌ಗಳು, ಹವಾನಿಯಂತ್ರಿತ ಬಸ್‌ಗಳು ಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಸಾಮಾನ್ಯ ಜನರ ಮಾಸಿಕ ಬಸ್ ಪಾಸ್‌ಗಳಿಗೆ ಅನುಮತಿ ನೀಡುವುದಿಲ್ಲ. ಇದರಿಂದ ಮೈಸೂರಿಗೆ ಹಾಗೂ ಹೊರ ಜಿಲ್ಲೆಗಳಿಗೆ ದಿನನಿತ್ಯ ಹೋಗುವ ಅಸಂಖ್ಯಾತ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ಹೋಗದೆ ತೊಂದರೆಯಾಗುತ್ತಿದ್ದು, ತೀವ್ರ ಬವಣೆ ಪಡುವಂತಾಗಿದೆ. ಈ ಸಂಬಂಧ ಕೋಟೆ ರಸ್ತೆ ಸಾರಿಗೆ ಘಟಕದ ನಿಯಂತ್ರಣಾಧಿಕಾರಿ ಅವರಲ್ಲಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಮಾರ್ಗವಾಗಿ ಸಮರ್ಪಕವಾಗಿ ಬಸ್‌ಗಳು ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು ಮತ್ತು ಹೆಚ್ಚುವರಿಯಾಗಿ ಕೈತೋರಿದಲ್ಲಿ ನಿಲ್ಲುವ ಬಸ್‌ಗಳನ್ನು ಮತ್ತೆ ಪುನರಾರಂಭಿಸಬೇಕೆಂದು ಮನವಿ.

– ನೊಂದ ವಿದ್ಯಾರ್ಥಿಗಳು, ಹಂಪಾಪುರ, ಹೆಚ್.ಡಿ. ಕೋಟೆ ತಾ.

ಧರ್ಮ ಜಂಜಾಟ ಬೇಡ, ಪ್ರಗತಿ ಕಾರ್ಯಗಳಾಗಲಿ

ಮಾನ್ಯರೆ,

ಇತ್ತೀಚೆಗೆ ರಾಜ್ಯ ಸರ್ಕಾರ "ವಿವೇಕ ಯೋಜನೆ"ಯಲ್ಲಿ ತರಗತಿಗಳಿಗೆ ಕೇಸರಿ ಬಣ್ಣ ಎಂದಾಗ ವಿರೋಧ ಪಕ್ಷಗಳು ವಿರೋಧ ವ್ಯಕ್ತಪಡಿಸಿದ್ದವು. ಆದರೆ ಇಲ್ಲಿ ಕೇಸರಿ ಬಣ್ಣ ಕೇವಲ ಧರ್ಮಕ್ಕೆ ಹೊರತುಪಡಿಸಿ, ಮಕ್ಕಳಿಗೆ ಹೊಸ ಕಟ್ಟಡಗಳು ಆಗುತ್ತಿದೆ ಎಂದು ಯೋಚಿಸಬಹುದಿತ್ತು ಅಲ್ಲವೇ. ಪ್ರಸ್ತುತ ಕಲಬುರಗಿ ರೈಲ್ವೇ ನಿಲ್ದಾಣಕ್ಕೆ ಹಸಿರು ಬಣ್ಣ ಬಳಿದಿರೋದಕ್ಕೆ ಹಿಂದೂ ಸಂಘಟನೆಗಳ ಪ್ರತಿಭಟನೆಗೆ ಎಚ್ಚೆತ್ತ ರೈಲ್ವೇ ಅಧಿಕಾರಿಗಳು ಹಸಿರು ಬಣ್ಣದ ಮೇಲೆ ಬಿಳಿ ಬಣ್ಣ ಬಳಿದಿದ್ದಾರೆ. ಸಾಮಾನ್ಯವಾಗಿ ಕಟ್ಟಡಗಳಿಗೆ ಇಂಜಿನಿಯರುಗಳು ಬಿಳಿ ಅಥವಾ ತಿಳಿ ಬಣ್ಣಗಳು ಸೂಚಿಸುತ್ತಾರೆ. ಅವರು ಸೂಚಿಸಿದ ಬಣ್ಣಗಳು ಹೊರತುಪಡಿಸಿ ಧರ್ಮ, ಜಾತಿ, ರಾಜಕಾರಣ, ಅವರ ಅನುಕೂಲಕ್ಕೆ ತಕ್ಕಂತೆ ಬಣ್ಣಗಳು ಸಾರ್ವಜನಿಕ ಸ್ಥಳಗಳಲ್ಲಿ ತರಬಾರದು. ಈ ರೀತಿ ಮುಂದುವರೆದರೆ ಧರ್ಮದ ಹೆಸರಿನಲ್ಲಿ ಜನರ ಮಧ್ಯೆ ಜಂಜಾಟವಾಗುವ ಸಾಧ್ಯತೆ ಇದೆ. ಹಾಗಾಗಿ ಸಾರ್ವಜನಿಕ ಸ್ಥಳ, ಸರ್ಕಾರಿ ಕಚೇರಿಗಳಲ್ಲಿ ಬಣ್ಣಗಳಿಗೆ ಕುರಿತು ಜಂಜಾಟ ಹೊರತುಪಡಿಸಿ, ಕಾಮಗಾರಿಯತ್ತ ಒತ್ತು ನೀಡಬೇಕಾಗಿದೆ.

–ಆನಂದ ಜೇವೂರ್, ಕಲಬುರಗಿ

ಕಾಲೇಜಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಿ

ಮಾನ್ಯರೆ,

ನೂರಾರು ವರ್ಷಗಳ ಇತಿಹಾಸ ಇರುವ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕುಡಿಯುವ ನೀರಿನ ಸಮಸ್ಯೆ. ಮಹಾರಾಜ ಕಾಲೇಜಿನ ಆವರಣದಲ್ಲಿ ಬರೋಬ್ಬರಿ ಎರಡು ಕುಡಿಯುವ ನೀರಿನ ಫಿಲ್ಟರ್‌ಗಳಿದ್ದರೂ ಅವು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ನೀರಿಗಾಗಿ ಹೊರಗಡೆ ಬಂದು ಕುಡಿಯುವಂತಾಗಿದೆ. ಕೂಡಲೇ ಕಾಲೇಜಿನ ಆಡಳಿತ ಮಂಡಳಿ ಇತ್ತ ಗಮನ ಹರಿಸಿ ಫಿಲ್ಟರ್‌ಗಳನ್ನು ಸರಿಪಡಿಸಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸೌಲಭ್ಯ ದೊರಕಿಸಿಕೊಡಬೇಕು ಎಂದು ಮನವಿ.

–ಸುಮನ್ ಪೀಟರ್, ಮಹಾರಾಜ ಕಾಲೇಜು, ಮೈಸೂರು.

ಕಲಾಮಂದಿರದಲ್ಲಿ ಸುಸಜ್ಜಿತ ಶೌಚಾಲಯ ಕಲ್ಪಿಸಿ



ಮಾನ್ಯರೆ,

ಮೈಸೂರು ನಗರಕ್ಕೆ "ಮುಕುಟ" ದಂತಿರುವ, ಸಾಂಸ್ಕೃತಿಕ ಮತ್ತು ಸಾರ್ವಜನಿಕ ಸಮಾರಂಭಗಳನ್ನು ಮಾಡಲು ಹೇಳಿ ಮಾಡಿಸಿದಂತಿರುವ ಮೈಸೂರು ನಗರದ ಹೆಮ್ಮೆಯ ರಾಯಭಾರಿ "ಕಲಾಮಂದಿರ" ಅಂದಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ಗುಂಡುರಾವ್ ಅವರ ಕನಸಿನ ಕೂಸು.

ಇತ್ತೀಚೆಗೆ ಪ್ರತಿದಿನವೂ ಒಂದಿಲ್ಲೊಂದು ಕಾರ್ಯಕ್ರಮಗಳು ನಡೆಯುತ್ತಿರುವುದು ಸರಿಯಷ್ಟೆ. ಕಲಾಮಂದಿರದಲ್ಲಿ ಸರಿ ಸುಮಾರು ಒಂದೂವರೆ ಸಾವಿರದಷ್ಟು ಜನರು ಕುಳಿತುಕೊಳ್ಳಲು ವ್ಯವಸ್ಥೆ ಇದೆ. ಆದರೆ ಈ ಕಲಾಮಂದಿರದಲ್ಲಿ ಸಮರ್ಪಕವಾದ ಶೌಚಾಲಯದ ವ್ಯವಸ್ಥೆ ಇಲ್ಲ. ಈಗಿರುವ ಶೌಚಾಲಯ ಯಾವುದಕ್ಕೂ ಸಾಲದಾಗಿದೆ. ಈ ಕಲಾಮಂದಿರಕ್ಕೆ ಮುಖ್ಯಮಂತ್ರಿ ಸೇರಿದಂತೆ ಗಣ್ಯ ಮತ್ತು ಅತೀ ಗಣ್ಯರು ಆಗಮಿಸುತ್ತಾರೆ. ಆದರೆ ಇಲ್ಲಿ ಸಮರ್ಪಕವಾದ ಶೌಚಾಲಯ ಇಲ್ಲವಾಗಿದೆ. ಕಲಾಮಂದಿರದ ಹೊರ ಭಾಗದಲ್ಲಿ ಸಾಕಷ್ಟು ಖಾಲಿ ಜಾಗ ಇರುವುದರಿಂದ, ಇಲ್ಲಿ ನಾಲ್ಕಾರು ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಬೂಕನಕೆರೆ ವಿಜೇಂದ್ರ, ಮೈಸೂರು

ವಿಧಾನಸಭೆ – 2023 ಚುನಾವಣಾ ಜಿದ್ದಾಜಿದ್ದಿ

ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ

ಹಳಬರ ಸೆಣಸಾಟದ ನಡುವೆ ಯುವ ಮುಖಂಡರ 'ಭವಿಷ್ಯ'ದ ಲೆಕ್ಕಾಚಾರ

ಪಿರಿಯಾಪಟ್ಟಣ,ಡಿ.15–ಕೊಡಗಿಗೆ ಹೊಂದಿಕೊಂಡಿರುವ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಮಾಜಿ ಹಾಗೂ ಹಾಲಿ ಶಾಸಕರು ಪ್ರಬಲ ಆಕಾಂಕ್ಷಿಗಳಾಗಿದ್ದರೆ, ಬಿಜೆಪಿಯಲ್ಲಿ ಹೊಸ ಮುಖಗಳು ಸ್ಪರ್ಧಿಸುವ ಉತ್ಸುಕತೆ ಹೊಂದಿದ್ದಾರೆ.

ಈ ಕ್ಷೇತ್ರದಲ್ಲಿ ಒಟ್ಟು 14 ಬಾರಿ ಚುನಾವಣೆ ನಡೆದಿದ್ದು, ಅದರ ಪೈಕಿ 8ರಲ್ಲಿ ಕಾಂಗ್ರೆಸ್ ಗೆದ್ದಿದೆ. ಜನತಾ ಪರಿವಾರದ ಅಭ್ಯರ್ಥಿಗಳು 5 ಬಾರಿ ಗೆದ್ದಿದ್ದರೆ, ಒಮ್ಮೆ ಬಿಜೆಪಿ ಖಾತೆ ತೆರೆದಿದೆ. ಈ ಕ್ಷೇತ್ರದಲ್ಲಿ ಶಾಸಕರಾಗಿದ್ದ ಕೆ.ಎಸ್.ಕಾಳಮರಿಗೌಡರು ಎರಡು ಬಾರಿ ಕಾಂಗ್ರೆಸ್ ಹಾಗೂ ಒಮ್ಮೆ ಜನತಾ ಪಕ್ಷದಿಂದ ಗೆದ್ದು ಬಂದಿದ್ದರೆ, ಕೆ.ವೆಂಕಟೇಶ್ ಎರಡು ಬಾರಿ ಕಾಂಗ್ರೆಸ್, ಎರಡು ಬಾರಿ ಜೆಡಿಎಸ್ ಹಾಗೂ ಒಮ್ಮೆ ಜನತಾ ಪಕ್ಷದ ಅಭ್ಯರ್ಥಿಯಾಗಿ ಗೆದ್ದಿದ್ದರು.

ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಮಾಜಿ ಶಾಸಕ ಕೆ.ವೆಂಕಟೇಶ್ ಪ್ರಬಲ ಆಕಾಂಕ್ಷಿಯಾಗಿದ್ದರೆ, ಕಳೆದ ಚುನಾವಣೆಯಲ್ಲೂ ಆಕಾಂಕ್ಷಿಯಾಗಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್ ಸ್ಪರ್ಧಿಸುವ ಉತ್ಸುಕತೆಯಲ್ಲಿದ್ದು, ತಮಗೆ ಟಿಕೆಟ್ ದೊರೆಯಬಹುದು ಎಂಬ ವಿಶ್ವಾಸ ಹೊಂದಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಪಿ.ಪ್ರಶಾಂತ್‌ಗೌಡ ಸಹ ಕಾಂಗ್ರೆಸ್ ಆಕಾಂಕ್ಷಿಗಳು. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಸಂಘಟಿಸುತ್ತಿರುವ ಹಿನ್ನೆಲೆಯಲ್ಲಿ ವರಿಷ್ಠರು ತಮಗೆ ಅವಕಾಶ ನೀಡಬಹುದು ಎಂಬ ಅಭಿಪ್ರಾಯವನ್ನು ಡಾ. ಬಿ.ಜೆ.ವಿಜಯಕುಮಾರ್ ಹೊಂದಿದ್ದರೆ, ಈ ಹಿಂದೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುವುದನ್ನು ಹಾಗೂ ಕಲ್ಪವೃಕ್ಷ ಸೊಸೈಟಿಯಲ್ಲಿ ಅಧ್ಯಕ್ಷರಾಗಿ ತಮ್ಮ ಸೇವೆ ಪರಿಗಣಿಸಿ ವರಿಷ್ಠರು ಮನ್ನಣೆ ನೀಡುತ್ತಾರೆ ಎಂಬ ವಿಶ್ವಾಸವನ್ನು ಪಿ.ಪ್ರಶಾಂತ್‌ಗೌಡ ಹೊಂದಿದ್ದಾರೆ. ಕೆಪಿಸಿಸಿ ಮಾಜಿ ಸದಸ್ಯ ಹಾಗೂ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹೆಚ್.ಡಿ.ಗಣೇಶ್, ತಾವು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಲು ಹೋದಾಗ ವಿಪಕ್ಷ ನಾಯಕರಾದ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಟಿಕೆಟ್‌ಗೆ ಅರ್ಜಿಯನ್ನು ಸಲ್ಲಿಸದೇ ಹಿಂದೆ ಸರಿದಿದ್ದೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಕಾಂಗ್ರೆಸ್ ವರಿಷ್ಠರು 5 ಬಾರಿ ಶಾಸಕರಾಗಿದ್ದ ಕೆ.ವೆಂಕಟೇಶ್ ಅವರಿಗೆ ಮತ್ತೆ ಅವಕಾಶ ನೀಡುತ್ತಾರೆಯೇ ಅಥವಾ ಹೊಸ ಮುಖಕ್ಕೆ ಮಣೆ ಹಾಕುತ್ತಾರೋ ಕಾದು ನೋಡಬೇಕಾಗಿದೆ.

ಜೆಡಿಎಸ್‌ನಲ್ಲಿ ಹಾಲಿ ಶಾಸಕ ಕೆ.ಮಹದೇವ್ ಹೊರತುಪಡಿಸಿದರೆ, ಬೇರೆ ಯಾರೂ ಆಕಾಂಕ್ಷಿಗಳಿರುವಂತೆ ಮೇಲ್ನೋಟಕ್ಕೆ ಕಂಡು ಬರುತ್ತಿಲ್ಲ. ಮಹದೇವ್ ಅವರು 2 ಬಾರಿ ಸ್ಪರ್ಧಿಸಿ ಒಮ್ಮೆ ಸೋತು ಮತ್ತೊಮ್ಮೆ ಗೆಲುವು ಸಾಧಿಸಿದ್ದಾರೆ. ತಾವು ಶಾಸಕರಾಗಿ ನೂರಾರು ಕೋಟಿ ರೂ. ಅನುದಾನವನ್ನು ತಂದು ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ್ದು, ಮತದಾರರು ತಮ್ಮ ಪರ ಒಲವು ಹೊಂದಿದ್ದಾರೆ ಎಂಬ ವಿಶ್ವಾಸದಿಂದ ಕೆ.ಮಹದೇವ್ ಮುಂದಿನ ಚುನಾವಣೆಗಾಗಿ ಈಗಿನಿಂದಲೇ ತಯಾರಿ ನಡೆಸಿದ್ದಾರೆ. ತಮ್ಮ ಪುತ್ರ ಮೈಸೂರು ಹಾಲು ಒಕ್ಕೂಟದ ಅಧ್ಯಕ್ಷ ಪ್ರಸನ್ನ ಅವರೊಂದಿಗೆ ಕ್ಷೇತ್ರದಾದ್ಯಂತ ಜನರ ಅಹವಾಲುಗಳಿಗೆ ಸ್ಪಂದಿಸುತ್ತಿದ್ದಾರೆ. ಪ್ರಸನ್ನ ಅವರು ರೈತರು, ಮಹಿಳೆಯರ ಆರ್ಥಿಕ ಸುಧಾರಣೆಗೆ ಹತ್ತು–ಹಲವು ಕಾರ್ಯಕ್ರಮಗಳ ಮೂಲಕ ಪರಿಶ್ರಮ ಪಡುತ್ತಿದ್ದಾರೆ.

ಈ ಕ್ಷೇತ್ರದಲ್ಲಿ 1999ರ ಚುನಾವಣೆಯಲ್ಲಿ ಬಿಜೆಪಿಯ ಹೆಚ್.ಸಿ.ಬಸವರಾಜ್ ಗೆಲುವು ಸಾಧಿಸಿದ್ದು, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಅಲ್ಲದೇ ಕೋಟೆ ಹನುಮ ಜಯಂತಿ ಸಮಿತಿಯ ಗೌರವಾಧ್ಯಕ್ಷ ಕಿತ್ತೂರು ಶಶಿಕುಮಾರ ಗೌಡ ಮತ್ತು ಕೌಲನಹಳ್ಳಿ ಸೋಮಶೇಖರ್ ಆಕಾಂಕ್ಷಿಗಳಾಗಿದ್ದು, ಬಿಜೆಪಿ ವರಿಷ್ಠರು ಯಾರಿಗೆ ಟಿಕೆಟ್ ನೀಡಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಒಟ್ಟಾರೆ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ನೇರ ಸ್ಪರ್ಧೆ ಎಂದು ಹೇಳಲಾಗುತ್ತಿದೆಯಾದರೂ, ಒಮ್ಮೆ ಗೆಲುವು ಸಾಧಿಸಿರುವ ಬಿಜೆಪಿಯನ್ನು ಅಲ್ಲಗಳೆಯುವಂತಿಲ್ಲ.



ಮಹದೇವ್ | ಕೆ.ವೆಂಕಟೇಶ್ | ವಿಜಯಶಂಕರ್ | ವಿಜಯಕುಮಾರ್



ಪ್ರಶಾಂತ್‌ಗೌಡ | ಸೋಮಶೇಖರ್ | ಶಶಿಕುಮಾರ್‌ಗೌಡ



ಪಿ.ಪಟ್ಟಣ ಶಾಸಕರ ಪರಂಪರೆ

1957–ಎನ್.ಆರ್.ಸೋಮಣ್ಣ – ಕಾಂಗ್ರೆಸ್
1962–ಕೆ.ಎಂ.ದೇವಯ್ಯ – ಕಾಂಗ್ರೆಸ್
1967–ಎಚ್.ಸಿ.ಚೆನ್ನಬಸಪ್ಪ – ಕಾಂಗ್ರೆಸ್
1972–ಹೆಚ್.ಸಿ.ಚೆನ್ನಬಸಪ್ಪ – ಕಾಂಗ್ರೆಸ್
1978–ಕೆ.ಎಸ್.ಕಾಳಮರಿಗೌಡ – ಜನತಾ ಪಕ್ಷ
1983–ಕೆ.ಎಸ್.ಕಾಳಮರಿಗೌಡ – ಕಾಂಗ್ರೆಸ್
1985–ಕೆ.ವೆಂಕಟೇಶ್ – ಜನತಾ ಪಕ್ಷ
1989–ಕೆ.ಎಸ್.ಕಾಳಮರಿಗೌಡ – ಕಾಂಗ್ರೆಸ್
1994–ಕೆ.ವೆಂಕಟೇಶ್ – ಜನತಾ ದಳ
1999–ಹೆಚ್.ಸಿ.ಬಸವರಾಜ್ – ಬಿಜೆಪಿ
2004–ಕೆ.ವೆಂಕಟೇಶ್ – ಜೆಡಿಎಸ್
2008–ಕೆ.ವೆಂಕಟೇಶ್ – ಕಾಂಗ್ರೆಸ್
2013–ಕೆ.ವೆಂಕಟೇಶ್ – ಕಾಂಗ್ರೆಸ್
2018–ಕೆ.ಮಹದೇವ್ – ಜೆಡಿಎಸ್



ಮೈಸೂರು ಪಾಲಿಕೆಯ ವಾರ್ಡ್ ನಂ.44ರ ಬೋಗಾದಿ 2ನೇ ಹಂತದ ಉತ್ತರ ರಸ್ತೆ ಡಾಂಬರೀಕರಣ, ಪಾರ್ಕ್ ಅಭಿವೃದ್ಧಿ, ಶನೇಶ್ವರ ದೇವಸ್ಥಾನ ಮುಂಭಾಗದ ರಸ್ತೆಗೆ ಇಂಟರ್‌ಲಾಕ್ ಕಾಮಗಾರಿಗೆ (40 ಲಕ್ಷ ರೂ. ಅಂದಾಜು ಮೊತ್ತ) ಶಾಸಕ ಜಿ.ಟಿ. ದೇವೇಗೌಡರು ಗುದ್ದಲಿಪೂಜೆ ನೆರವೇರಿಸಿದರು. ಸ್ಥಳೀಯ ಪಾಲಿಕೆ ಸದಸ್ಯೆ ಸವಿತಾ ಸುರೇಶ್, ಸುರೇಶ್, ಉಮಾಶಂಕರ್, ಕುಮಾರ್, ಜಯರಾಮು, ಪುಟ್ಟಸ್ವಾಮಿಗೌಡ, ಲಿಂಗೇಗೌಡ, ರಮೇಶ್, ಪ್ರಕಾಶ್, ರಾಜೇಶ್, ಪ್ರಸಾದ್ ಇತರರಿದ್ದಾರೆ.

ಭಿಕ್ಷಾಟನೆಯಲ್ಲಿ ತೊಡಗಿದ್ದ ಆರು ಮಕ್ಕಳು, ಇಬ್ಬರು ತಾಯಂದಿರ ರಕ್ಷಣೆ

ಮೈಸೂರು, ಡಿ.15–ಮೈಸೂರು ನಗರದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿದ್ದ ಆರು ಮಕ್ಕಳು ಸೇರಿದಂತೆ 8 ಮಂದಿಯನ್ನು ಮಾನವ ಕಳ್ಳ ಸಾಗಣೆ ವಿರೋಧಿ ಘಟಕ ರಕ್ಷಣೆ ಮಾಡಿದೆ. ನಗರ ಪೊಲೀಸ್ ಮಾನವ ಕಳ್ಳ ಸಾಗಾಣೆ ವಿರೋಧಿ ಘಟಕ, ಮಕ್ಕಳ ವಿಶೇಷ ಪೊಲೀಸ್ ಘಟಕದ ವತಿಯಿಂದ ಇಂದು ಬೆಳಗ್ಗೆ 11ರಿಂದ ಸಂಜೆ 4ರವರೆಗೆ ಕಾರ್ಯಾಚರಣೆ ನಡೆದಿದ್ದು, ನಗರದ ಟ್ರಾಫಿಕ್ ಸಿಗ್ನಲ್, ಪ್ರಮುಖ ವೃತ್ತಗಳು ಮತ್ತು ರಸ್ತೆಗಳಲ್ಲಿ ಭಿಕ್ಷಾಟನೆಯಲ್ಲಿ ತೊಡಗಿದ್ದ ಮೂವರು ಗಂಡು ಮಕ್ಕಳು, ಇಬ್ಬರು ತಾಯಿಯರೊಂದಿಗೆ ಇಬ್ಬರು ಮಕ್ಕಳು ಹಾಗೂ ಓರ್ವ ಬಾಲಕಿ ಸೇರಿದಂತೆ ಒಟ್ಟು 8 ಮಂದಿಯನ್ನು ರಕ್ಷಣೆ ಮಾಡಿ ಅವರನ್ನು ಪುನರ್‌ವಸತಿಗಾಗಿ ಬಾಲಕರ ಬಾಲ ಮಂದಿರ, ಬಾಲಕಿಯರ ಬಾಲಮಂದಿರ ಹಾಗೂ ಸ್ತ್ರೀ ಸೇವಾನಿಕೇತನಕ್ಕೆ ದಾಖಲಿಸಿದ್ದಾರೆ.


ಡಿಸಿಪಿ ಗೀತಪ್ರಸನ್ನ ಹಾಗೂ ದೇವರಾಜ ವಿಭಾಗದ ಎಸಿಪಿ ಶಶಿಧರ್ ಮಾರ್ಗದರ್ಶನದಲ್ಲಿ ಮಹಿಳಾ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅರುಣಕುಮಾರಿ, ಎ.ಎಚ್.ಟಿ.ಯು ಘಟಕದ ಪಿಎಸ್‌ಐ ಜ್ಯೋತಿರಾವ್, ಕುವೆಂಪುನಗರ ಪೊಲೀಸ್ ಠಾಣೆ ಎಎಸ್‌ಐ ಕಾಂತರಾಜು ಹಾಗೂ ಸಿಬ್ಬಂದಿಗಳಾದ ರುಕ್ಮಿಣಮ್ಮ, ರಾಜು, ಲೋಕೇಶ್, ಚೈತ್ರ, ಆಶ್ವಿಸಿ, ಶಿವಕುಮಾರ್, ಲತಾ, ಶ್ವೇತಾ, ದಾವಲಬಿ ವಾಲಿಕರ್ ಶೋಭಾ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಭಾಸ್ಕರ್, ಗಣೇಶ್, ಮ್ಯಾಥ್ಯು, ದೇವಕಿ, ಮೇರಿ ಕಾರ್ಯಾಚರಣೆಯಲ್ಲಿದ್ದರು.

ಇತಿಹಾಸದ ಪುರುಷರನ್ನು ಮಾದರಿಯಾಗಿಟ್ಟುಕೊಳ್ಳಿ

ಎಂಎಲ್‌ಸಿ ಸಿ.ಎನ್.ಮಂಜೇಗೌಡ ಕರೆ

ಮೈಸೂರು,ಡಿ. 15– ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಾರ್ಥಿಗಳು ಇತಿಹಾಸದ ಪುರುಷರನ್ನು ಮಾದರಿಯಾಗಿಟ್ಟುಕೊಂಡು ಸಾಧನೆ ಮಾಡಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ಮೈಸೂರು ತಾಲೂಕು ಗೋಪಾಲಪುರದಲ್ಲಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎನ್‌ಎಸ್‌ಎಸ್ ಶಿಬಿರದಲ್ಲಿ ಶಿಬಿರಾರ್ಥಿಗಳು ಊರನ್ನೆಲ್ಲಾ ಸ್ವಚ್ಛಗೊಳಿಸುತ್ತೀರಿ, ಆರೋಗ್ಯದ ಬಗ್ಗೆ, ಮೌಢ್ಯದ ಬಗ್ಗೆ, ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ, ಅದೇ ರೀತಿ ನಿಮ್ಮ ಅಕ್ಕ ಪಕ್ಕದ ಮನೆಯ ಸುತ್ತಮುತ್ತ ಸ್ವಚ್ಛತೆ ಕಾಪಾಡಲು ಪ್ರಯತ್ನಿಸಿ, ಈಗ ನಿಮ್ಮ ಮನಸುಗಳು ಕಲುಷಿತವಾಗದೆ ಸ್ವಚ್ಛತೆಯಿಂದ ಕೂಡಿದೆ. ವಿದ್ಯಾರ್ಥಿಗಳು ಈ ನಾಡಿಗೆ ಏನಾದರೂ ಕೊಡುಗೆ ನೀಡಬೇಕು ಅಬ್ದುಲ್ ಕಲಾಂ, ಅಂಬೇಡ್ಕರ್, ಬಾಬುಜಗಜೀವನ್ ರಾಂ, ಕಿತ್ತೂರು ರಾಣಿ ಚನ್ನಮ್ಮ, ವಿಶ್ವೇಶ್ವರಯ್ಯರವರಂತಹ ಇತಿಹಾಸ ಪುರುಷರನ್ನು ಮಾದರಿಯಾಗಿಟ್ಟುಕೊಂಡು ಉನ್ನತ ವ್ಯಾಸಂಗ ಮಾಡಿ ದೇಶದ ಉನ್ನತ ಹುದ್ದೆಗಳನ್ನು ಅಲಂಕರಿಸಿ ಜಿಲ್ಲಾಧಿಕಾರಿಗಳಾಗಿ, ತಹಸಿಲ್ದಾರರಾಗಿ ಬರಬೇಕು ಎಂದ ಅವರು, ಇಂದು ಸಮಾಜದಲ್ಲಿ ನಾಗರಿಕತೆ ಬೆಳೆದಂತೆ ಮಾನವೀಯತೆ ಕಡಿಮೆಯಾಗುತ್ತಿದೆ.



ಸಮಾಜದ ಮೌಲ್ಯಗಳು, ನೈತಿಕತೆ ಕಡಿಮೆಯಾಗುತ್ತಿವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜವನ್ನು ಪರಿವರ್ತನೆ ಮಾಡಲು ಜನರನ್ನು ಜಾಗೃತಿಗೊಳಿಸಬೇಕು, ನೆಲ ಜಲ ಗಾಳಿಯ ಪ್ರಾಮುಖ್ಯತೆಯನ್ನು ತಿಳಿಸಿ ಅನೈರ್ಮಲ್ಯವನ್ನು ತಡೆಗಟ್ಟಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕು ಎಂದು ಮಂಜೇಗೌಡ ತಿಳಿಸಿದರು.

ಸಮಾರಂಭದಲ್ಲಿ ಮೈಸೂರು ವಿ.ವಿ ನಿಕಟಪೂರ್ವ ಕುಲಸಚಿವ ಪ್ರೊ.ಆರ್.ಶಿವಪ್ಪ, ಶ್ರೀಶೈಲರಾಮಣ್ಣನವರ್, ಪ್ರಾಂಶುಪಾಲ ಡಾ.ಎಸ್. ಮರೀಗೌಡ, ಡಾ.ಎಂ.ಬಿ.ಸುರೇಶ್, ರಾಚೇಗೌಡ, ತಾಪಂ ಮಾಜಿ ಸದಸ್ಯ ಜಿ.ಕೆ.ಬಸವಣ್ಣ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಧನಂಜಯ ಪಾಲಹಳ್ಳಿ, ಡಿ.ಲಿಂಗರಾಜು, ರವಿಶಂಕರ್, ಜಿ.ಡಿ.ಸ್ವಾಮಿಗೌಡ, ಶಂಕರೇಗೌಡ, ಬಸವರಾಜು, ಸಿದ್ದರಾಮೇಗೌಡ, ಹರಿಪ್ರಸಾದ್, ಮೀರಾ, ವತ್ಸಲ ಉಪಸ್ಥಿತರಿದ್ದರು.

ಅತಿಥಿ ಉಪನ್ಯಾಸಕ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಡಿ.15–ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಮೈಸೂರು ಸಂಸ್ಥೆಯ 2022–23ನೇ ಶೈಕ್ಷಣಿಕ ಸಾಲಿಗೆ ಸಂಚಿತ ಸಂಭಾವನೆ, ಗೌರವ ಧನ, ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಡಿ.20ರಂದು ಅರ್ಜಿಸ್ವೀಕರಿಸಲು ಕೊನೆ ದಿನ. ಡಿ.21ರಂದು ಬೆಳಗ್ಗೆ 11 ಗಂಟೆಗೆ ಸಂದರ್ಶನವನ್ನು ಸಂಸ್ಥೆಯಲ್ಲಿ ನಡೆಸಲಾಗುವುದು. ಆಸಕ್ತರು www.mysore.nic.in, www.cavamysore. karnataka. gov.in ಮೂಲಕ ಮಾಹಿತಿ ಪಡೆಯಬಹುದಾಗಿದೆ. ಮಾಹಿತಿಗಾಗಿ ದೂ. ಸಂಖ್ಯೆ: 0821–2438931 ಸಂಪರ್ಕಿಸಿ.



ಮೈಸೂರಿನ ಶಾರದಾದೇವಿನಗರ ವೃತ್ತದಲ್ಲಿ ಶಾರದಾದೇವಿನಗರ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಶ್ರೀ ಶಾರದಾದೇವಿ ಅವರ 170ನೇ ಜನ್ಮ ದಿನವನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖಾಂತರ ಆಚರಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಬಿ.ಎಂ.ರಘು, ಸ್ಥಳೀಯ ನಿವಾಸಿಗಳಾದ ಹೆಚ್.ಜಿ.ರಾಜಮಣಿ, ಪುಟ್ಟಸ್ವಾಮಿ, ಶಶಿಕಾಂತ್, ಸಿದ್ದೇಗೌಡ, ರಾಮಬಾಯಿ, ವಿಜಯ ಮಂಜುನಾಥ್, ಶಿವಕುಮಾರ್, ಕಲಾವತಿ, ಚೇತನಾ ಭೂಷಣ್, ಗಗನ್ ದೀಪ್, ತಮ್ಮಣ್ಣ, ವೆಂಕಟಯ್ಯ, ದೀಪ್ ನಟರಾಜ್, ಗಂಗಾಧರ್ ಇನ್ನಿತರರು ಉಪಸ್ಥಿತರಿದ್ದರು.

ಶಾರ್ಟ್ ಸರ್ಕ್ಯೂಟ್: ದಸರಾ ವಸ್ತುಪ್ರದರ್ಶನದ 3 ಮಳಿಗೆ ಅಗ್ನಿಗಾಹುತಿ

● ಪೊಲೀಸ್ ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರದ ಮಳಿಗೆಯಲ್ಲಿದ್ದ ಪದಾರ್ಥಗಳು ಸಂಪೂರ್ಣ ನಾಶ ● ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ

ಮೈಸೂರು,ಡಿ.15(ಆರ್‌ಕೆ)–ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಮೈಸೂರಿನ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನದ ಮೂರು ಸರ್ಕಾರಿ ಮಳಿಗೆಗಳಿಗೆ ಬೆಂಕಿ ಬಿದ್ದು ಅಲ್ಲಿದ್ದ ಪದಾರ್ಥಗಳು ಸಂಪೂರ್ಣ ನಾಶವಾಗಿವೆ. ಇಂದು ಬೆಳಗ್ಗೆ 7 ಗಂಟೆ ವೇಳೆಗೆ ದಸರಾ ವಸ್ತುಪ್ರದರ್ಶನ ಆವರಣದ ಒಂದೆಡೆ ದಟ್ಟ ಹೊಗೆ ಬರುತ್ತಿದ್ದರಿಂದ ಆತಂಕಗೊಂಡ ಸಾರ್ವಜನಿಕರು ಹತ್ತಿರ ಹೋಗಿ ನೋಡಿದಾಗ, ಪ್ರಾಧಿಕಾರದ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿಗೆ ಹೊಂದಿಕೊಂಡಂತಿರುವ ಕಟ್ಟಡದ ಸಂಚಾರಿ ಪೊಲೀಸ್, ಸೈಬರ್ ಕ್ರೈಂ ಜಾಗೃತಿ ಮಳಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಲಾ ಪ್ರದರ್ಶನ ಮಳಿಗೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾನೂನು ಅರಿವು ಮೂಡಿಸುವ ಮಳಿಗೆಗಳಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು.

ನೋಡ ನೋಡುತ್ತಿದ್ದಂತೆಯೇ ಬೆಂಕಿ ಜ್ವಾಲೆ ಇಡೀ ಕಟ್ಟಡ ಆವರಿಸಿ ವಸ್ತುಪ್ರದರ್ಶನ ಆವರಣದ ತುಂಬ ದಟ್ಟ ಹೊಗೆ ಆವರಿಸತೊಡಗಿತು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಸರಸ್ವತಿಪುರಂ ಮತ್ತು ಬನ್ನಿಮಂಟಪದ ಅಗ್ನಿಶಾಮಕ ಕೇಂದ್ರಗಳ ಸಿಬ್ಬಂದಿ, ಸುಮಾರು 2 ಗಂಟೆ ಸತತ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರಾದರೂ ಮೂರು ಮಳಿಗೆಗಳು ಅಷ್ಟರಲ್ಲೇ ಸುಟ್ಟು ಹೋಗಿದ್ದವು.

ಪುಸ್ತಕಗಳು, ಬಟ್ಟೆ, ಪೀಠೋಪಕರಣಗಳು, ಪೋಸ್ಟರ್ಸ್ ಬ್ಯಾನರ್‌ಗಳು, ಸೀಲಿಂಗ್ ಫ್ಯಾನ್‌ಗಳು, ಬಿಡಿ ಫಲಕಗಳು ಅಗ್ನಿಗೆ ಆಹುತಿಯಾದವು. ಬೆಳಗ್ಗೆಯೇ ಅವಘಡ ಸಂಭವಿಸಿದ್ದರಿಂದ ಆ ಸಮಯದಲ್ಲಿ ಯಾರೂ ಇರದಿದ್ದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಸರ್ಕಾರಿ ಮಳಿಗೆಗಳಲ್ಲದೆ ಒಂದು ವೇಳೆ ಖಾಸಗಿ ಮಳಿಗೆಗಳಲ್ಲಿ ಅವಘಡ ಸಂಭವಿಸಿದ್ದರೆ ಭಾರೀ ಪ್ರಮಾಣದಲ್ಲಿ ಗೃಹೋಪಯೋಗಿ ವಸ್ತುಗಳು, ಬೆಲೆಬಾಳುವ ಅಲಂಕಾರಿಕ ವಸ್ತುಗಳು ಅಗ್ನಿಗಾಹುತಿ ಆಗುತ್ತಿದ್ದವು. ಅಲ್ಲದೆ ಪ್ರಾಣಹಾನಿಯೂ ಸಂಭವಿಸುವ ಸಾಧ್ಯತೆಯೂ ಇತ್ತು. ವಹಿವಾಟಿನ ವೇಳೆ ಬೆಂಕಿ ಕಾಣಿಸಿಕೊಂಡಿದ್ದರೆ ಭಾರೀ ಅನಾಹುತವೇ ಉಂಟಾಗುತ್ತಿತ್ತು.



ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿ ಬಿಲ್ಡಿಂಗ್‌ನಲ್ಲಿರುವ ಸುಮಾರು 200 X 50 ಅಡಿ ವಿಸ್ತಾರದ ಮೂರು ಮಳಿಗೆಗಳಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಇದರ ಪಕ್ಕದಲ್ಲೇ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸಿಇಓ ಕಚೇರಿಗಳಿವೆ. ಸದ್ಯ ಇಲ್ಲಿಗೆ ಬೆಂಕಿ ಜ್ವಾಲೆ ಹರಡಿಲ್ಲ. ಸೈಬರ್ ಕ್ರೈಂ ಮತ್ತು ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಲೆಂದು ಪೊಲೀಸ್ ಇಲಾಖೆಯು 1 ಮಳಿಗೆಯಲ್ಲಿ ಸೂಚನಾ ಫಲಕಗಳು, ಅಪಘಾತದ ಭಿತ್ತಿಪತ್ರ, ಫಲಕಗಳು, ಸೈಬರ್ ಅಪರಾಧಗಳ ಮಾಹಿತಿ ಬಿಂಬಿಸುವ ಫಲಕಗಳು, ಜನರಲ್ಲಿ ಅಪಘಾತ ಮತ್ತು ಅಪರಾಧದ ಬಗ್ಗೆ ಅರಿವು ಮೂಡಿಸಲು ಅಳವಡಿಸಿದ್ದ ಭಿತ್ತಿ ಫಲಕಗಳು, ಇದರ ಪಕ್ಕದಲ್ಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗನವಾಡಿ ಕೇಂದ್ರಗಳು, ಪೌಷ್ಟಿಕ ಆಹಾರ, ಗರ್ಭಿಣಿಯರು, ಬಾಣಂತಿಯರು, ನವಜಾತ ಶಿಶುಗಳ ಪಾಲನೆ, ಆರೈಕೆ, ಆರೋಗ್ಯ ರಕ್ಷಣೆಗಾಗಿ ಇಲಾಖೆ ಜಾರಿಗೆ ತಂದಿರುವ ಮಹತ್ವದ ಯೋಜನೆಗಳ ಕುರಿತಂತೆ ಒಂದು ಮಳಿಗೆಯಲ್ಲಿ ವಸ್ತುಪ್ರದರ್ಶನ ಏರ್ಪಡಿಸಿತ್ತು.

ಅದೇ ರೀತಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತ ಕಾನೂನು ನೆರವು, ಕೌಟುಂಬಿಕ ವ್ಯಾಜ್ಯ, ಮಹಿಳೆಯರು–ಮಕ್ಕಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಸಾಮಾಜಿಕ ನ್ಯಾಯದ ಪರಿಕಲ್ಪನೆ ಸೇರಿದಂತೆ ಈ ಸಲದ ಕಾನೂನು ಪಾಲನೆ, ಮಾತುಕತೆ ಮೂಲಕ ಸಮಸ್ಯೆಗಳನ್ನು ಇತ್ಯರ್ಥಗೊಳಿಸುವ ವ್ಯವಸ್ಥೆ ಬಗ್ಗೆ ಮತ್ತೊಂದು ಮಳಿಗೆಯಲ್ಲಿ ಮಾಹಿತಿ ಫಲಕ, ಭಿತ್ತಿಪತ್ರ ಹಾಕಲಾಗಿತ್ತು. ವಿದ್ಯುತ್ ಅವಘಡದಿಂದ ಬೆಂಕಿ ಜ್ವಾಲೆಗೆ ಈ 3 ಮಳಿಗೆಯಲ್ಲಿದ್ದ ಎಲ್ಲಾ ಪದಾರ್ಥಗಳು ಸಂಪೂರ್ಣ ಸುಟ್ಟು ಹೋಗಿವೆ. ಕಲ್ನಾರ್‌ಶೀಟ್ ಚಾವಣಿ, ಗೋಡೆಗಳನ್ನು ಹೊರತುಪಡಿಸಿ ಮಳಿಗೆಯಲ್ಲಿದ್ದ ಎಲ್ಲಾ ವಸ್ತುಗಳು ಬೆಂಕಿಗಾಹುತಿಯಾದವು. ವಿಷಯ ತಿಳಿಯುತ್ತಿದ್ದಂತೆಯೇ ಆಯಾಯ ಇಲಾಖೆಗಳ ಸಿಬ್ಬಂದಿ ತಮ್ಮ ಮಳಿಗೆಗಳಲ್ಲಿ ಸುಟ್ಟು ಹೋದ ಅವಶೇಷಗಳನ್ನು ಬೆಳಗ್ಗೆ ತೆರವುಗೊಳಿಸಿದರು.

ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಜೀವನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಿತ್ಯ ರಾತ್ರಿ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಬಾಗಿಲು ಬಂದ್ ಮಾಡಿಕೊಂಡು ಹೋಗುತ್ತಿದ್ದರು. ಆದರೂ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಸಂಭವಿಸಿದೆ ಎನ್ನುತ್ತಿರುವುದು ಅಚ್ಚರಿ ಮೂಡಿಸಿದೆ.

"ಪ್ರಾಧಿಕಾರದ ಕಚೇರಿ ಕಟ್ಟಡ ತೀರಾ ಹಳೆಯದಾಗಿದ್ದು, ಕಲ್ನಾರ್ ಶೀಟ್ ಛಾವಣಿಯಾಗಿದೆ. ಶಿಥಿಲಾವಸ್ಥೆಯಲ್ಲಿರುವುದರಿಂದ ಅದನ್ನು ಕೆಡವಿ ಹೊಸ ಕಟ್ಟಡ ನಿರ್ಮಿಸುವ ಉದ್ದೇಶವಿದೆ. ಈಗ ಬೆಂಕಿ ಅವಘಡ ಸಂಭವಿಸಿರುವುದರಿಂದ ಸುರಕ್ಷತೆ ದೃಷ್ಟಿಯಿಂದ ಅದನ್ನು ಕೆಡವಿ ಹೊಸದಾಗಿ ನಿರ್ಮಿಸಲು ಪ್ರಾಧಿಕಾರದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. –ಮಿರ್ಲೆ ಶ್ರೀನಿವಾಸಗೌಡ, ಅಧ್ಯಕ್ಷ, ವಸ್ತುಪ್ರದರ್ಶನ ಪ್ರಾಧಿಕಾರ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 16 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 239 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಚುನಾವಣೆಗೆ ಮುನ್ನ ಒಕ್ಕಲಿಗರ ಮೀಸಲಾತಿ ಹೆಚ್ಚಳ, 2ಎಗೆ ಪಂಚಮಸಾಲಿಗರ ಸೇರ್ಪಡೆ

ರಾಜ್ಯ ಸರ್ಕಾರ ನಿರ್ಧಾರ

ಈ ಪ್ರಬಲ ಸಮುದಾಯಗಳ ಓಲೈಸಿಕೊಳ್ಳಲು ತಯಾರಿ

ಜನವರಿಯಲ್ಲಿ ಈ ಸಂಬಂಧ ಹಿಂದುಳಿದ ವರ್ಗಗಳ ಆಯೋಗ ವರದಿ

ಬಜೆಟ್ ಅಧಿವೇಶನದಲ್ಲಿ ಒಕ್ಕಲಿಗರಿಗೆ ಶೇ.4ರಿಂದ 8 ಇಲ್ಲವೇ 10, ಪಂಚಮಸಾಲಿ 2ಎಗೆ ಸೇರ್ಪಡೆ ನಿರ್ಧಾರ

ಬೆಂಗಳೂರು, ಡಿ.15(ಕೆಎಂಶಿ)– ವಿಧಾನಸಭಾ ಚುನಾವಣೆಗೂ ಮುನ್ನ ಒಕ್ಕಲಿಗ ಹಾಗೂ ಪಂಚಮ ಸಾಲಿಗಳಿಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಸಂಕ್ರಾಂತಿ ಹಬ್ಬದ ಕೊಯ್ಲಿನ ವೇಳೆಗೆ ಈ ಎರಡೂ ಕೃಷಿಕ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡುವ ಮೂಲಕ ರಾಜಕೀಯ ಕೊಯ್ಲಿಗೆ ಬಿಜೆಪಿ ಕೈ ಹಾಕಿದೆ. ಈ ಸಮುದಾಯ ಸೇರಿದಂತೆ ಕೆಲವು ಸಣ್ಣಪುಟ್ಟ ಜಾತಿಗಳು ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವಂತೆ ಈಗಾಗಲೇ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಮುಂದೆ ಅರ್ಜಿ ಸಲ್ಲಿಸಿವೆ.

ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಮಾಸಾಂತ್ಯ ಇಲ್ಲವೇ ಜನವರಿ ಮೊದಲ ವಾರದಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ ಸಲ್ಲಿಸಲಿದ್ದಾರೆ. ಈ ವರದಿಯನ್ನು ಆಧಾರವಾಗಿಟ್ಟುಕೊಂಡು ಬಜೆಟ್ ಅಧಿವೇಶನದಲ್ಲಿ ಸದನದ ಒಪ್ಪಿಗೆ ಪಡೆದು, ಪಂಚಮ ಸಾಲಿಗಳನ್ನು 2ಎಗೂ, ಒಕ್ಕಲಿಗರ ಮೀಸಲಾತಿಯನ್ನು ಶೇಕಡ 4 ರಿಂದ 8 ಇಲ್ಲವೇ 10ಕ್ಕೆ ಹೆಚ್ಚಿಸಲು ಮುಖ್ಯಮಂತ್ರಿಯವರು ನಿರ್ಧರಿಸಿದ್ದಾರೆ.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೀಸಲಾತಿಯಲ್ಲೇ ಬ್ರಾಹ್ಮಣ ಮತ್ತು ಜೈನ ಸಮುದಾಯಕ್ಕೆ ಅನುಕೂಲ ಮಾಡಿಕೊಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ತಜ್ಞರು ಹಾಗೂ ಆರ್‌ಎಸ್‌ಎಸ್ ಮುಖಂಡರೊಟ್ಟಿಗೆ ಸಮಾಲೋಚಿಸಿ, ಪ್ರಮುಖ ಸಮುದಾಯಗಳನ್ನು ಚುನಾವಣೆಗೂ ಮುನ್ನ ಓಲೈಸಿಕೊಳ್ಳಲು ಮೀಸಲಾತಿ ತಂತ್ರ ರೂಪಿಸಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಶೇಕಡ 50ಕ್ಕಿಂತ ಹೆಚ್ಚು ಮೀಸಲಾತಿ ನೀಡುವಂತಿಲ್ಲ. ಕಳೆದ ಲೋಕಸಭಾ ಚುನಾವಣೆಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು, ಆರ್ಥಿಕವಾಗಿ ಹಿಂದುಳಿದವರಿಗೆ ಶೇಕಡ 10 ರಷ್ಟು ಮೀಸಲಾತಿ ಜಾರಿಗೆ ತಂದಿದ್ದಾರೆ.

ಈ ಸಮುದಾಯಕ್ಕೆ ಉತ್ತರ ಭಾರತದ ಬ್ರಾಹ್ಮಣರು ಹಾಗೂ ಅಲ್ಲಿನ ಪ್ರಮುಖ ಮುಂದುವರೆದ ಸಮುದಾಯಗಳಿಗೆ ಮೀಸಲಾತಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಮೋದಿ ಅವರ ರಾಜಕೀಯ ತಂತ್ರವನ್ನೇ ಬೊಮ್ಮಾಯಿ ಅವರು, ಅನುಸರಿಸಲು ಹೊರಟಿದ್ದಾರೆ. ಕೇಂದ್ರ ಸರ್ಕಾರ ತಂದಿರುವ ಶೇ.10ರಷ್ಟು ಮೀಸಲಾತಿಯನ್ನು ಬ್ರಾಹ್ಮಣರು ಮತ್ತು ಈ ಎರಡು ಕೃಷಿಕ ಸಮುದಾಯಗಳಿಗೆ ನೀಡಲು ನಿರ್ಧರಿಸಿದ್ದಾರೆ.

ಅಷ್ಟೇ ಅಲ್ಲ ಅಲ್ಪಸಂಖ್ಯಾತರಿಗಿರುವ ಶೇಕಡ 4ರಷ್ಟು ಮೀಸಲಾತಿಯನ್ನು 2ಕ್ಕೆ ಇಳಿಸಲು ತೀರ್ಮಾನಿಸಿರುವ ಬಿಜೆಪಿ ಸರ್ಕಾರ ಇದೇ ರೀತಿ ಶೇಕಡ 50 ರಷ್ಟರಲ್ಲಿರುವ ಮೀಸಲಾತಿಯಲ್ಲೂ ಕೆಲ ಬದಲಾವಣೆ ಮಾಡಲಿದ್ದಾರೆ.

ಪರಿಶಿಷ್ಟರಿಗೆ ಈಗಾಗಲೇ ತೀರ್ಮಾನ ಕೈಗೊಂಡಿರುವಂತೆ ಶೇಕಡ 24ರಷ್ಟು ಮೀಸಲಾತಿ ಕಲ್ಪಿಸಿ, ಹಿಂದುಳಿದ ವರ್ಗ 2ಎ ಯಲ್ಲಿರುವ ಮೀಸಲಾತಿ ಪ್ರಮಾಣ ಹೆಚ್ಚಿಸಲು ಲೆಕ್ಕಾಚಾರ ಹಾಕಿ ಇಟ್ಟಿದ್ದಾರೆ. ಹಿಂದುಳಿದ ವರ್ಗದ ಆಯೋಗದ ವರದಿ ಬರುತ್ತಿದ್ದಂತೆ ಆ ವರದಿ ಆಧಾರವಾಗಿಟ್ಟುಕೊಂಡು ಬಜೆಟ್ ಅಧಿವೇಶನದಲ್ಲಿ ಮಂಡನೆ ಮಾಡಿ, ಅನುಮೋದನೆ ಪಡೆದುಕೊಳ್ಳಲಿದ್ದಾರೆ.

ಈ ಎಲ್ಲವೂ ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಅನುಷ್ಠಾನಗೊಂಡು ರಾಜಕೀಯ ಲಾಭ ಪಡೆಯಲು ಬಿಜೆಪಿ ಮುಂದಾಗಿದೆ.

ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಪಲ್ಟಿ, ಶಿಕ್ಷಕರು ಸೇರಿ 25 ಮಂದಿಗೆ ಗಾಯ

ಹುಣಸೂರು, ಡಿ.15– ಹುಣಸೂರು ತಾಲೂಕಿನ ಧರ್ಮಾಪುರದಿಂದ ಶಿವಮೊಗ್ಗ ಜಿಲ್ಲೆಗೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಿದ್ದ ಬಸ್ ಪಲ್ಟಿಯಾಗಿ ಐವರು ಶಿಕ್ಷಕರು, 10ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿದಂತೆ 25 ಮಂದಿ ಸಣ್ಣಪುಟ್ಟ ಗಾಯಗಳಿಂದ ಪಾರಾಗಿರುವ ಘಟನೆ ಶಿವಮೊಗ್ಗ ಜಿಲ್ಲೆಯ ವಕ್ಕೋಡು ಕ್ರಾಸ್(ತುಮರಿ ಬಳಿಯಲ್ಲಿ)ನಲ್ಲಿ ನಡೆದಿದೆ.



ತಾಲೂಕಿನ ಧರ್ಮಾಪುರ ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಶಿವರುದ್ರಪ್ಪ, ಶಿಕ್ಷಕರಾದ ಕೀರ್ತಿಕುಮಾರಿ, ರವಿ ಕೈಮೂಳೆ ಮುರಿದಿದ್ದು, ವಿದ್ಯಾರ್ಥಿಗಳಾದ ರಾಜೇಶ್, ದಿವ್ಯ ಅವರಿಗೆ ತೀವ್ರ ಗಾಯಗಳಾಗಿವೆ ಎನ್ನಲಾಗಿದೆ. ಉಳಿದ ವಿದ್ಯಾರ್ಥಿಗಳು ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಡಿ.13ರಂದು 47 ವಿದ್ಯಾರ್ಥಿಗಳು ಶಿವಮೊಗ್ಗ ಜಿಲ್ಲೆಗೆ ಶೈಕ್ಷಣಿಕ ಪ್ರವಾಸ ಹೊರಟಿದ್ದು, ಡಿ.15, ಗುರುವಾರ ಮುಂಜಾನೆ ಸಿಗಂದೂರು ಚೌಡೇಶ್ವರಿ ದೇವಸ್ಥಾನಕ್ಕೆ ತೆರಳುವ ಮಾರ್ಗ ಮಧ್ಯೆ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿ ಹೊಡೆದಿದೆ. ಮಾರ್ಗದಲ್ಲಿ ಚಲಿಸುತ್ತಿದ್ದ ವಾಹನ ಸವಾರರು, ಸ್ಥಳೀಯರ ನೆರವಿನೊಂದಿಗೆ ಸಾಗರ ಹಾಗೂ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಗಾಯಾಳುಗಳನ್ನು ಸಾಗಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಶಾಸಕರ ಸ್ಪಂದನೆ: ವಿಷಯ ತಿಳಿಯುತ್ತಿದ್ದಂತೆ ಶಾಸಕ ಹೆಚ್.ಪಿ.ಮಂಜುನಾಥ್ ಅವರು ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಸಾಗರ ತಾಲೂಕಿನ ಶಾಸಕ ಹರತಾಳು ಹಾಲಪ್ಪರಿಗೆ ಮಾಹಿತಿ ನೀಡಿದ ಮೇರೆಗೆ ತಕ್ಷಣವೇ ಮಾಜಿ ಸಚಿವ ಕಾಗೋಡು ತಿಮ್ಮಪ್ಪ ಸೇರಿದಂತೆ ಇತರೆ ಮುಖಂಡರು, ಶಿವಮೊಗ್ಗ ಶಿಕ್ಷಣ ಇಲಾಖೆ ಅಧಿಕಾರಿಗಳು ಮೆಗ್ಗಾನ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ▶ 8ನೇ ಪುಟಕ್ಕೆ


ಆರೋಪಿಗಳ ಬಗ್ಗೆ ಮಾಹಿತಿ ನೀಡುವವರಿಗೆ 5 ಲಕ್ಷ ರೂ. ಬಹುಮಾನ

ಬೆಂಗಳೂರು, ಡಿ.15– ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳಲ್ಲಿ ತಲೆಮರೆಸಿಕೊಂಡ ಆರೋಪಿಗಳ ಮಾಹಿತಿ ನೀಡುವವರಿಗೆ ನೀಡಲಾಗುತ್ತಿದ್ದ ಬಹುಮಾನದ ಮೊತ್ತವನ್ನು 20 ಸಾವಿರದಿಂದ 5 ಲಕ್ಷ ರೂ.ಗೆ ಹೆಚ್ಚಿಸಿ ಗೃಹ ಇಲಾಖೆ ಗುರುವಾರ ಆದೇಶ ಹೊರಡಿಸಿದೆ. ರಾಷ್ಟ್ರೀಯ ಸುರಕ್ಷತೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವ, ಮಾದಕ ವಸ್ತು ಹಾಗೂ ಆಯುಧ ಕಳ್ಳಸಾಗಣೆ, ಮಕ್ಕಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಘೋಷಿತ ಅಪರಾಧಿಗಳ ಬಗ್ಗೆ ಮಾಹಿತಿ ನೀಡಿ ಪೊಲೀಸರಿಗೆ ನೆರವಾಗುವವರಿಗೆ 20,000 ನಗದು ಬಹುಮಾನ ನೀಡಲು ಅವಕಾಶವಿತ್ತು. ಇದೀಗ ಅದನ್ನು 5 ಲಕ್ಷ ರೂಪಾಯಿಗೆ ಹೆಚ್ಚಿಸಲಾಗಿದೆ.

ನನಗೆ ನನ್ನದೇ ಶಕ್ತಿ ಇದೆ, ನನ್ನ ಯಾರೂ ಮುಗಿಸಲು ಸಾಧ್ಯವಿಲ್ಲ...

● ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಖಡಕ್ ನುಡಿ ● ನಾನು ಪಕ್ಷ ಕಟ್ಟಿ ಬೆಳೆಸಿದ್ದೇನೆ; ಪಕ್ಷ ಅಧಿಕಾರಕ್ಕೆ ತರಲು ಶ್ರಮಿಸಿದ್ದೇನೆ

ಬೆಂಗಳೂರು, ಡಿ.15(ಕೆಎಂಶಿ)– ಬಿಜೆಪಿಯಲ್ಲಿ ನನ್ನನ್ನು ಮುಗಿಸಲು ಷಡ್ಯಂತ್ರ ನಡೆದಿದೆ ಎಂಬ ವರದಿಗಳಲ್ಲಿ ಸತ್ಯಾಂಶ ಇಲ್ಲ. ಯಾರೂ ನನ್ನನ್ನು ಮುಗಿಸಲು ಸಾಧ್ಯವಿಲ್ಲ, ನನಗೆ ನನ್ನದೇ ಆದ ಶಕ್ತಿ ಇದೆ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಇಂದಿಲ್ಲಿ ಖಡಕ್ಕಾಗಿ ನುಡಿದಿದ್ದಾರೆ.



ಪ್ರವಾಸಕ್ಕೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಪಕ್ಷ ಕಟ್ಟಿ ಬೆಳೆಸಿದ್ದೇನೆ. ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮ ಹಾಕಿದ್ದೇನೆ. ಇದು ಇಡೀ ರಾಜ್ಯದ ಜನರಿಗೆ ಗೊತ್ತಿದೆ. ಇದನ್ನೇ ಮುಂದುವರೆಸುತ್ತೇನೆ ಎಂದರು.

ಬಿಜೆಪಿ ನನ್ನನ್ನು ನಿರ್ಲಕ್ಷ್ಯ ಮಾಡುತ್ತಿದೆ ಎಂಬುದರಲ್ಲಿ ಯಾವುದೇ ಸತ್ಯಾಂಶ ಇಲ್ಲ. ಪಕ್ಷದ ಎಲ್ಲ ಕಾರ್ಯಕ್ರಮಗಳಿಗೂ ನಾನು ಹೋಗುತ್ತಾ ಇದ್ದೇನೆ. ಸರ್ಕಾರಿ ಕಾರ್ಯಕ್ರಮಕ್ಕೆ ನಾನು ಹೋಗೋದು ಸರಿ ಇಲ್ಲ ಅಂತ ಹೋಗಿಲ್ಲ. ಪಕ್ಷದ ಸಾರ್ವಜನಿಕ ಸಭೆ–ಸಮಾರಂಭಗಳಿಗೆ ನನ್ನನ್ನು ಯಾರೂ ಕರೆಯಬೇಕಾಗಿಲ್ಲ.

ನನ್ನ ಕರ್ತವ್ಯ ನಾನು ಮಾಡುತ್ತೇನೆ ಎಂದರು.ಬಿಜೆಪಿಯಲ್ಲಿ ಯಾವುದೇ ಭಿನ್ನಾಭಿಪ್ರಾಯವಾಗಲೀ, ಗೊಂದಲಗಳಾಗಲೀ ಇಲ್ಲ. ಮಾಧ್ಯಮ ಸ್ನೇಹಿತರು ಯಾವುದನ್ನು ಸೃಷ್ಟಿ ಮಾಡಲು ಹೋಗಬೇಕಿಲ್ಲ. ನಾವೆಲ್ಲ ಒಂದಾಗಿದ್ದೇವೆ. ನಮ್ಮದು ಒಂದೇ ಅಜೆಂಡಾ. ಅದು ಮುಂದೆ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರೋದು ಎಂದು ಹೇಳಿದರು.

ಕೊಪ್ಪಳದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಆ ಕಾರ್ಯಕ್ರಮಕ್ಕೆ ಹೋಗುತ್ತಿದ್ದೇನೆ. ಬೇರೆ ಕಾರಣಕ್ಕೆ ಹೋಗಲಾಗುತ್ತಿರಲಿಲ್ಲ. ಆದರೆ ನಡ್ಡಾ ಅವರು ಭಾಗವಹಿಸುತ್ತಿರುವುದರಿಂದ ಹೋಗಲೇಬೇಕಾದ ಪರಿಸ್ಥಿತಿ ಬಂದಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂಡ ಕಾರ್ಯಕ್ರಮಕ್ಕೆ ಬರುತ್ತಿದ್ದಾರೆ. ಇಬ್ಬರೂ ಒಟ್ಟಾಗಿ ಕಾರ್ಯಕ್ರಮದಲ್ಲಿ ಸ್ವಾಗತಿಸುತ್ತೇವೆ. ನಮ್ಮಲ್ಲಿ ಭಿನ್ನಾಭಿಪ್ರಾಯ, ಗೊಂದಲ ಇಲ್ಲ ಎಂದರು.

ನಡ್ಡಾ ನೇತೃತ್ವದಲ್ಲಿ ರಾಜ್ಯದಲ್ಲಿ ಹೆಚ್ಚಿನ ಕಾರ್ಯಕ್ರಮಗಳು ನಡೆಯುತ್ತವೆ. ಇದೆಲ್ಲದರ ಪರಿಣಾಮ ಪಕ್ಷ ಬಹುಮತದೊಂದಿಗೆ ಅಧಿಕಾರಕ್ಕೆ ಬರುತ್ತದೆ ಎಂದರು.ಕೊಪ್ಪಳ ಕಾರ್ಯಕ್ರಮಕ್ಕೆ ಕೊನೇ ಘಳಿಗೆಯಲ್ಲಿ ನನಗೆ ಆಹ್ವಾನ ಬಂದಿಲ್ಲ. ನಾನು ಹೋಗುವ ಸ್ಥಿತಿಯಲ್ಲಿರಲಿಲ್ಲ. ಇದಕ್ಕೆ ನಾನು ಹೋಗದಿರಲು ನಿರ್ಧರಿಸಿದ್ದೆ. ನಡ್ಡಾ ಬರ್ತಿದ್ದಾರೆ ಅದಕ್ಕೆ ಹೋಗುತ್ತಿದ್ದೇನೆ ಎಂದರು.

ಮಾಜಿ ಸಚಿವ ಜನಾರ್ದನರೆಡ್ಡಿ ಅವರು ನನ್ನನ್ನು ಭೇಟಿಯಾಗಿದ್ದರು. ನನ್ನೊಂದಿಗೆ ಮಾತನಾಡಿದ್ದಾರೆ. ನಮ್ಮ ಜತೆಗೇ ಇರುತ್ತಾರೆ. ಅವರನ್ನೂ ನಿರ್ಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ. ಅವರ ಮೇಲೆ ಸಣ್ಣ–ಪುಟ್ಟ ಪ್ರಕರಣಗಳಿದ್ದು, ಇತ್ಯರ್ಥವಾದ ಮೇಲೆ ಬಿಜೆಪಿಗೆ ಬರುತ್ತಾರೆ. ಗಂಗಾವತಿಯಲ್ಲಿ ಅವರು ಮನೆ ಮಾಡಿರುವುದು ಗೊಂದಲ ಸೃಷ್ಟಿಯಾಗಿದೆ. ಪಕ್ಷಕ್ಕೆ ಬಂದ ಮೇಲೆ ಸ್ಪರ್ಧೆ ಎಲ್ಲಿ ಎಂಬ ಬಗ್ಗೆ ತೀರ್ಮಾನವಾಗುತ್ತದೆ. ರೆಡ್ಡಿ ಅವರ ಪರವಾಗಿ ಪಕ್ಷದ ಮುಖಂಡರು ಇದ್ದಾರೆ. ಮುಂದೆ ಯಾವುದೇ ಗೊಂದಲವಿಲ್ಲದೆ ಅವರನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳುತ್ತದೆ ಎಂದು ಯಡಿಯೂರಪ್ಪ ಹೇಳಿದರು.

ನಮ್ಮದು ತಂದೆ-ಮಗನ ಸಂಬಂಧ

ಕೊಪ್ಪಳ, ಡಿ.15– ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ನನ್ನದು ತಂದೆ–ಮಗನ ಸಂಬಂಧ, ಹೀಗಾಗಿ ಯಾವುದೇ ಕಾರಣಕ್ಕೂ ಯಾವುದೇ ಸಂದರ್ಭದಲ್ಲೂ ನನ್ನ ಮತ್ತು ಅವರ ನಡುವೆ ಭಿನ್ನಾಭಿಪ್ರಾಯ ಬರಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ ಸಂದರ್ಭದಲ್ಲಿ ಹೇಳಿದರು. ಕೊಪ್ಪಳದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ಹಾಗೂ ನನ್ನ ನಡುವೆ ಭಿನ್ನಾಭಿಪ್ರಾಯ ಮೂಡಿದೆ ಎಂದು ಯಾರು ಊಹೆ ಮಾಡುತ್ತಿದ್ದಾರೋ ಅವರಿಗೆ ನಿರಾಸೆಯಾಗುತ್ತದೆ ಎಂದರು. ಪಕ್ಷದಲ್ಲಿ ಯಡಿಯೂರಪ್ಪರವರನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂಬುದು ಶುದ್ಧ ಸುಳ್ಳು, ಯಡಿಯೂರಪ್ಪ ಅವರು ಪಕ್ಷದ ಸರ್ವೋಚ್ಚ ನಾಯಕರು. ಅವರನ್ನು ಮುಂದಿಟ್ಟುಕೊಂಡೇ ನಾವು ಎಲ್ಲ ಕೆಲಸ, ಕಾರ್ಯ, ಕಾರ್ಯಕ್ರಮ ಎಲ್ಲವನ್ನೂ ಮಾಡುತ್ತಿದ್ದೇವೆ. ಅವರ ಆಶೀರ್ವಾದ ನಮಗಿದೆ ಎಂದರು.ಬಿಜೆಪಿ ಮನೆಯೊಂದು ಮೂರು ಬಾಗಿಲು ಎಂಬ ಮಾಜಿ ಸಚಿವ ಪ್ರಿಯಾಂಕ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಾಂಗ್ರೆಸ್ ಮನೆಗೆ ಬಾಗಿಲು, ಕಿಟಕಿ ಯಾವುದೂ ಇಲ್ಲ. ಎಲ್ಲ ಬಟಾಬಯಲು ಎಂದು ವ್ಯಂಗ್ಯವಾಡಿದರು.



ಅಳಿವಿನಂಚಿನಲ್ಲಿರುವ 'ಕಾಡುಪಾಪ'ಗಳ ರಕ್ಷಣೆ

ಬೆಂಗಳೂರಿಗೆ ಸಾಗಿಸುತ್ತಿದ್ದ ಇಬ್ಬರು ಬೇಟೆಗಾರರ ಬಂಧನ

● ವಾಮಾಚಾರಕ್ಕೆ ಕಾಡುಪಾಪಗಳ ಬಳಕೆ ● ಸಿಐಡಿ ಅರಣ್ಯ ಸಂಚಾರಿ ಪೊಲೀಸರ ಕಾರ್ಯಾಚರಣೆ

ಕೊಳ್ಳೇಗಾಲ, ಡಿ.15– ಬೆಂಗಳೂರಿಗೆ ಮಾರಾಟ ಮಾಡಲು ಕೊಂಡೊಯ್ಯುತ್ತಿದ್ದ ಅಳಿವಿನಂಚಿನಲ್ಲಿರುವ ಎರಡು ಕಾಡುಪಾಪ, ಬೇಟೆಗಾರರಿಂದ ರಕ್ಷಿಸುವಲ್ಲಿ ಕೊಳ್ಳೇಗಾಲ ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಯಶಸ್ವಿಯಾಗಿದ್ದಾರೆ.

ಮಹದೇಶ್ವರ ಬೆಟ್ಟದ ಜಡೇಶೆಟ್ಟಿ ಪುತ್ರ ವೀರಭದ್ರ (58) ಮತ್ತು ಮೈಸೂರು ತಾಲೂಕು ದೊಡ್ಡಕಾನ್ಯ ಗ್ರಾಮದ ನಿವಾಸಿ ಪುಟ್ಟಸ್ವಾಮಪ್ಪರ ಪುತ್ರ ರಾಜುವನ್ನು ಈ ಸಂಬಂಧ ಬಂಧಿಸಲಾಗಿದ್ದು, ▶ 8ನೇ ಪುಟಕ್ಕೆ



ಮುಖ್ಯ ಶಿಕ್ಷಕನ ನೀಚ ಬುದ್ಧಿಯಿಂದ ಕೆರಳಿದ ವಿದ್ಯಾರ್ಥಿನಿಯರು: ಗುರುವಿಗೆ ತಕ್ಕ 'ಪಾಠ'

● ಪಾಂಡವಪುರ ತಾಲೂಕು ಕಟ್ಟೇರಿ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕನಿಂದ ಲೈಂಗಿಕ ಕಿರುಕುಳ ● ಕೊಠಡಿಯಲ್ಲಿ ಕೂಡಿ ಹಾಕಿ ದೊಣ್ಣೆ, ಪೊರಕೆ ಸೇವೆ ● ಶಿಕ್ಷಕನ ವಿರುದ್ಧ ಪೋಕ್ಸೋ ಸೇರಿದಂತೆ ವಿವಿಧ ಸೆಕ್ಷನ್‌ನಡಿ ಕೇಸ್ ದಾಖಲಿಸಿ ಬಂಧನ

ಪಾಂಡವಪುರ/ಶ್ರೀರಂಗಪಟ್ಟಣ, ಡಿ.15– ತಮಗೆ ಪಾಠ ಹೇಳಬೇಕಾದ ಶಿಕ್ಷಕ ಲೈಂಗಿಕ ಕಿರುಕುಳ ನೀಡುತ್ತಿದ್ದರಿಂದ ಕೆರಳಿದ ವಿದ್ಯಾರ್ಥಿನಿಯರು ಆತನನ್ನು ಶಾಲೆಯ ಆಫೀಸ್ ರೂಂನಲ್ಲಿ ಕೂಡಿ ಹಾಕಿ ಧರ್ಮದೇಟು ನೀಡುವ ಮೂಲಕ ಮೇಷ್ಟ್ರಿಗೆ ತಾವೇ 'ಪಾಠ' ಕಲಿಸಿದ್ದಾರೆ. ಕೊನೆಗೆ ಗ್ರಾಮಸ್ಥರು ಧಾವಿಸಿ, ಹಾಸ್ಟೆಲ್ ವಾರ್ಡನ್ ಸಹಾಯದೊಂದಿಗೆ ಶಿಕ್ಷಕನನ್ನು ವಿದ್ಯಾರ್ಥಿನಿಯರಿಂದ ಬಿಡಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಪಾಂಡವಪುರ ತಾಲೂಕು ಕಟ್ಟೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಚಿನ್ಮಯಾನಂದ(52) ವಿದ್ಯಾರ್ಥಿನಿಯರಿಂದ ಗೂಸಾ ತಿಂದು ಜೈಲು ಪಾಲಾದವನಾಗಿದ್ದು, ಕೆ.ಆರ್.ಎಸ್. ಠಾಣೆ ಪೊಲೀಸರು ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ಈತನನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಮುಖ್ಯ ಶಿಕ್ಷಕ ಚಿನ್ಮಯಾನಂದ ಮೈಸೂರಿನ ಜೆ.ಪಿ.ನಗರ ನಿವಾಸಿಯಾಗಿದ್ದು, ಶಾಲಾ ಅವಧಿ ಮುಗಿದ ▶ 8ನೇ ಪುಟಕ್ಕೆ



ಬಾಲ ಬಿಚ್ಚಿದ ರೌಡಿಶೀಟರ್ ಆರ್‌ಎಕ್ಸ್ ಮನು ಮೈಸೂರಿಂದ ಮಂಡ್ಯಕ್ಕೆ ಗಡಿಪಾರು

ತಿಂಗಳ ಕಾಲ ಮೈಸೂರು ನಗರ ಪ್ರವೇಶ ನಿಷಿದ್ಧ; ಬಂದರೆ ಜೈಲಿಗಟ್ಟುವ ಎಚ್ಚರಿಕೆ

ಮೈಸೂರು, ಡಿ.15(ಆರ್‌ಕೆ)–ಮೈಸೂರು ನಗರದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಮಂಗಳವಾರವಷ್ಟೇ ಹೆಬ್ಬಾಳ ಠಾಣೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ರೌಡಿ ಪರೇಡ್ ನಡೆಸಿದ ಬೆನ್ನಲ್ಲೇ ಕುಖ್ಯಾತ ರೌಡಿಶೀಟರ್ ಓರ್ವನನ್ನು ಗಡಿಪಾರು ಮಾಡುವ ಮೂಲಕ ಪೊಲೀಸ್ ಇಲಾಖೆ ರೌಡಿಗಳಿಗೆ ಎಚ್ಚರಿಕೆ ಸಂದೇಶ ನೀಡಿದೆ. ಮೈಸೂರಿನ ಹಲವಾರು ಠಾಣೆಗಳ ವ್ಯಾಪ್ತಿಯಲ್ಲಿ ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವ ರೌಡಿಶೀಟರ್ ಮನೋಜ್ ಕುಮಾರ್ ಅಲಿಯಾಸ್ ಆರ್.ಎಕ್ಸ್.ಮನು ಎಂಬಾತನನ್ನು ಒಂದು ತಿಂಗಳ ಅವಧಿಗೆ ಮಂಡ್ಯ ಜಿಲ್ಲೆಗೆ ಗಡಿಪಾರು ಮಾಡಿ ಮೈಸೂರು ನಗರ ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿಗಳೂ ಆದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಪ್ರದೀಪ್ ಗುಂಟಿ ಅವರು ಆದೇಶ ಹೊರಡಿಸಿದ್ದಾರೆ. ಈ ಆದೇಶವನ್ನು ▶ 8ನೇ ಪುಟಕ್ಕೆ



ಮೈಸೂರು ಮಹಾನಗರ ಪಾಲಿಕೆಯಲ್ಲಿ ಮಹತ್ವದ ನಿರ್ಣಯ

ಇನ್ನು ಮುಂದೆ ಕಂಬಗಳಿಗೆ ಬದಲು ಅಂಡರ್‌ಗ್ರೌಂಡ್‌ನಲ್ಲಿ ಕೇಬಲ್ ಅಳವಡಿಕೆ

ಜ.15ರೊಳಗೆ ಅನುಮತಿ ಪಡೆದು ಎರಡು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅವಕಾಶ



ಮೈಸೂರು, ಡಿ.15(ಎಸ್‌ಬಿಡಿ)– ಮೈಸೂರು ನಗರದ ಅಂದಗೆಡಿಸುವುದರ ಜೊತೆಗೆ ಸಾರ್ವಜನಿಕರಿಗೆ ಕಂಟಕವಾಗುತ್ತಿರುವ ಕೇಬಲ್‌ಗಳ ತೆರವಿಗೆ ಮೈಸೂರು ಮಹಾನಗರ ಪಾಲಿಕೆ ಗಡುವು ವಿಧಿಸಿದೆ.

ನಗರ ಪಾಲಿಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಗುರುವಾರ ನಡೆದ ಮುಂದುವರೆದ ಕೌನ್ಸಿಲ್ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಗಿದೆ.

ಅಕ್ರಮವಾಗಿ ವಿದ್ಯುತ್ ಕಂಬಗಳಲ್ಲಿ ಅಳವಡಿಸಲಾಗಿರುವ ಟಿವಿ, ಇಂಟರ್‌ನೆಟ್ ಇನ್ನಿತರ ಕೇಬಲ್‌ಗಳನ್ನು ಭೂಮಿ ಒಳಗೆಯೇ (ಅಂಡರ್‌ಗ್ರೌಂಡ್–ಯುಜಿ) ಅಳವಡಿಸಲು ಮುಂದಿನ ಜನವರಿ 15ರೊಳಗೆ ಪಾಲಿಕೆಯಿಂದ ಅನುಮತಿ ಪಡೆದು, ನಂತರದ 2 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು. ಇಲ್ಲವಾದರೆ ಮುಲಾಜಿಲ್ಲದೆ ಕೇಬಲ್‌ಗಳನ್ನು ತೆರವುಗೊಳಿಸಲು ನಿರ್ಧರಿಸಲಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ವಿದ್ಯುತ್ ಕಂಬಗಳಲ್ಲಿ ಅನಧಿಕೃತವಾಗಿ ಅಳವಡಿಸಲಾಗಿರುವ ಓವರ್ ಹೆಡ್ ಕೇಬಲ್‌ಗಳಿಗೆ ಮೀಟರ್‌ಗೆ 150 ರೂ.ಗಳಂತೆ ದಂಡ ವಿಧಿಸಿ ಸಕ್ರಮಗೊಳಿಸುವುದರ ಜೊತೆಗೆ 50 ರೂ. ವಾರ್ಷಿಕ ಶುಲ್ಕ ನಿಗದಿಪಡಿಸುವುದು ಹಾಗೂ ಹೊಸದಾಗಿ ಕೇಬಲ್ ಅಳವಡಿಸುವ ಕಂಪನಿಗಳು ಕಡ್ಡಾಯವಾಗಿ ಪಾಲಿಕೆ ಅನುಮತಿ ಪಡೆದು ನಿಯಮಾನುಸಾರ ವಾರ್ಷಿಕ ಶುಲ್ಕ ಪಾವತಿಸುವ ಸಂಬಂಧ ಇಂದಿನ ಕೌನ್ಸಿಲ್ ಸಭೆಯಲ್ಲಿ ವಿಷಯ ಮಂಡಿಸಲಾಯಿತು. ಆದರೆ ಇದಕ್ಕೆ ಸರ್ವಪಕ್ಷಗಳ ಸದಸ್ಯರೂ ಆಕ್ಷೇಪ ವ್ಯಕ್ತಪಡಿಸಿದರು.



ಮಾಜಿ ಮೇಯರ್ ಅಯೂಬ್ ಖಾನ್, ಕಂಬಗಳಲ್ಲಿ ವಿದ್ಯುತ್ ಲೈನ್ ಇರುವುದನ್ನು ಸೆಸ್ಕ್ ಅಧಿಕಾರಿಗಳೇ ಮರೆತಿದ್ದಾರೆ. ಶಿಲ್ಪಾನಾಗ್ ಅವರು ಆಯುಕ್ತರಾಗಿದ್ದಾಗ ಸಭೆ ನಡೆಸಿ, ಕಂಬಗಳಲ್ಲಿ ಕೇಬಲ್ ಅಳವಡಿಕೆಗೆ ಅವಕಾಶ ನೀಡಿದರೆ ಕ್ರಿಮಿನಲ್ ಕೇಸ್ ದಾಖಲಿಸುವುದಾಗಿ ಸೆಸ್ಕ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದರು. ಇತ್ತೀಚೆಗೆ ಮತ್ತೆ ಕೇಬಲ್‌ಗಳು ಹೆಚ್ಚಾಗಿವೆ. ಈ ಬಗ್ಗೆ ಸರ್ವೆ ನಡೆಸುವುದು ಕಷ್ಟಸಾಧ್ಯ. ಹಾಗಾಗಿ ಎಲ್ಲವನ್ನೂ ತೆರವುಗೊಳಿಸಿ ನಂತರ ಮುಂದಿನ ಕ್ರಮ ವಹಿಸಿ ಎಂದರು. ಬಿಜೆಪಿ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, ವಿದ್ಯುತ್ ಕಂಬಗಳಲ್ಲಿ ಹಲವು ಕೇಬಲ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ನಗರದ ಸೌಂದರ್ಯ ಹಾಳಾಗಿದೆ ಎಂದರು. ಜೆಡಿಎಸ್ ಸದಸ್ಯ ರಮೇಶ್, ಓವರ್‌ಹೆಡ್ ಕೇಬಲ್‌ಗಳಿಂದ ನಗರದ ಸೌಂದರ್ಯ ಹಾಳಾಗುತ್ತದೆ. ಅಲ್ಲದೆ ಕೇಬಲ್‌ಗಳು ತುಂಡಾಗಿ ಸಾರ್ವಜನಿಕರಿಗೂ ಅಪಾಯವಾಗುತ್ತದೆ ಎಂಬ ಕಾರಣದಿಂದ ವಿದ್ಯುತ್ ಸಂಪರ್ಕವನ್ನೂ ಯುಜಿ ಕೇಬಲ್ ಮೂಲಕ ನೀಡುವ ಕಾರ್ಯ ನಡೆದಿರುವಾಗ ಕಂಬಗಳಲ್ಲಿ ಕೇಬಲ್ ಅಳವಡಿಸಲು ಅನುಮತಿ ನೀಡುವ ಕಾರ್ಯಸೂಚಿಯನ್ನು ಏಕೆ ತಂದಿದ್ದೀರಿ ಎಂದು ಪ್ರಶ್ನಿಸಿದರು. ಆರಿಫ್ ಹುಸೇನ್, ಸತ್ಯರಾಜ್ ಸೇರಿದಂತೆ ಹಲವು ಸದಸ್ಯರು ಮೊದಲು ಅನಧಿಕೃತ ಕೇಬಲ್‌ಗಳನ್ನು ತೆರವು ಮಾಡಿಸಿ ಎಂದರೆ, ಏಕಾಏಕಿ ತೆರವು ಮಾಡಿದರೆ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರಿಂದ ಗಡುವು ನೀಡುವಂತೆ ಸದಸ್ಯ ಎಂ.ಸಿ.ರಮೇಶ್, ಪ್ರೇಮಾ ಶಂಕರೇಗೌಡ, ಎಸ್‌ಬಿಎಂ ಮಂಜು ಮತ್ತಿತರರು ಅಭಿಪ್ರಾಯಿಸಿದರು.

ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಮಾತನಾಡಿ, ತಕ್ಷಣದಲ್ಲೇ ಕೇಬಲ್ ತೆರವು ಮಾಡಲು ಆಗುವುದಿಲ್ಲ. ಯುಜಿ ಕೇಬಲ್ ಆಗಿ ▶ 8ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 16 ಡಿಸೆಂಬರ್ 2022

ಜಿಲ್ಲಾ ಬಿಜೆಪಿ ಕಚೇರಿ ನಿರ್ಮಾಣಕ್ಕೆ ಭೂಮಿಪೂಜೆ

ಕೊಡಗು ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಬಿಜೆಪಿ ಪರ ಒಲವು

ಮಡಿಕೇರಿ, ಡಿ.15– ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗು ಜಿಲ್ಲೆಯಲ್ಲಿ ಬಿಜೆಪಿ ಪರ ಹಲವು ವರ್ಷಗಳಿಂದ ಜನರು ಒಲವು ತೋರುತ್ತಿರುವುದು ಕಂಡು ಬರುತ್ತಿದೆ ಎಂದು ರಾಜ್ಯ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ರಾಜೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.



ನಗರದ ಓಂಕಾರೇಶ್ವರ ರಸ್ತೆಯ ಸಮೀಪ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಜಿಲ್ಲಾ ಬಿಜೆಪಿಯ ನೂತನ ಕಾರ್ಯಾಲಯಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ರಾಜೇಶ್, ಬಿಜೆಪಿ ಪಕ್ಷದ ಕಾರ್ಯಾಲಯಗಳು ಸಮಸ್ಯೆ ಹೊತ್ತು ಬರುವ ಜನ ಸಾಮಾನ್ಯರಿಗೆ ಸ್ಪಂದಿಸುವ ರೀತಿಯಲ್ಲಿ ಸೇವೆ ನೀಡಬೇಕು ಎಂದು ಹೇಳಿದರು.

ಈ ಕಾರ್ಯಾಲಯಗಳು ಕೇವಲ ಕಲ್ಲಿನ ಕಟ್ಟಡಗಳಾಗದೇ ಜನರ ಭಾವನೆಗಳ ಆಲಯವಾಗಬೇಕು. ಆ ಮೂಲಕ ಸಮಾಜಕ್ಕೆ ಒಂದು ಪ್ರೇರಣಾ ಶಕ್ತಿಯಾಗಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಜನರ ಪಾಲ್ಗೊಳ್ಳುವಿಕೆಯ ಮೂಲಕ ಪಕ್ಷದ ನೂತನ ಕಟ್ಟಡ ನಿರ್ಮಾಣವಾಗಬೇಕು ಎಂದು ಇದೇ ಸಂದರ್ಭ ಸಲಹೆ ನೀಡಿದರು. ಮುಂದಿನ ಒಂದು ವರ್ಷದ ಒಳಗಾಗಿ ಈ ನೂತನ ಕಾರ್ಯಾಲಯ ನಿರ್ಮಾಣವಾಗಲಿ ಎಂದು ಆಶಿಸಿದ ರಾಜೇಶ್, ಕಾರ್ಯಕರ್ತರು ಆ ನಿಟ್ಟಿನಲ್ಲಿ ಕಾರ್ಯನಿರತರಾಗುವಂತೆ ಕರೆ ನೀಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಮಾತನಾಡಿ, ಜಿಲ್ಲೆಯ ಹಿರಿಯ ಮುಖಂಡರು 1996ರಲ್ಲಿಯೇ ಪಕ್ಷದ ನೂತನ ಕಟ್ಟಡ ನಿರ್ಮಾಣದ ಕನಸು ಹೊತ್ತಿದ್ದರು. ಆದರೆ ಇದೀಗ ಆ ಫಳಿಗೆ ಕೂಡಿ ಬಂದಿದೆ ಎಂದು ವಿವರಿಸಿದರು. ಮುಂದಿನ ಲೋಕಸಭಾ ಚುನಾವಣೆಯ ಸಂದರ್ಭ ಈ ನೂತನ ಕಾರ್ಯಾಲಯದಲ್ಲಿ ಚುನಾವಣಾ ಕೆಲಸಗಳನ್ನು ನಿರ್ವಹಿಸುವ ವಿಶ್ವಾಸವಿದೆ. ಮೈಸೂರು ಮೂಲದ ಗುತ್ತಿಗೆದಾರರು ಕಾರ್ಯಾಲಯದ ಕಾಮಗಾರಿ ವಹಿಸಿಕೊಂಡಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ ಎಂದು ಮಾಹಿತಿ ನೀಡಿದರು. ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ.ಭಾರತೀಶ್ ಮಾತನಾಡಿದರು.

ಶಿಲಾನ್ಯಾಸ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ವರ್ಚುವಲ್ ಮೂಲಕ ಕೊಡಗು ಬಿಜೆಪಿ ನೂತನ ಜಿಲ್ಲಾ ಕಾರ್ಯಾಲಯಕ್ಕೆ ಶಿಲಾನ್ಯಾಸ ನೆರವೇರಿಸಿದರು. ಕೊಪ್ಪಳಕ್ಕೆ ಆಗಮಿಸಿದ್ದ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ, ಕೊಡಗು, ಶಿರಸಿ, ವಿಜಯನಗರ ಜಿಲ್ಲೆಗಳ ಕಾರ್ಯಾಲಯಗಳಿಗೆ ಶಿಲಾನ್ಯಾಸ ನೆರವೇರಿಸಿ ಶುಭ ಹಾರೈಸಿದರು. ಇದರೊಂದಿಗೆ ರಾಜ್ಯದ 10 ಕಡೆಗಳಲ್ಲಿ ಈಗಾಗಲೇ ನಿರ್ಮಾಣವಾಗಿರುವ ನೂತನ ಕಾರ್ಯಾಲಯಗಳನ್ನು ಉದ್ಘಾಟಿಸಿದರು. ಶಿಲಾನ್ಯಾಸದ ಸ್ಥಳದಲ್ಲಿ ಬೃಹತ್ ಎಲ್.ಇ.ಡಿ. ಪರದೆಯನ್ನು ಅಳವಡಿಸುವ ಮೂಲಕ ಎಲ್ಲಾ ಕಾರ್ಯಾಲಯಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ ಕಾರ್ಯಗಳನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್, ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ವಿಧಾನ ಪರಿಷತ್ ಸದಸ್ಯ ಸುನಿಲ್ ಸುಬ್ರಮಣಿ, ಎಸ್.ಜಿ. ಮೇದಪ್ಪ, ಪಶ್ಚಿಮ ಘಟ್ಟ ಸಂರಕ್ಷಣಾ ಕಾರ್ಯಪಡೆಯ ಮಾಜೀ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಮಂಗಳೂರು ವಿಭಾಗೀಯ ಪ್ರಭಾರಿ ಉಸ್ತುವಾರಿ ಉದಯ್ ಕುಮಾರ್ ಶೆಟ್ಟಿ, ಜಿ.ಪಂ. ಮಾಜೀ ಅಧ್ಯಕ್ಷ ಹರೀಶ್, ಹಿರಿಯರ ಪ್ರಕೋಷ್ಟದ ಕೋಡಿ ಪೊನ್ನಪ್ಪ, ಹಿರಿಯ ಮುಖಂಡರಾದ ಡಾ. ಎಂ.ಜಿ. ಪಾಟ್ಕರ್, ಎಂ.ಬಿ. ದೇವಯ್ಯ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್ ಸೇರಿದಂತೆ ಪಕ್ಷ ಪ್ರಮುಖರು ಹಾಜರಿದ್ದರು.

ಅನಾರೋಗ್ಯದಿಂದ ವಿದ್ಯಾರ್ಥಿ ಸಾವು



ಗೋಣಿಕೊಪ್ಪ, ಡಿ.15– ಅನಾರೋಗ್ಯದಿಂದ ಬಳಲುತ್ತಿದ್ದ ಬಾಳೆಲೆ ವಿಜಯಲಕ್ಷ್ಮಿ ಪ್ರೌಢಶಾಲೆ 10ನೇ ತರಗತಿ ವಿದ್ಯಾರ್ಥಿ, ಬಾಳೆಲೆ ನಿವಾಸಿ ಸಿದ್ದ ಮತ್ತು ಉಮ್ಮು ದಂಪತಿ ಪುತ್ರ ಸಂಜು (16) ಗುರುವಾರ ನಿಧನರಾದರು.

ಗಂಟಲು ಬೇನೆಯಿಂದ 2 ತಿಂಗಳಿನಿಂದ ಚಿಕಿತ್ಸೆಗೆ ಒಳಗಾಗಿದ್ದ ಸಂಜು, ಚಿಕಿತ್ಸೆ ಫಲಿಸದೆ ಗುರುವಾರ ಮನೆಯಲ್ಲಿ ನಿಧನರಾದರು. ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು. ಬಾಳೆಲೆ ಸೆಂಟರ್ ಎಜುಕೇಷನ್ ಸೊಸೈಟಿ ಅಧ್ಯಕ್ಷ ಅಳಮೇಂಗಡ ಬೋಸ್ ಮಂದಣ್ಣ, ಕಾರ್ಯದರ್ಶಿ ಪೋಡಮಾಡ ಮೋಹನ್, ನಿರ್ದೇಶಕ ಅಡ್ಡೆಂಗಡ ಸಜನ್, ಪ್ರಾಂಶುಪಾಲ ಎನ್. ಕೆ. ಪ್ರಭು ಸಂತಾಪ ವ್ಯಕ್ತಪಡಿಸಿದರು.

ಇಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಮಡಿಕೇರಿ, ಡಿ.15– ಕೊಡಗು ಜಿಲ್ಲಾಡಳಿತ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ವತಿಯಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವು ಡಿ.16 ರಂದು ಬೆಳಗ್ಗೆ 11.30 ಗಂಟೆಗೆ ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಡೆಯಲಿದೆ.

ಪುರಸಭೆ ಮುಂದೆ ನಾಗರಿಕ ಸಮಿತಿ, ಕರ್ನಾಟಕ ರಕ್ಷಣಾ ವೇದಿಕೆ ಪ್ರತಿಭಟನೆ



ವಿರಾಜಪೇಟೆ, ಡಿ.15– ವಿರಾಜಪೇಟೆ ಪುರಸಭೆ ವ್ಯಾಪ್ತಿಯ ಹದಗೆಟ್ಟ ರಸ್ತೆಗಳನ್ನು ದುರಸ್ತಿಪಡಿಸಬೇಕು, ಕುಡಿಯುವ ನೀರಿನ ಸಮಸ್ಯೆ ಸರಿಪಡಿಸಬೇಕು, ನಗರದ ನೈರ್ಮಲ್ಯ ಕಾಪಾಡಬೇಕು, ಜೊತೆಗೆ ಸರಕಾರಿ ಭೂಮಿ ಕಬಳಿಕೆ ತಡೆಯಬೇಕು ಎಂದು ಆಗ್ರಹಿಸಿ ನಾಗರಿಕ ಸಮಿತಿ ಮತ್ತು ಕರ್ನಾಟಕ ರಕ್ಷಣಾ ವೇದಿಕೆ(ಶಿವರಾಮೇಗೌಡ ಬಣ)ಕಾರ್ಯಕರ್ತರು ಪುರಸಭಾ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ನಾಗರಿಕ ಸಮಿತಿ ಸಂಚಾಲಕ ಡಾ. ಐ.ಆರ್.ದುರ್ಗಾಪ್ರಸಾದ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ, ಪುರಸಭಾ ವ್ಯಾಪ್ತಿಯ ರಸ್ತೆಗಳನ್ನು ಕೂಡಲೇ ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಸಂಚಾರ ಯೋಗ್ಯವನ್ನಾಗಿಸಬೇಕು, ಪುರಸಭೆ ವ್ಯಾಪ್ತಿಯಲ್ಲಿ ಸರ್ಕಾರದ ಭೂಮಿ ಪ್ರಭಾವಿಗಳ ಪಾಲಾಗಿದ್ದು, ಅದನ್ನು ವಾಪಸ್ ಪಡೆದು ಬಡ ಜನರಿಗೆ ನೀಡುವಂತಾಗಬೇಕು. ಕುಡಿಯುವ ನೀರಿನ ಯೋಜನೆಯನ್ನು ಪಾರದರ್ಶಕವಾಗಿ ಕಾರ್ಯಗತಗೊಳಿಸಬೇಕು, ನೈರ್ಮಲ್ಯದ ದೃಷ್ಟಿಯಿಂದ ಕಸ ವಿಲೇವಾರಿ ವಾಹನಗಳನ್ನು ಇನ್ನಷ್ಟು ಕಾರ್ಯಕ್ಷಮಗೊಳಿಸಬೇಕು ಆಗ್ರಹಿಸಿದರಲ್ಲದೆ, ಇದೇ ವೇಳೆ ಮನವಿ ಪತ್ರ ಕೂಡ ಸಲ್ಲಿಸಿದರು.

ಸಮಿತಿಯ ಸಹ ಸಂಚಾಲಕ, ವಕೀಲ ಸೋಮ ಲೋಕನಾಥ್ ಮಾತನಾಡಿ ನಗರದಲ್ಲಿ ಹೈ ಮಾಸ್ಕ್ ದೀಪ ಅಳವಡಿಸಲಾಗಿದ್ದರೂ ಒಂದು ದೀಪವು ಬೆಳಕು ನೀಡುತ್ತಿಲ್ಲ. ಪುರಸಭಾ ಅಧಿಕಾರಿಗಳು ತಮ್ಮ ಬೇಡಿಕೆಗಳಿಗೆ ಸ್ಪಂದಿಸದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ಸಂಘ ಸಂಸ್ಥೆ ಹಾಗೂ ಸಾರ್ವಜನಿಕರ ಸಹಕಾರದೊಂದಿಗೆ ಇನ್ನಷ್ಟು ಹೆಚ್ಚಿನ ಹೋರಾಟಗಳನ್ನು ನಡೆಸುವುದಾಗಿ ಎಚ್ಚರಿಸಿದರು.

ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ಅನೀಲ್ ಕುಮಾರ್, ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಜಿಲ್ಲಾ ಅಧ್ಯಕ್ಷ ಟಿ.ಕೆ.ಬಷೀರ್, ಸಮಿತಿಯ ಶರೀಫ್, ರಕ್ಷಣಾ ವೇದಿಕೆಯ ಉಪಾಧ್ಯಕ್ಷ ಸಂತೋಷ್, ಖಜಾಂಚಿ ತ್ರೇಜ್, ಹೋಬಳಿ ಅಧ್ಯಕ್ಷ ಜುನೈದ್ ಮತ್ತು ಸದಸ್ಯರುಗಳು ಭಾಗವಹಿಸಿದ್ದರು.

'ನಾಡ ಪೆದ ಆಶಾ' ಕೊಡವ ಚಿತ್ರಕ್ಕೆ 'ಬೆಸ್ಟ್ ಡೈರೆಕ್ಟರ್ ಅವಾರ್ಡ್'



ಮಡಿಕೇರಿ, ಡಿ.15– ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ 'ನಾಡ ಪೆದ ಆಶಾ' ಕೊಡವ ಚಲನಚಿತ್ರಕ್ಕೆ 'ಬೆಸ್ಟ್ ಡೈರೆಕ್ಟರ್ ಅವಾರ್ಡ್' ಲಭಿಸಿದೆ.

ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ನಡೆದ 2ನೇ ಕರ್ನಾಟಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ–2022ರಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಟಿಯರಾದ ಭವ್ಯ, ಪ್ರಿಯಾಂಕ ಉಪೇಂದ್ರ, ವಿಧಾನ ಪರಿಷತ್ ಮಾಜಿ ಸಭಾಪತಿ ಬಸವರಾಜು ಹೊರಟ್ಟಿ, ನವಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಡಾ.ಮಮ್ಮು ಗಟ್ಟಿ, ನಿರ್ಮಾಪಕ ಹಾಗೂ ನಿರ್ದೇಶಕ ಡಾ. ಕಲ್ಮೇಶ್ ಸೇರಿದಂತೆ ಹಲವು ಗಣ್ಯರ ಉಪಸ್ಥಿತಿಯಲ್ಲಿ 'ನಾಡ ಪೆದ ಆಶಾ' ಚಿತ್ರದ ನಿರ್ಮಾಪಕಿ ಈರಮಂಡ ಹರಿಣಿ ವಿಜಯ್ ಪ್ರಶಸ್ತಿಯನ್ನು ಸ್ವೀಕರಿಸಿದರು. ಒಟ್ಟು 185 ಚಿತ್ರಗಳಲ್ಲಿ ಫೀಚರ್ ಫಿಲಂ ವಿಭಾಗದಲ್ಲಿ 'ನಾಡ ಪೆದ ಆಶಾ' ಕೊಡವ ಚಲನಚಿತ್ರ ಆಯ್ಕೆಗೊಂಡಿತು.

ಇದೇ ಚಲನಚಿತ್ರೋತ್ಸವದಲ್ಲಿ ಕೊಡವ ಸಿನಿಮಾಗಳ ನಿರ್ಮಾಪಕಿಯಾಗಿರುವ ಕೊಟ್ಟುಕತ್ತಿರ ಯಶೋಧ ಪ್ರಕಾಶ್ ಅವರ ಚೊಚ್ಚಲ ನಿರ್ದೇಶನದ ಅಪ್ಪಟ ಮಹಿಳಾ ಕೌಟುಂಬಿಕ ಕಥಾಹಂದರದ 'ರಂಗ ಪ್ರವೇಶ' ಕನ್ನಡ ಚಲನಚಿತ್ರಕ್ಕೆ 'ಬೆಸ್ಟ್ ಫೀಮೆಲ್ ಡೈರೆಕ್ಟರ್' ಪ್ರಶಸ್ತಿ ಲಭಿಸಿತು. ಚಿತ್ರದ ಛಾಯಾಗ್ರಾಹಕ ಪಿವಿಆರ್ ಸ್ವಾಮಿ ಪ್ರಶಸ್ತಿ ಸ್ವೀಕರಿಸಿದರು.

ಪಂಚರತ್ನ ಯಾತ್ರೆಯ ಪೂರ್ವಭಾವಿ ಸಭೆ

ಮೇಲುಕೋಟೆ ಮಾದರಿ ಕ್ಷೇತ್ರವಾಗಿ ಅಭಿವೃದ್ಧಿ: ಶಾಸಕ ಪುಟ್ಟರಾಜು



ಪಾಂಡವಪುರ, ಡಿ. 15– ಮೇಲುಕೋಟೆ ಕ್ಷೇತ್ರದ ಶಾಸಕನಾದ ಬಳಿಕ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸಿದ್ದೇನೆ. ಕ್ಷೇತ್ರ ಅಭಿವೃದ್ಧಿ ವಿಚಾರದಲ್ಲಿ ಮತ್ತೊಬ್ಬರಿಂದ ಬುದ್ಧಿ ಹೇಳಿಸಿಕೊಳ್ಳುವ ಅಗತ್ಯವಿಲ್ಲ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ನಡೆದ ಪಂಚರತ್ನ ಯಾತ್ರೆಯ ಪೂರ್ವಭಾವಿ ಹಾಗೂ ಪುನೀತೋತ್ಸವ ಯಶಸ್ಸಿನ ಕೃತಜ್ಞತಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. 'ನಾನು 2004ರಲ್ಲಿ ಮೊದಲ ಬಾರಿಗೆ ಶಾಸಕನಾಗಿದ್ದ ಸಂದರ್ಭದಲ್ಲಿ ಕ್ಷೇತ್ರ ಹೇಗಿತ್ತು, ಇದೀಗ ಕ್ಷೇತ್ರ ಹೇಗಿದೆ ಎನ್ನುವುದನ್ನು ಕ್ಷೇತ್ರದ ಜನತೆ ಹೇಳುತ್ತಿದ್ದಾರೆ. ನಾನು ಶಾಸಕನಾದ ಬಳಿಕ ಸರಕಾರಗಳಿಂದ ನೂರಾರು ಕೋಟಿ ಅನುದಾನವನ್ನು ತಂದು ಜಿಲ್ಲೆಗೆ ಮಾದರಿ ಕ್ಷೇತ್ರವನ್ನಾಗಿ ಅಭಿವೃದ್ಧಿಪಡಿಸುವ ಕೆಲಸ ಮಾಡಿದ್ದೇನೆ' ಎಂದು ಹೇಳಿದರು.

ರಾಜ್ಯದಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ಯಾತ್ರೆಯನ್ನು ಹಮ್ಮಿಕೊಂಡು ಪ್ರಚಾರ ಆರಂಭಿಸಿದ್ದಾರೆ. ಅದರಂತೆ ಡಿ.24ಕ್ಕೆ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಪಂಚರತ್ನ ಯಾತ್ರೆಯೂ ಮೇಲುಕೋಟೆ ವಿಧಾನಸಭಾ ಕ್ಷೇತ್ರಕ್ಕೆ ಆಗಮಿಸುತ್ತಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪುನೀತೋತ್ಸವ ಕಾರ್ಯಕ್ರಮದಲ್ಲಿ ಶ್ರಮಿಸಿದ ಪಟ್ಟಣದ ಪೌರಕಾರ್ಮಿಕರನ್ನು ಶಾಸಕ ಸಿ.ಎಸ್.ಪುಟ್ಟರಾಜು ಅವರು ಅಭಿನಂದಿಸಿದರು.

ಸಭೆಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಪಂಚರತ್ನ ಮೇಲು ಕೋಟೆ ಉಸ್ತುವಾರಿ ಮಾಜಿ ಮೇಯರ್ ಲಿಂಗಪ್ಪ, ತಾಲೂಕು ಅಧ್ಯಕ್ಷ ಎಸ್.ಮಲ್ಲೇಶ್, ಒಕ್ಕಲಿಗರ ಸಂಘದ ಮಾಜಿ ಉಪಾಧ್ಯಕ್ಷ ಶಿವಣ್ಣ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್‌ಕುಮಾರ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಪುರಸಭೆ ಅಧ್ಯಕ್ಷೆ ಅರ್ಚನ ಚಂದ್ರು, ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ನಂಜೇ ಗೌಡ, ವೈರಮುಡಿಗೌಡ, ಲಿಂಗರಾಜು, ದ್ಯಾವಪ್ಪ ಸೇರಿದಂತೆ ಹಲವು ಹಾಜರಿದ್ದರು.

ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಸೂಚನೆ

ಚರ್ಮಗಂಟು ರೋಗಕ್ಕೆ ಅವಶ್ಯ ಔಷಧಿ ನೀಡಿ



ಮಂಡ್ಯ.ಡಿ.15– ರಾಸುಗಳಲ್ಲಿ ಕಂಡುಬರುತ್ತಿರುವ ಚರ್ಮಗಂಟು ರೋಗಕ್ಕೆ ಪಶುವೈದ್ಯಕೀಯ ಇಲಾಖೆ ಸಿಬ್ಬಂದಿ ಗ್ರಾಮವಾರು ಮನೆ ಮನೆಗೆ ಭೇಟಿ ನೀಡಿ ಅವಶ್ಯಕ ಔಷಧಿ ಹಾಗೂ ಲಸಿಕೆ ನೀಡುವಂತೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಗುರುವಾರ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚರ್ಮಗಂಟು ರೋಗ ಹೆಚ್ಚಿರುವ ಗ್ರಾಮಗಳನ್ನು ಪಟ್ಟಿಮಾಡಿ, ಅಂತಹ ಗ್ರಾಮದ ಕಡೆ ಹೆಚ್ಚಿನ ನಿಗಾವಹಿಸಿ ಎಂದರು.

ಮಿಮ್ಸ್ ಆಸ್ಪತ್ರೆಯಲ್ಲಿ ಹೆಚ್ಚಿನ ರೋಗಿಗಳಿಗೆ ವ್ಯವಸ್ಥೆ ಇದ್ದರೂ ಸಹ ಚಿಕಿತ್ಸೆ ನೀಡದೆ ಬೇರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುವಂತೆ ದೂರು ಕೇಳಿ ಬರುತ್ತಿದೆ. ಮಿಮ್ಸ್ ಆಸ್ಪತ್ರೆಗೆ ಬಡ ರೋಗಿಗಳು ಹೆಚ್ಚಾಗಿ ಬರುತ್ತಾರೆ. ಬರುವ ರೋಗಿಗಳಿಗೆ ವ್ಯವಸ್ಥಿತವಾಗಿ ಚಿಕಿತ್ಸೆ ನೀಡಿ. ಚಿಕಿತ್ಸೆಗೆ ನೀಡಲು ಹೆಚ್ಚುವರಿ ವ್ಯವಸ್ಥೆ ಹಾಗೂ ಯಾವುದೇ ತೊಂದರೆ ಇದ್ದಲ್ಲಿ ಜಿಲ್ಲಾಡಳಿತದ ಗಮನಕ್ಕೆ ತನ್ನಿ ಎಂದರು. ಭಾರೀ ಮಳೆಯಿಂದ ಉಂಟಾದ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಲಾಗಿದೆ. ತಾಲ್ಲೂಕಿಗೆ 2 ಕೋಟಿಯಂತೆ ಅನುದಾನ ನಿಗದಿಪಡಿಸಲಾಗಿದ್ದು, ಲೋಕೋಪಯೋಗಿ ಇಲಾಖೆ ಅವರು ಕಾಮಗಾರಿಗಳನ್ನು ಪ್ರಾರಂಭಿಸಿ 15 ದಿನದೊಳಗಾಗಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಜಲ್ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ಕುಡಿಯುವ ನೀರು ಒದಗಿಸುವ ಕಾಮಗಾರಿ 2024 ರೊಳಗಾಗಿ ಪೂರ್ಣವಾಗಬೇಕು. ಯಾವುದಾದರೂ ತೊಂದರೆಗಳಿದ್ದಲ್ಲಿ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹರಿಸಿಕೊಳ್ಳಿ ಎಂದರು.

ಪಾಂಡವಪುರ ತಾಲ್ಲೂಕಿನ ಕಟ್ಟೇರಿಯಲ್ಲಿರುವ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಮುಖ್ಯ ಶಿಕ್ಷಕನ ವಿರುದ್ಧ ಸೂಕ್ತ ಶಿಸ್ತು ಕ್ರಮ ವಹಿಸುವಂತೆ ಹಾಗೂ ಯಾವುದೇ ಸಾಕ್ಷಿ ನಾಶವಾಗದಂತೆ ನೋಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ಕೆ.ಸಿ ನಾರಾಯಣಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಧು ಜಿ ಮಾದೇಗೌಡ, ಸಿ.ಎಸ್. ಪುಟ್ಟರಾಜು, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ, ಜಿಲ್ಲಾಧಿಕಾರಿ ಡಾ.ಹೆಚ್.ಎನ್. ಗೋಪಾಲಕೃಷ್ಣ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತ ಎಲ್ ಹುಲ್ಮನಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜು, ಎ.ಎಸ್.ಪಿ. ವೇಣುಗೋಪಾಲ್ ಎಂ, ಡಿಸಿಎಫ್ ರುದ್ರನ್ ಸೇರಿದಂತೆ ಇತರರಿದ್ದರು.

ಡಿ.16 ರಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಡಿ.15– ಜಿ.ಮಲ್ಲಿಗೆರೆ ಎಂಯುಎಸ್‌ಎಸ್‌ನಿಂದ ಹೊರಹೊಮ್ಮುವ ಎಫ್–2 ಜಿ.ಮಲ್ಲಿಗೆರೆ ಫೀಡರ್ ವ್ಯಾಪ್ತಿಯ ಗ್ರಾಮಗಳಾದ ಜಿ.ಮಲ್ಲಿಗೆರೆ, ಮರಳಿಕೆರೆ, ಹೊನ್ನೆಮಡು, ಜವನಹಳ್ಳಿ, ಚಿಕ್ಕಗಂಗವಾಡಿ, ತಿಪ್ಪಾಪುರ ಮತ್ತು ಮಲ್ಲೇನಹಳ್ಳಿ ಗ್ರಾಮಗಳಲ್ಲಿ ಗಂಗಾ ಕಲ್ಯಾಣ ಲೈನ್ ಕಾಮಗಾರಿ ನಡೆಯುತ್ತಿರುವುದರಿಂದ ಡಿ.16 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 5 ರವರೆಗೆ ಮೇಲ್ಕಂಡ ಗ್ರಾಮಗಳಿಗೆ ವಿದ್ಯುತ್ ಇರುವುದಿಲ್ಲ ಎಂದು ಕೆರಗೋಡು ಉಪ ವಿಭಾಗ ಚಾವಿಸನಿನಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತರಿಗೆ ಮಾರುಕಟ್ಟೆ ಮಾಹಿತಿ ನೀಡಿ

ಮಂಡ್ಯ.ಡಿ.15– ರೈತರಿಗೆ ತಾವು ಬೆಳೆಯುವ ಬೆಳೆಗಳನ್ನು ಉತ್ತಮ ಬೆಲೆಯಲ್ಲಿ ಮಾರಾಟ ಮಾಡಲು ಅವರಿಗೆ ಮಾರುಕಟ್ಟೆ ಕುರಿತು ಹೆಚ್ಚಿನ ಮಾಹಿತಿ ನೀಡಬೇಕು. ಈ ಹಿನ್ನೆಲೆಯಲ್ಲಿ ಹೋಬಳಿ ಮಟ್ಟದಲ್ಲಿ ಕೃಷಿ ಉತ್ಪಾದಕರ ಮಾರುಕಟ್ಟೆ ಕಾರ್ಯಾಗಾರ ನಡೆಸಿ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವರಾದ ಡಾ.ಕೆ.ಸಿ ನಾರಾಯಣಗೌಡ ತಿಳಿಸಿದರು.

ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾ ಯತ್, ಜೈ ಕಿಸಾನ್, ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯ (ನ್ಯೂಟ್ರಿ ಸಿರಿಧಾನ್ಯ) ಕೃಷಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಸಿರಿಧಾನ್ಯ ಸಂಸ್ಕರಣೆ/ ಮೌಲ್ಯಸರಪಳಿ ಕುರಿತು ಉತ್ಪಾದಕರು ಮಾರುಕಟ್ಟೆದಾರರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಆರ್ಕ(ಸಿರಿಧಾನ್ಯ) ಬೆಳೆಯನ್ನು ಬೆಳೆಯುತ್ತಿರುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ 8 ಸಾವಿರ ರೂ ಸಹಾಯಧನ ಸರ್ಕಾರದಿಂದ ಸಿಗುತ್ತದೆ ಎಂದರು.

ಸಿರಿಧಾನ್ಯವನ್ನು ಉಪಯೋಗಿಸುವ ಬಗ್ಗೆ ದೊಡ್ಡ ದೊಡ್ಡ ನಗರಗಳಲ್ಲಿ ಹೆಚ್ಚಿನ ಪ್ರಚಾರವಾಗಿದೆ. ಜಿಲ್ಲೆ ಮತ್ತು ತಾಲೂಕುವಾರು ಸಿರಿಧಾನ್ಯ ಕುರಿತು ಹೆಚ್ಚಿನ ಪ್ರಚಾರ ನೀಡುವ ಅಗತ್ಯ ಇದೆ ಎಂದರು. ಕಾರ್ಯಗಾರದಲ್ಲಿ ಭಾಗವಹಿಸಿದ ಹಾಗೂ ಹೆಚ್ಚಿನ ಶಕ್ತಿಯನ್ನು ತುಂಬುತ್ತಿರುವವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಇದೇ ವೇಳೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್ ಗೋಪಾಲಕೃಷ್ಣ ಅವರು ಮಾತನಾಡಿ ಮಂಡ್ಯ ಕೃಷಿ ಪ್ರಧಾನವಾದ ಜಿಲ್ಲೆ. ಭತ್ತ, ರಾಗಿ ಇತರೆ ಧಾನ್ಯಗಳಿಗೆ ಉತ್ತಮವಾದಂತಹ ಒಂದು ಮಾರುಕಟ್ಟೆ ದೊರಕಿದ್ದಲ್ಲಿ ರೈತರ ಜೀವನ ನಡೆಸಲು ಹಾಗೂ ಅವರ ಕುಟುಂಬದ ನಿರ್ವಹಣೆಗೆ ಬಹಳ ಅನುಕೂಲವಾಗುತ್ತದೆ ಎಂದರು.

ಸರ್ಕಾರ ಮತ್ತು ಜಿಲ್ಲಾಡಳಿತ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಇದರ ಅಂಗವಾಗಿ ಇಂದು ಉತ್ಪಾದಕರು ಮಾರುಕಟ್ಟೆದಾರರ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದೇವೆ. ಅನೇಕ ತಜ್ಞರು ಭಾಗವಹಿಸಿ ರೈತರಿಗೆ ಅರಿವನ್ನು ಮೂಡಿಸುತ್ತಾರೆ ಹಾಗೂ ರೈತರ ಬೆಳೆದಂತಹ ಬೆಳೆಗೆ ಉತ್ತಮವಾದ ಮಾರುಕಟ್ಟೆಯನ್ನು ದೊರಕಿಸಿಕೊಡಲು ಪ್ರಯತ್ನ ಪಡಬೇಕು. ಇಂದಿನ ಕಾರ್ಯಗಾರ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎಸ್.ಅಶೋಕ್, ಉಪನಿರ್ದೇಶಕಿ ಮಾಲತಿ, ಸಹಾಯಕ ನಿರ್ದೇಶಕಿ ಸೌಮ್ಯಶ್ರೀ, ಲೀಡ್ ಬ್ಯಾಂಕ್ ವ್ಯವಸ್ಥಾಪಕ ದೀಪಕ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ವಿಕಸನ ಸಂಸ್ಥೆಯ ನಿರ್ದೇಶಕ ಮಹೇಶ್ ಚಂದ್ರ ಗುರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಬೆಲ್ಲವತ್ತದಲ್ಲಿ ವಿದ್ಯುತ್ ಅದಾಲತ್

ಚಾಮರಾಜನಗರ, ಡಿ.15– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ತಾಲೂಕಿನ ಸಂತೇಮರಹಳ್ಳಿ ಉಪವಿಭಾಗದ ಹೊಂಗನೂರು ವ್ಯಾಪ್ತಿಯ ಬೆಲ್ಲವತ್ತ ಗ್ರಾಮದಲ್ಲಿ ಡಿ.17ರಂದು ಬೆಳಿಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ತನ್ನು ಹಮ್ಮಿಕೊಳ್ಳಲಾಗಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.15– ಕಾವೇರಿ ನೀರಾವರಿ ನಿಗಮ ವತಿಯಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಬೃಹತ್ ಕಾಮಗಾರಿ ವಿಭಾಗ ಏತ ನೀರಾವರಿ ಘಟಕದ ಕೋಡಿಮೋಳೆ ಟವರ್ ಕಾಮಗಾರಿಯನ್ನು ಡಿ.16ರಂದು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಚಂದಕವಾಡಿ ಉಪಕೇಂದ್ರದಿಂದ ಹೊರಹೊಮ್ಮುವ ಫೀಡರ್‌ಗಳಲ್ಲಿ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನವೋದಯ ಫೀಡರ್ ನ ದಡದಹಳ್ಳಿ, ದೇವರಾಜಪುರ, ವೈ.ಆರ್.ಕೆ ಫ್ಯಾಕ್ಟರಿ, ಕಾಳಿಕಾಂಭ ಕಾಲೋನಿ, ಕುಂಭೇಶ್ವರ ಕಾಲೋನಿ ಹಾಗೂ ಹಿರಿಕೆರೆ ಎನ್.ಜೆ.ವೈ ಫೀಡರ್‌ನ ಹೆಬ್ಬಸೂರು, ಅರಳೀಪುರ, ಕೊಕ್ಕನಹಳ್ಳಿ, ಮಲ್ಲೇದೇವನಹಳ್ಳಿ, ಮಹದೇಶ್ವರ ಕಾಲೋನಿ ಮತ್ತು ಅಯ್ಯನಪುರ ಗ್ರಾಮಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ನ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯನಿವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರ, ಜನರ ಪಕ್ಷ

ಚಾಮರಾಜನಗರದಲ್ಲಿ ಬಿಜೆಪಿ ನೂತನ ಕಚೇರಿ ಉದ್ಘಾಟನೆ



ಚಾಮರಾಜನಗರ, ಡಿ.15– ಬೇರೆ ಪಕ್ಷಗಳಂತೆ ನಮ್ಮದು ವ್ಯಕ್ತಿಗಳಿಗೆ ಸಿಮೀತವಾಗಿರುವ ಪಕ್ಷವಲ್ಲ. ನಮ್ಮದು ಕಾರ್ಯಕರ್ತರ ಹಾಗೂ ಜನರ ಪಕ್ಷವಾಗಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ್‌ಕುಮಾರ್ ಸುರಾನ ತಿಳಿಸಿದ್ದಾರೆ.

ನಗರದ ಕುಲುಮೆ ರಸ್ತೆ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬಿಜೆಪಿ ಜಿಲ್ಲಾ ಕಚೇರಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಿಜೆಪಿ ಜನರ ಪಕ್ಷವಾಗಿದೆ. ನಮ್ಮಲ್ಲಿ ವ್ಯಕ್ತಿ ಪೂಜೆ ಇಲ್ಲ. ಹೀಗಾಗಿ ಪಕ್ಷ ಇಂದು ದೊಡ್ಡಮಟ್ಟದಲ್ಲಿ ಬೆಳೆದಿದೆ ಎಂದರು.

ಜಿಲ್ಲೆಯ ಜನರ ಇಂದಿನ ಸ್ಪಂದನೆಯನ್ನು ಗಮನಿಸಿದರೆ ನಾಲ್ಕು ಕ್ಷೇತ್ರದಲ್ಲಿಯೂ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸುವ ವಿಶ್ವಾಸವಿದೆ. ಈ ನಿಟ್ಟಿನಲ್ಲಿ ಕಾರ್ಯಕರ್ತರು ಶ್ರಮಿಸಬೇಕು. ತಮ್ಮ ಬಳಿಗೆ ಬರುವ ಜನರ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಶಾಸಕ ಎನ್.ಮಹೇಶ್ ಮಾತನಾಡಿ, ಬಿಜೆಪಿ ಬೆಳವಣಿಗೆಯಲ್ಲಿ ಇಂದು ಐತಿಹಾಸಿಕ ದಿನ. ಪಕ್ಷದ ಜಿಲ್ಲಾ ಕಚೇರಿಯನ್ನು ರಾಷ್ಟ್ರೀಯ ಹಾಗೂ ರಾಜ್ಯಾಧ್ಯಕ್ಷರು, ವರಿಷ್ಠರು ಉದ್ಘಾಟನೆ ಮಾಡುತ್ತಿರುವುದು ಸಂತೋಷವಾಗಿದೆ. ಪಕ್ಷದ ಕಚೇರಿಗೆ ಅಗತ್ಯವಾದ ಪೀಠೋಪಕರಣಗಳನ್ನು ನೀಡುತ್ತೇನೆ ಎಂದು ಭರವಸೆ ನೀಡಿದರು. ಶಾಸಕ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ರಾಜ್ಯದ 10 ಜಿಲ್ಲೆಗಳಲ್ಲಿ ನೂತನ ಕಚೇರಿ ಉದ್ಘಾಟನೆ ಹಾಗೂ ಮೂರು ಜಿಲ್ಲೆಗಳಲ್ಲಿ ಕಚೇರಿಯ ಶಿಲಾನ್ಯಾಸ ಕಾರ್ಯಕ್ರಮ ನಡೆಯುತ್ತಿದೆ. ಜಿಲ್ಲಾ ಕೇಂದ್ರದಲ್ಲಿ ಪಕ್ಷದ ಕಚೇರಿ ತೆರೆಯುವ ಮೂಲಕ ಜನರಿಗೆ ಕಾರ್ಯಕರ್ತರು ಸಿಕ್ಕಿ ಅವರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪಕ್ಷದ ಜಿಲ್ಲಾಧ್ಯಕ್ಷ ಆರ್.ಸುಂದರ್ ಮಾತನಾಡಿ, ಜಿಲ್ಲೆಯಲ್ಲಿ ಪಕ್ಷದ ನೂತನ ಕಚೇರಿ ಉದ್ಘಾಟನೆಯಿಂದ ನಾವು ಸಭೆ–ಸಮಾರಂಭ ನಡೆಸಲು ಬೇರೆಡೆಗೆ ವಲಸೆ ಹೋಗುವುದು ತಪ್ಪಿದಂತಾಗಿದೆ. ಕಚೇರಿ ನಿರ್ಮಾಣಕ್ಕೆ ಸಹಕಾರ ನೀಡಿದ ರಾಷ್ಟ್ರ ರಾಜ್ಯ ಹಾಗೂ ಜಿಲ್ಲೆಯ ನಾಯಕರು, ಮುಖಂಡರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಪಕ್ಷದ ಮುಖಂಡರು ಹಾಗೂ ಕಟ್ಟಡ ನಿರ್ಮಿಸಿದ ಗುತ್ತಿಗೆದಾರರನ್ನು ಸನ್ಮಾನಿಸಲಾಯಿತು. ಬಳಿಕ, ವರ್ಚುವಲ್ ಮೂಲಕ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಕಟ್ಟಡ ಉದ್ಘಾಟನೆ ಮಾಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ರಾಜೇಂದ್ರಕುಮಾರ್, ಬಾಲಸುಬ್ರಮಣ್ಯ, ಮೈ.ವಿ.ರವಿಶಂಕರ್, ಮಂಗಲ ಶಿವಕುಮಾರ್, ಎಂ.ರಾಮಚಂದ್ರ ನಾಗಶ್ರೀ ಪ್ರತಾಪ್, ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಪ್ರೀತಮ್ ನಾಗಪ್ಪ, ನೂರೊಂದುಶೆಟ್ಟಿ ಅಯ್ಯನಪುರ ಶಿವಕುಮಾರ್, ಆರ್.ಪಿ. ನಂಜುಂಡಸ್ವಾಮಿ, ಆಶಾ ನಟರಾಜು, ವೃಷಬೇಂದ್ರಪ್ಪ ನಾರಾಯಣಸ್ವಾಮಿ, ಮಂಜುನಾಥ್, ಚಂದ್ರಶೇಖರ್, ಕುಮಾರ್ ಇತರರು ಇದ್ದರು.

ಕೊತ್ತಂಬರಿ ಸೊಪ್ಪಿನ ಮಧ್ಯೆ ಗಾಂಜಾ ಬೆಳೆದಿದ್ದ ಆರೋಪಿ ಬಂಧನ



ಹನೂರು, ಡಿ.15– ಕೊತ್ತಂಬರಿ ಸೊಪ್ಪಿನ ಬೆಳೆಯ ಮಧ್ಯೆ ಅಕ್ರಮವಾಗಿ ಗಾಂಜಾ ಗಿಡ ಬೆಳೆದಿದ್ದ ವ್ಯಕ್ತಿಯೋರ್ವನನ್ನು ಅಬಕಾರಿ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಕಂಡಯ್ಯನಪಾಳ್ಯ ಗ್ರಾಮದ ಹನುಮೇಗೌಡ (40)ಬಂಧಿತ ಆರೋಪಿ.

ಘಟನೆ ವಿವರ: ಚಿಕ್ಕಮಲಾಪುರ ಗ್ರಾಮದ ಸರೋಜಮ್ಮ ಎಂಬುವರ ಜಮೀನನ್ನು ಕಂಡಯ್ಯನಪಾಳ್ಯ ಗ್ರಾಮದ ಹನುಮೇಗೌಡ ಗುತ್ತಿಗೆ ಪಡೆದು ಕೊತ್ತಂಬರಿ ಸೊಪ್ಪು ಬೆಳೆದಿದ್ದರು. ಕೊತ್ತಂಬರಿ ಸೊಪ್ಪು ಬೆಳೆದಿರುವ ಮಧ್ಯಭಾಗದಲ್ಲಿ ಗಾಂಜಾ ಗಿಡ ಬೆಳೆದಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಕೊಳ್ಳೇಗಾಲ ವಲಯದ ಅಬಕಾರಿ ನಿರೀಕ್ಷಕರಾದ ಸುನೀಲ್ ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಜಮೀನಿನಲ್ಲಿ ಬೆಳೆದಿದ್ದ 348 ಗ್ರಾಂ ತೂಕದ ಒಂದು ಗಾಂಜಾ ಗಿಡ ಹಾಗೂ ಆರೋಪಿಯನ್ನು ವಶಕ್ಕೆ ಪಡೆದು ಎನ್‌ಡಿಪಿಎಸ್ ಕಾಯ್ದೆಯಡಿ ಮೊಕದ್ದಮೆ ದಾಖಲಿಸಿ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಅಬಕಾರಿ ಉಪ ನಿರೀಕ್ಷಕರಾದ ಸಿದ್ದಯ್ಯ, ಪೇದೆಗಳಾದ ಸಿದ್ದರಾಜು ಬಿ, ರಮೇಶ್ ಎಂ ಹಾಗೂ ಪ್ರದೀಪ್ ಕುಮಾರ್ ಕೆ ಭಾಗವಹಿಸಿದ್ದರು.

ಚಾ.ನಗರದಲ್ಲಿ ಡಿ.18 ರಂದು ಹನುಮ ಜಯಂತ್ಯೋತ್ಸವ

ಶ್ರೀ ಆಂಜನೇಯಸ್ವಾಮಿ ವಿಗ್ರಹದ ಬೃಹತ್ ಭವ್ಯ ಮೆರವಣಿಗೆ

ಚಾಮರಾಜನಗರ, ಡಿ. 15– ಶ್ರೀ ಹನುಮ ಜಯಂತ್ಯೋತ್ಸವ ಸಮಿತಿ ವತಿಯಿಂದ ಡಿ.18 ರಂದು ಭಾನುವಾರ ಹನುಮ ಜಯಂತಿಯ ಪ್ರಯುಕ್ತ ಶ್ರೀ ಆಂಜನೇಯಸ್ವಾಮಿ ವಿಗ್ರಹದ ಬೃಹತ್ ಭವ್ಯ ಮೆರವಣಿಗೆ ನಡೆಯಲಿದೆ ಎಂದು ಹನುಮ ಜಯಂತ್ಯೋತ್ಸವ ಸಂಚಾಲಕ ಶಿವು ವಿರಾಟ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಶ್ರೀ ಅಭಯ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಸ್ಥಾನ ಮಾರಿಗುಡಿ ಮುಂಭಾಗದಿಂದ ನಗರದ ಪ್ರಮುಖ ರಸ್ತೆಗಳಲ್ಲಿ ನಾನಾ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಸುಮಾರು 4 ರಿಂದ 5 ಸಾವಿರ ಜನ ಸೇರುವ ನಿರೀಕ್ಷೆ ಇದೆ. ನಗರದಲ್ಲಿ ಪ್ರಪ್ರಥಮ ಬಾರಿಗೆ ಈ ಕಾರ್ಯಕ್ರಮ ನಡೆಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಕೊಡುವಂತೆ ಶಿವು ವಿರಾಟ್ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ಹನುಮ ಜಯಂತ್ಯೋತ್ಸವ ಸಮಿತಿ ಸಂಚಾಲಕ ಪ್ರವೀಣ್, ಸದಸ್ಯರಾದ ಮಹೇಶ್, ಮಧು, ಹರ್ಷತ್‌ಗೌಡ, ಮಹೇಂದ್ರ, ಸಿ.ವಿ. ಮಣಿಕಂಠ ಹಾಜರಿದ್ದರು.

ಗುಂಡ್ಲುಪೇಟೆ ತಾಲೂಕಿನ ಚನ್ನಂಜಯ್ಯನಹುಂಡಿ ಗ್ರಾಮದಲ್ಲಿ ವಿವಿಧ ಕಾಮಗಾರಿಗೆ ಶಾಸಕ ಸಿ.ಎಸ್. ನಿರಂಜನ್‌ಕುಮಾರ್ ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ತಾಯಮ್ಮಣ್ಣಿ, ತಾಪಂ ಮಾಜಿ ಸದಸ್ಯ ಸಿ.ಮಹದೇವ ಪ್ರಸಾದ್, ಮಂಡಲಾಧ್ಯಕ್ಷ ಜಗದೀಶ್ ಇತರರು ಇದ್ದರು.



'ಅಣ್ಣಾವ್ರ ಹಾಡುಗಳು' ನಾಳೆ ಸಂಗೀತ ಕಾರ್ಯಕ್ರಮ

ಮೈಸೂರು,ಡಿ.15(ಆರ್‌ಕೆಬಿ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರಿನ ಡಾ.ರಾಜ್‌ಕುಮಾರ್



ಮ್ಯೂಸಿಕಲ್ ಗ್ರೂಪ್ ವತಿಯಿಂದ ಡಿ.17ರಂದು ಸಂಜೆ 5 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ 'ಅಣ್ಣಾವ್ರ ಹಾಡುಗಳು' ಶೀರ್ಷಿಕೆಯಡಿ ರಾಜ್‌ಕುಮಾರ್ ಹಾಡಿರುವ ಚಿತ್ರಗೀತೆಗಳ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗ್ರೂಪ್‌ನ ಶ್ರೀಕಂಠರಾವ್ ತಿಳಿಸಿದರು.

ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮೊಂದಿಗೆ ಮೈಸೂರು ಜಯರಾಂ, ಸುಧೀಂದ್ರ ವೈಡಿ.ರಾಜಣ್ಣ ಸುರೇಶ್, ಪ್ರೇಮ್, ಉಮೇಶ್, ಗಾಯಕಿಯರಾದ ಸರ್ವಮಂಗಳಾ, ಶಶಿಕಲಾ, ರಶ್ಮಿ, ಶಾರದಾಂಬ ಇನ್ನಿತರರು ಹಾಡಲಿದ್ದಾರೆ. ನಿರ್ಮಾಪಕ ಎಸ್.ಎ.ಶ್ರೀನಿವಾಸ್, ಡಾ.ರಾಜ್ ಅಭಿಮಾನಿ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ರಾಮೇಗೌಡ ಇನ್ನಿತರರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಸುಧೀಂದ್ರ, ಬಾಲು ಪ್ರಕಾಶ್, ಸುಚೇಂದ್ರ, ಸುರೇಶ್, ಚಕ್ರಪಾಣಿ ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ಚೆಸ್ಕಾಂ ವತಿಯಿಂದ ಡಿ.16 ರಂದು ರಾಮಾನುಜ ರಸ್ತೆ, ಹೊಸಬಂಡಿಕೇರಿ, ಜೆಎಸ್‌ಎಸ್ ಆಸ್ಪತ್ರೆ, ಅಗ್ರಹಾರ, ಬಸವೇಶ್ವರ ರಸ್ತೆ, ಚಾಮುಂಡಿಪುರಂನ ಹಲವು ಭಾಗಗಳು, ಸಬರ್ಬ್ ಬಸ್ ನಿಲ್ದಾಣ, ನಜರ್‌ಬಾದ್, ಇಟ್ಟಿಗೆಗೂಡು, ಮೃಗಾಲಯದ ಸುತ್ತಮುತ್ತ, ಸರ್ಕಾರಿ ಅತಿಥಿ ಗೃಹ ಮತ್ತು ಸುತ್ತಮುತ್ತ, ತಾಲೂಕು ಕಚೇರಿ, ಡಿ.ದೇವರಾಜ ಅರಸು ರಸ್ತೆ, ಬಿ.ಎನ್. ರಸ್ತೆ, ಚಾಮುಂಡಿಬೆಟ್ಟ, ಸಿದ್ಧಾರ್ಥನಗರ, ಆಲನಹಳ್ಳಿ, ಗಿರಿದರ್ಶಿನಿ ಬಡಾವಣೆ, ಅರಮನೆ ಸುತ್ತ ಮುತ್ತ, ಶ್ರೀ ಹರ್ಷ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಧನ್ವಂತರಿ ರಸ್ತೆ, ಶಿವರಾಂಪೇಟೆ ಬೆಳಗ್ಗೆ 10 ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ಡಿ.18, ವಿಶೇಷ ಸಂಗೀತ, ನೃತ್ಯ, ತಾಳವಾದ್ಯ ಪರೀಕ್ಷೆ

ಮೈಸೂರು,ಡಿ.15–ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ಈ ಸಾಲಿನ ಡಿಸೆಂಬರ್‌ನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಡಿ.18ರಂದು ವಿಶೇಷ ಸಂಗೀತ, ನೃತ್ಯ ಮತ್ತು ತಾಳವಾದ್ಯ ಪರೀಕ್ಷೆಗಳು ನಡೆಯಲಿವೆ ಹಾಗೂ 2023ರ ಜನವರಿ 7ರಿಂದ ಫೆಬ್ರವರಿ 22ರವರೆಗೆ (ಶನಿವಾರ, ಭಾನುವಾರ ಮತ್ತು ಸೋಮವಾರ) ಪ್ರಾಯೋಗಿಕ ಪರೀಕ್ಷೆಗಳು ಪ್ರಾರಂಭವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ಕಳೆದು ಹೋಗಿದೆ

ಜೀತೇಶ.ಜೆ. ಬಿನ್ ಜಯರಾಮರಾವ್.ಪಿ, #365/5, ದುರ್ಗಾದೇವಿ ದೇವಸ್ಥಾನದ ರಸ್ತೆ, ನಜರ್‌ಬಾದ್, ಮೈಸೂರು–10, ಇವರ ಬಾಬ್ತು, ಮನೆ ನಂ. 556/1 ಹೊಸ ನಂ. 14/1, ನಜರ್‌ಬಾದ್, ಕಾಮಾಟಗೇರಿ ಮೈಸೂರಿನಲ್ಲಿರುವ ಮನೆಯ ಮೂಲ ದಾಖಲಾತಿ ಪತ್ರ ಆಕಸ್ಮಿಕವಾಗಿ ಕಳೆದು ಹೋಗಿದೆ. ಸಿಕ್ಕಿದವರು ಈ ನಂಬರಿಗೆ ಸಂಪರ್ಕಿಸಿ.

7411293839









ಐದನೇ ಪುಟದಿಂದ

ಅಂಡರ್‌ಗ್ರೌಂಡ್‌ನಲ್ಲಿ ಕೇಬಲ್ ಅಳವಡಿಕೆ

ಬದಲಾಯಿಸಲು ಪಾಲಿಕೆಯಿಂದ ಅನುಮತಿ ಪಡೆದು ಕಾಮಗಾರಿ ಪೂರ್ಣಗೊಳಿಸಲು 3 ತಿಂಗಳು ಕಾಲಾವಕಾಶ ನೀಡಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಾಜಿ ಮೇಯರ್ ಅಯೂಬ್ ಖಾನ್, ಶ್ರೀಮಂತ ಉದ್ಯಮಿಗಳಿಗೆ ಕಾಲಾವಕಾಶ ನೀಡುತ್ತೀರಿ, ಬಡವರ ಮೇಲೆ ತಕ್ಷಣ ಕ್ರಮ ವಹಿಸುತ್ತೀರಿ ಎಂದು ಕಿರಿಕಾರಿದರು. ಕಡೆಗೆ ಮೇಯರ್ ಶಿವಕುಮಾರ್, ಏಕಾಏಕಿ ಕೇಬಲ್ ತುಂಡರಿಸಿದರೆ ಇಂಟರ್‌ನೆಟ್ ಸಮಸ್ಯೆಯಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಹಾಗಾಗಿ ಅಂಡರ್‌ಗ್ರೌಂಡ್(ಭೂಮಿಯೊಳಗೆ)ನಲ್ಲಿ ಕೇಬಲ್ ಅಳವಡಿಸಲು ಜ.15ರೊಳಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆದು, ನಂತರದ 2 ತಿಂಗಳಲ್ಲಿ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಲು ಗಡುವು ನೀಡಿ, ನಂತರದಲ್ಲೂ ಕಂಬದಲ್ಲೇ ಬಿಟ್ಟಿದ್ದರೆ ಅವುಗಳನ್ನು ತೆರವುಗೊಳಿಸುವ ನಿರ್ಣಯ ಪ್ರಕಟಿಸಿದರು.

ಸಾವಿರಾರು ಕಂಬ: ಮೈಸೂರು ನಗರದಲ್ಲಿ ಅನಧಿಕೃತವಾಗಿ ಸುಮಾರು 3–4 ಸಾವಿರ ಕಂಬಗಳನ್ನು ನೆಡಲಾಗಿದೆ. ಅವುಗಳನ್ನು ಯಾವ ಕಂಪನಿಗಳು ಅಳವಡಿಸಿವೆ, ಇದಕ್ಕೆ ಪಾಲಿಕೆ ಅನುಮತಿ ಪಡೆದಿದ್ದಾರಾ ಎಂದು ವಿವರಣೆ ಕೇಳಿ ಪತ್ರ ಬರೆದು ನಾಲ್ಕೈದು ತಿಂಗಳಾದರೂ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಆ ಕಂಬಗಳನ್ನು ತೆರವುಗೊಳಿಸಬೇಕೆಂದು ಆಗ್ರಹಿಸಿದರು. ಇದಕ್ಕೆ ಪೂರಕವಾಗಿ ಎಸ್‌ಬಿಎಂ ಮಂಜು, ಇದು ಅಕ್ಷರಷಃ ಸತ್ಯ. ಪಾರಂಪರಿಕ ಹಿನ್ನೆಲೆಯುಳ್ಳ ವೃತ್ತ, ಕಟ್ಟಡ, ಆಸ್ಪತ್ರೆ, ಶಾಲೆ–ಕಾಲೇಜುಗಳ ಬಳಿಯೂ ರೇಡಿಯೇಷನ್ ಹೊರಹೊಮ್ಮಿಸುವ ಕಂಬಗಳನ್ನು ಅಳವಡಿಸಿದ್ದಾರೆ. ಪಾಲಿಕೆಯಿಂದ ಅನುಮತಿ ಪಡೆದವನು ವಾರ್ಷಿಕ ಮೂರೂವರೆ ಲಕ್ಷ ರೂ. ಶುಲ್ಕ ಪಾವತಿಸಿ, ಕಂಪನಿಗಳಿಂದ ಕೋಟ್ಯಾಂತರ ರೂ. ಹಣ ಮಾಡುತ್ತಿದ್ದಾನೆ. ಈ ಬಗ್ಗೆ ಸಂಪೂರ್ಣ ವಿವರ ಕೊಡಿಸಿ ಎಂದು ಒತ್ತಾಯಿಸಿದರು.

ಟ್ರೆಂಚ್‌ಗಳಿಗೆ ಶುಲ್ಕ: ಎಚ್‌ಡಿಡಿ ಮೂಲಕ ಕೇಬಲ್ ಅಳವಡಿಸಲು ನಗರಪಾಲಿಕೆಯಲ್ಲಿ ದರ ನಿಗದಿಯಾಗಿತ್ತು. ಆದರೆ ಆ ವೇಳೆ ಪ್ರತಿ ಕಿ.ಮೀ.ಗೆ ಸುಮಾರು 6 ಓಪನ್ ಟ್ರೆಂಚ್‌ಗಳನ್ನು ತೆಗೆಯುವುದರಿಂದ ತಲಾ 10 ಸಾವಿರದಂತೆ ಪ್ರತಿ ಕಿ.ಮೀ.ಗೆ 60 ಸಾವಿರ ದರ ನಿಗದಿಪಡಿಸಲು ತೀರ್ಮಾನಿಸಲಾಯಿತು. ಸಭೆಯಲ್ಲಿ ಉಪ ಮೇಯರ್ ಡಾ.ಜಿ.ರೂಪಾ ಉಪಸ್ಥಿತರಿದ್ದರು.

ಸೆಸ್ಕ್ ಅಧಿಕಾರಿಗಳ ಸಭೆ: ಯುಜಿ ಕೇಬಲ್ ಅಳವಡಿಸುವಲ್ಲಿ ಮಾರ್ಗಸೂಚಿ ಪಾಲಿಸದಿರುವ ಬಗ್ಗೆ ದೂರುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಸೆಸ್ಕ್ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದರು.

ಕರ ಪರಿಷ್ಕರಣೆ: ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ ನಾಲ್ಕು ಯೂನಿಟ್ ಸಂಪರ್ಕ ಹೊಂದಿರುವ ಕಟ್ಟಡಗಳ ಕರ ಪರಿಷ್ಕರಣೆಗೆ ಕೌನ್ಸಿಲ್‌ನಲ್ಲಿ ನಿರ್ಣಯಿಸಲಾಗಿದೆ. ಬಹುಮಹಡಿ ವಸತಿ, ವಾಣಿಜ್ಯ ಮತ್ತು ಕೈಗಾರಿಕೆ ಕಟ್ಟಡಗಳಿಗೆ ಪಾಲಿಕೆಗೆ ಹೆಚ್ಚಿನ ಹೊರೆಯಾಗುತ್ತಿರುವ ಕಾರಣ ಪ್ರತಿ ಯೂನಿಟ್‌ಗೆ ಐವರಂತೆ ಲೆಕ್ಕಚಾರ ಮಾಡಿ ಪ್ರೋರೇಟಾ ವೆಚ್ಚವನ್ನು ಹೆಚ್ಚಿಸಲು ಅಂದಾಜಿಸಿ, ಪ್ರಸ್ತುತ ದರದ ಶೇ.80ರಷ್ಟು ಹೆಚ್ಚಿಸಿ, ಪರಿಷ್ಕರಿಸಲು ನಿರ್ಧರಿಸಲಾಗಿದೆ.

ಪ್ರತ್ಯೇಕ ಫ್ಲಾಟ್‌ಗೆ ಖಾತೆ, ಕಂದಾಯ

ವಸತಿ ಸಮುಚ್ಛಯ ಹಾಗೂ ವಾಣಿಜ್ಯ ಸಂಕೀರ್ಣ ಕಟ್ಟಡಗಳ ಪೂರ್ಣ ಕಂದಾಯ ಪಾವತಿಸಿ ಪ್ರತ್ಯೇಕವಾಗಿ ಉಪಸಂಖ್ಯೆ ನೀಡಿ, ಖರೀದಿದಾರರಿಗೆ ಖಾತಾ ನೋಂದಣಿ ಮಾಡುವ ಕ್ರಮವಿದೆ. ಆದರೆ ಡೆವಲಪರ್ಸ್ ಅಥವಾ ಮೂಲ ಮಾಲೀಕರು ಫ್ಲಾಟ್ ಮಾರಾಟದ ಬಳಿಕ ಕಂದಾಯ ಪಾವತಿಸದ ಕಾರಣ ಖರೀದಿಸಿದವರಿಗೆ ತೊಂದರೆಯಾಗಿದೆ. ಅಂತಹವರು ಅವರವರ ಫ್ಲಾಟ್‌ಗಳಿಗೆ ಕಂದಾಯ ಪಾವತಿಸಲು ಸಿದ್ಧರಿದ್ದರೂ ಅದಕ್ಕೆ ಅವಕಾಶವಿರುವುದಿಲ್ಲ. ಹಾಗಾಗಿ ನಿಯಮಾನುಸಾರ ಪ್ರತ್ಯೇಕವಾಗಿ ಕಂದಾಯ ಪಾವತಿಸಿಕೊಂಡು ಫ್ಲಾಟ್ ಸಂಖ್ಯೆಯಲ್ಲಿ ಖಾತೆ ಮಾಡಿಕೊಡುವ ವ್ಯವಸ್ಥೆಯನ್ನು ಕಾನೂನು ತಜ್ಞರ ಸಲಹೆ ಪಡೆದು ಅನುಷ್ಠಾನಗೊಳಿಸಲು ಕೌನ್ಸಿಲ್‌ನಲ್ಲಿ ತೀರ್ಮಾನಿಸಲಾಯಿತು.

ಶಿಕ್ಷಕರು ಸೇರಿ 25 ಮಂದಿಗೆ ಗಾಯ

ಯೋಗಕ್ಷೇಮ ವಿಚಾರಿಸಿದ್ದಾರೆ. ಡಾ.ಪರಪ್ಪ ಬೋನಸ್ ನೇತೃತ್ವದಲ್ಲಿ ಎಲ್ಲಾ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸಿದ್ದಾರೆ. ಸಣ್ಣಪುಟ್ಟ ಗಾಯಗಳಾಗಿದೆ, ಬೆಳಗ್ಗೆ ವಾಪಸ್ ಬರಲಿದ್ದಾರೆ. ಶಾಸಕ ಎಚ್.ಪಿ.ಮಂಜುನಾಥ್ ಮತ್ತು ತಾವು ಶಿವಮೊಗ್ಗ ವೈದ್ಯ ಸಿಬ್ಬಂದಿ ಹಾಗೂ ಶಾಲಾ ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಹೆಚ್ಚಿನ ಅನಾಹುತ ಸಂಭವಿಸಿಲ್ಲ ಎಂದು ಬಿಇಓ ರೇವಣ್ಣ ತಿಳಿಸಿದ್ದಾರೆ. ಗಾಯಾಳುಗಳು ಚಿಕಿತ್ಸೆ ಪಡೆದಿದ್ದು, ಮಾಜಿ ಸಚಿವರು ಹಾಗೂ ಅಲ್ಲಿನ ಶಿಕ್ಷಣ ಇಲಾಖೆ ಅಧಿಕಾರಿಗಳ ತಂಡ ಒಂದು ಕೆಎಸ್‌ಆರ್‌ಟಿಸಿಬಸ್ ಹಾಗೂ ಎರಡು ಟಿಟಿ ವಾಹನ ವ್ಯವಸ್ಥೆ ಕಲ್ಪಿಸಿ ಎಲ್ಲರನ್ನೂ ಹುಣಸೂರಿಗೆ ಕಳುಹಿಸಿಕೊಟ್ಟಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಾಳೆ(ಡಿ.16) ಬೆಳಗ್ಗೆ ಸುರಕ್ಷಿತವಾಗಿ ಹುಣಸೂರಿಗೆ ಆಗಮಿಸಲಿದ್ದಾರೆ ಎಂದು ಬಿಇಓ ರೇವಣ್ಣ ತಿಳಿಸಿದರು.

ವಿದ್ಯಾರ್ಥಿನಿಯರು: ಗುರುವಿಗೆ ತಕ್ಕ 'ಪಾಠ'

ನಂತರ ಮೈಸೂರಿಗೆ ವಾಪಸ್ಸಾಗದೇ ರಾತ್ರಿ ವೇಳೆ ಶಾಲೆಗೆ ಹೊಂದಿಕೊಂಡಂತಿರುವ ಆರ್‌ಎಂಎಸ್‌ಎ ಬಾಲಕಿಯರ ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಕಾಟ ಕೊಡುತ್ತಿದ್ದ ಎಂದು ಹೇಳಲಾಗಿದೆ. ವಿದ್ಯಾರ್ಥಿನಿಯರನ್ನು ತನ್ನ ಆಫೀಸ್ ರೂಂಗೆ ಕರೆಸಿಕೊಂಡು ಅಸಭ್ಯವಾಗಿ ವರ್ತಿಸುವುದು ಹಾಗೂ ಅವರಿಗೆ ಮೊಬೈಲ್‌ನಲ್ಲಿ ಅಶ್ಲೀಲ ವೀಡಿಯೋ ತೋರಿಸುವುದು, ಸಹೋದ್ಯೋಗಿ ಶಿಕ್ಷಕರ ಅಂಗಾಂಗಗಳನ್ನು ವಿದ್ಯಾರ್ಥಿನಿಯರ ಅಂಗಾಂಗಗಳಿಗೆ ಹೋಲಿಸಿ ಅಶ್ಲೀಲವಾಗಿ ಮಾತನಾಡುತ್ತಿದ್ದ ಎಂದು ಆರೋಪಿಸಲಾಗಿದೆ. ಆತನ ವರ್ತನೆಯನ್ನು ವಿರೋಧಿಸಿದರೆ ಕೊಲೆ ಬೆದರಿಕೆ ಹಾಕುವುದರ ಜೊತೆಗೆ ಟಿಸಿಯಲ್ಲಿ 'ಬ್ಯಾಡ್ ಕ್ಯಾರೆಕ್ಟರ್' ಎಂದು ನಮೂದಿಸಿ ಭವಿಷ್ಯ ಹಾಳು ಮಾಡುವುದಾಗಿ ಬೆದರಿಸುತ್ತಿದ್ದ. ಕೆಲವು ವಿದ್ಯಾರ್ಥಿನಿಯರು ಆತನ ವರ್ತನೆ ಬಗ್ಗೆ ಹಾಸ್ಟೆಲ್‌ನ ವಾರ್ಡನ್ ಕೆ.ಎಸ್.ನಮಿತಾ ಅವರ ಬಳಿ ಅಲವತ್ತುಕೊಂಡಿದ್ದಾರಾದರೂ, ವಾರ್ಡನ್ ನಿಸ್ಸಹಾಯಕರಾಗಿದ್ದರು ಎನ್ನಲಾಗಿದೆ. ಬುಧವಾರ ರಾತ್ರಿ 8 ಗಂಟೆ ಸುಮಾರಿನಲ್ಲಿ ಪಾನಮತ್ತನಾಗಿ ಮುಖ್ಯ ಶಿಕ್ಷಕ ಚಿನ್ಮಯಾನಂದ ಹಾಸ್ಟೆಲ್ ಪ್ರವೇಶಿಸಿದಾಗ ಆತನನ್ನು ಶಾಲೆಯ ಆಫೀಸ್ ರೂಂನಲ್ಲಿ ಕೂಡಿ ಹಾಕಿ ಒಳಗಿನಿಂದ ಚಿಲಕ ಹಾಕಿಕೊಂಡ ವಿದ್ಯಾರ್ಥಿನಿಯರು, ದೊಣ್ಣೆ ಹಾಗೂ ಪೊರಕೆಯಿಂದ ಧರ್ಮದೇಟು ನೀಡಿ ಆತನಿಗೆ ಬುದ್ಧಿ ಕಲಿಸಿದ್ದಾರೆ. ಮುಖ್ಯ ಶಿಕ್ಷಕನಿಗೆ ಪಾಠ ಕಲಿಸುವ ವೇಳೆ ವಾರ್ಡನ್ ಮಧ್ಯೆ ಪ್ರವೇಶಿಸಿ ಆತನನ್ನು ರಕ್ಷಿಸಬಹುದು ಎಂಬ ಉದ್ದೇಶದಿಂದ ವಿದ್ಯಾರ್ಥಿನಿಯರು ವಾರ್ಡನ್ ರೂಂ ಅನ್ನು ಹೊರಗಿನಿಂದ ಚಿಲಕ ಹಾಕಿದ್ದಾರೆ. ವಿದ್ಯಾರ್ಥಿನಿಯರ ಗಲಾಟೆ ಕೇಳಿ ರೂಂನಿಂದ ಹೊರ ಬರಲು ವಾರ್ಡನ್ ಪ್ರಯತ್ನಿಸಿದಾಗ ಅವರ ರೂಂ ಅನ್ನು ಹೊರಗಿನಿಂದ ಚಿಲಕ ಹಾಕಿರುವುದು ಗೊತ್ತಾಗಿದೆ. ಕಿಟಕಿ ಮೂಲಕ ವಿದ್ಯಾರ್ಥಿನಿಯರನ್ನು ಕರೆದು ಬಾಗಿಲು ತೆಗೆಸಿ ಹೊರ ಬಂದಾಗ ಮುಖ್ಯ ಶಿಕ್ಷಕನ ಆಫೀಸ್ ರೂಂ ಅನ್ನು ಒಳಗಿನಿಂದ ಚಿಲಕ ಹಾಕಿಕೊಂಡು ಕೆಲ ವಿದ್ಯಾರ್ಥಿನಿಯರು ಆತನಿಗೆ ಧರ್ಮದೇಟು ನೀಡುತ್ತಿರುವುದು ಕಂಡು ಬಂದಿದೆ. ಈ ವೇಳೆ ಕಿಟಕಿ ಮೂಲಕ ವಿದ್ಯಾರ್ಥಿನಿಯರನ್ನು ವಾರ್ಡನ್ ಕರೆದಾಗ ವಿದ್ಯಾರ್ಥಿನಿಯರು 'ಈ ವಿಚಾರ ನಿಮಗೆ ಸಂಬಂಧಿಸಿದ್ದಲ್ಲ, ಹೋಗಿ ಮೇಡಂ' ಎಂದು ಹೇಳುತ್ತಾ ಕಾಮುಕ ಮುಖ್ಯ ಶಿಕ್ಷಕನಿಗೆ ತಕ್ಕ ಶಾಸ್ತಿ ಮುಂದುವರೆಸಿದ್ದಾರೆ. ಶಾಲೆಯಲ್ಲಿ ಗಲಾಟೆ ನಡೆಯುತ್ತಿರುವ ವಿಷಯ ತಿಳಿದು ಧಾವಿಸಿದ ಗ್ರಾಮಸ್ಥರು ವಿದ್ಯಾರ್ಥಿನಿಯರ ಮನವೊಲಿಸಿ ಆಫೀಸ್ ರೂಂ ಬಾಗಿಲು ತೆಗೆಸಿ ಮುಖ್ಯ ಶಿಕ್ಷಕ ಚಿನ್ಮಯಾನಂದನನ್ನು ಕೆಆರ್‌ಎಸ್ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಅಂದು ರಾತ್ರಿ 10.30ರ ಸುಮಾರಿನಲ್ಲಿ ಹಾಸ್ಟೆಲ್ ವಾರ್ಡನ್ ಕೆ.ಎಸ್.ನಮಿತಾ ನೀಡಿದ ದೂರನ್ನು ಪೋಕ್ಸೋ ಕಾಯಿದೆ ಮಾತ್ರವಲ್ಲದೇ ಭಾರತೀಯ ದಂಡ ಸಂಹಿತೆ 354ಎ, 354ಡಿ, 506, 509ರಡಿ ದಾಖಲಿಸಿಕೊಂಡ ಪೊಲೀಸರು ಚಿನ್ಮಯಾನಂದನನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಪ್ರತಿಭಟನೆ: ಮುಖ್ಯ ಶಿಕ್ಷಕನ ಲೈಂಗಿಕ ಕಿರುಕುಳ ವಿಷಯ ತಿಳಿಯುತ್ತಿದ್ದಂತೆಯೇ ಇಂದು ಬೆಳಗ್ಗೆ ಶಾಲಾ ಆವರಣಕ್ಕೆ ಆಗಮಿಸಿದ ವಿದ್ಯಾರ್ಥಿನಿಯರ ಪೋಷಕರು ಚಿನ್ಮಯಾನಂದ ನನ್ನು ವಜಾಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು.

'ಕಾಡುಪಾಪ'ಗಳ ರಕ್ಷಣೆ

ಮತ್ತೋರ್ವ ಆರೋಪಿ ಆಣೆಹೊಲ ಗ್ರಾಮದ ಮಹದೇವ ತಲೆಮರೆಸಿಕೊಂಡಿದ್ದಾನೆ.

ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿ ಸಮೀಪದ ಕೈಗಾರಿಕಾ ಪ್ರದೇಶವೊಂದರ ಮುಖ್ಯ ರಸ್ತೆಯ ಬಳಿ ಎರಡು ಕಾಡುಪಾಪ ಮಾರಾಟಕ್ಕಾಗಿ ಸಾಗಿಸುತ್ತಿರುವ ಖಚಿತ ಮಾಹಿತಿ ಪಡೆದ ಸಿಐಡಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ವಿಜಯರಾಜ್, ಮುಖ್ಯ ಪೇದೆಗಳಾದ ರಾಮಚಂದ್ರ ಸ್ವಾಮಿ, ತಖೀವುಲ್ಲ, ಶಂಕರ್, ಬಸವರಾಜು, ಪೇದೆ ಬಸವರಾಜು ಮತ್ತು ಚಾಲಕ ಪ್ರಭಾಕರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿ, ಕಾಡುಪಾಪಗಳನ್ನು ರಕ್ಷಿಸಿದರು. ಆರೋಪಿಗಳು ಬೆಂಗಳೂರಿನಲ್ಲಿ ಮಾರಲು ಈ ಕಾಡುಪಾಪ ಪ್ರಾಣಿಗಳನ್ನು ಪಂಜರದಲ್ಲಿಟ್ಟುಕೊಂಡು, ಬೈಕ್‌ನಲ್ಲಿ ಸಾಗಿಸುತ್ತಿದ್ದಾಗ ಕಾರ್ಯಾಚರಣೆ ನಡೆಸಲಾಯಿತು. ಬಂಧಿತರಿಂದ ಬ್ಯಾಗ್, ಹೀರೊ ಹೊಂಡಾ ಬೈಕ್(ಕೆಎ10, ಎಸ್ 6240) ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗಿದೆ. ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆರೋಪಿಗಳಿಗೆ ಡಿ.17ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ

ಮನು ಮೈಸೂರಿಂದ ಮಂಡ್ಯಕ್ಕೆ ಗಡಿಪಾರು

ಜಾರಿಗೊಳಿಸಿರುವ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಅಜರುದ್ದೀನ್ ಅವರು ಆರ್.ಎಕ್ಸ್.ಮನುವನ್ನು ಮಂಡ್ಯ ಜಿಲ್ಲೆಗೆ ಕಳುಹಿಸಿದ್ದು, ಒಂದು ತಿಂಗಳವರೆಗೂ ಮೈಸೂರು ನಗರ ಪ್ರವೇಶಿಸಬಾರದು. ಒಂದು ವೇಳೆ ಪ್ರವೇಶಿಸಿದರೆ ಬಂಧಿಸಿ ಜೈಲಿಗಟ್ಟಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ಮೈಸೂರಿನ ಬನ್ನಿಮಂಟಪ ಹುಡ್ಕೋ ಬಡಾವಣೆಯ ನಿವಾಸಿಯಾಗಿರುವ ಆರ್.ಎಕ್ಸ್.ಮನು ರೌಡಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದು, ಮೈಸೂರು ನಗರದ ಹಲವೆಡೆ ತನ್ನ ಕೃತ್ಯಗಳನ್ನು ನಡೆಸಿದ್ದಾನೆ. ಈತನ ವಿರುದ್ಧ ಕೊಲೆ ಯತ್ನ ಹಾಗೂ ಹಲ್ಲೆ ಪ್ರಕರಣಗಳು ದಾಖಲಾಗಿವೆ. ಈತ ಎನ್.ಆರ್.ಠಾಣೆ ವ್ಯಾಪ್ತಿಯಲ್ಲಿ ವಾಸಿಸುತ್ತಿದ್ದರೂ, ಎನ್.ಆರ್.ಠಾಣೆ ಮಾತ್ರವಲ್ಲದೇ ಮಂಡಿ, ವಿಜಯನಗರ, ಲಕ್ಷ್ಮೀಪುರಂ ಹಾಗೂ ಜಯಲಕ್ಷ್ಮೀಪುರಂ ಠಾಣಾ ವ್ಯಾಪ್ತಿಗಳಲ್ಲಿ ರೌಡಿ ಚಟುವಟಿಕೆಗಳನ್ನು ಸಕ್ರಿಯವಾಗಿ ನಡೆಸುತ್ತಿದ್ದ.



ನೀವು ಎಷ್ಟು ಪಕ್ಷ ಬದಲಾಯಿಸಿದ್ದೀರಿ... ನೀವು ಅಲೆಮಾರಿಗಳ ರಾಜ!

● ತಮ್ಮನ್ನು ಅಲೆಮಾರಿ ರಾಜಕಾರಣಿ ಎಂದ ಶ್ರೀನಿವಾಸಪ್ರಸಾದರಿಗೆ ಎಂಎಲ್‌ಸಿ ಹೆಚ್.ವಿಶ್ವನಾಥ್ ಪ್ರಶ್ನೆ ● ನನ್ನ ರಾಜಕೀಯ ಜೀವನ ಏರುಪೇರಾಗಿದ್ದು ನಿಮ್ಮಿಂದ

ಮೈಸೂರು, ಡಿ.15(ಆರ್‌ಕೆಬಿ)– ನೀವೆಲ್ಲಿದ್ರಿ ಸ್ವಾಮಿ..., ಎಷ್ಟು ಪಕ್ಷ ಬದಲಾಯಿಸಿದ್ದೀರಿ.... ನೀವು ಅಲೆಮಾರಿಗಳ ರಾಜ... ನಾನಲ್ಲ...

ತಮ್ಮನ್ನು ಅಲೆಮಾರಿ ರಾಜಕಾರಣಿ ಎಂದು ಜರಿದ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ವಿರುದ್ಧ ತಿರುಗಿ ಬಿದ್ದಿರುವ ಎಂಎಲ್‌ಸಿ ಹೆಚ್.ವಿಶ್ವನಾಥ್ ಗುರುವಾರ ಮೈಸೂರು ಪತ್ರಕರ್ತರ ಭವನದಲ್ಲಿ ಮಾತನಾಡಿ, ನೀವು ಅಲೆಮಾರಿಗಳ ರಾಜ... ನಾನಲ್ಲ ಎಂದು ತಿರುಗೇಟು ನೀಡಿದರು.

ಶ್ರೀನಿವಾಸಪ್ರಸಾದ್ ಅವರು ನಿಜಲಿಂಗಪ್ಪನವರ ಸಂಸ್ಥಾ ಕಾಂಗ್ರೆಸ್, ನಂತರ ಜನತಾ ಪಾರ್ಟಿ, ಅಲ್ಲಿಂದ ಕಾಂಗ್ರೆಸ್, ಸಮತಾ ಪಾರ್ಟಿ, ಜನತಾದಳ (ಸಂಯುಕ್ತ), ಜೆಡಿಎಸ್ ಸೆಕ್ಯುಲರ್, ನಂತರ ಕಾಂಗ್ರೆಸ್ ಸೇರಿ ಮತ್ತೇ ಬಿಜೆಪಿಗೆ ಸೇರಿದಿರಿ. ಕಾಂಗ್ರೆಸ್‌ನಲ್ಲಿ ಸಚಿವರು ಆಗಿದ್ರಿ, ಎಲ್ಲಾ ಪಕ್ಷ ಸುತ್ತಾಡಿ, ಕೆಲವೊಂದು ಪಕ್ಷಕ್ಕೆ ಎರಡೆರಡು ಬಾರಿ ಹೋಗಿದ್ರಿ ಹಾಗಾಗಿ ನೀವು ಅಲೆಮಾರಿಗಳ ರಾಜ ಎಂದು ವಿಶ್ವನಾಥ್ ಜರಿದರು.

ಅಂಥವರು ನನ್ನ ಬಗ್ಗೆ ಏಕೆ ಇಷ್ಟೊಂದು ಹಗುರವಾದ ಹೇಳಿಕೆ ಕೊಟ್ಟಿರಿ ಎಂಬುದೇ ನನಗರ್ಥವಾಗಿಲ್ಲ. ಶೋಷಿತರು, ದಲಿತರು ಎಂದು ಬಿಂಬಿಸಿಕೊಂಡಿರುವ ನೀವು, ಇತ್ತೀಚೆಗೆ ಒಮ್ಮೆಯೂ ಶೋಷಿತರು, ದಲಿತರ ಬಗ್ಗೆಯಾಗಲಿ, ಯಾವುದರ ಬಗ್ಗೆಯೂ ಸೊಲ್ಲೆತ್ತದ ನೀವು, ನನ್ನ ಬಗ್ಗೆ ದನಿ ಎತ್ತಿದ್ದು ಏಕೆ? ಇದರಲ್ಲಿ ನಿಮಗೆ ಇರುವ ಸ್ವಾರ್ಥವಾದರೂ ಏನು? ಯಾರನ್ನು ಮೆಚ್ಚಿಸಲಿಕ್ಕಾಗಿ ಇಂತಹ ಹೇಳಿಕೆ ಕೊಟ್ಟಿದ್ದೀರಿ. ಈಗ ಬಿಜೆಪಿ ಸರ್ಕಾರದ ಸಂಪುಟ ವಿಸ್ತರಣೆ ಆಗುತ್ತಿದೆ. ಬಿಜೆಪಿ ಹೈಕಮಾಂಡ್, ಬಿಎಸ್.ಯಡಿಯೂರಪ್ಪ ಬಸವರಾಜ ಬೊಮ್ಮಾಯಿ ಅವರನ್ನು ಮೆಚ್ಚಿಸಲು ಹೀಗೆ ಹೇಳಿದ್ದೀರಾ ಎಂದು ಕಟುವಾಗಿ ಪ್ರಶ್ನಿಸಿದರು.

ನನ್ನ ನಿಮ್ಮ ಸ್ನೇಹ ಬಹಳ ಹಳೆಯದು. ನಾನು ಮೈಸೂರು ಕೃಷ್ಣಮೂರ್ತಿಪುರಂ ನಿವಾಸಿ, ನೀವು ಅಶೋಕಪುರಂ ನಿವಾಸಿ. ನಮ್ಮಿಬ್ಬರ ಸ್ನೇಹ, ಪರಸ್ಪರ ಕಷ್ಟ ಸುಖ ಹಂಚಿಕೊಂಡು ಬೆಳೆದವರು. ಈಗಲೂ ನಿಮ್ಮ ಬಗ್ಗೆ ಬಹಳ ಗೌರವವಿದೆ. ಹಾಗಾಗಿ ಬಿಜೆಪಿಯಲ್ಲಿ ನಿಮ್ಮ ಸ್ವಾರ್ಥ ಎಷ್ಟಿದೆ ಎಂದರೆ ಬಿಜೆಪಿಗೆ ಕರೆದವರು ನೀವೇ ಅಲ್ಲವೇ? ನಾನು ಜೆಡಿಎಸ್‌ನಲ್ಲಿದ್ದೆ. ನೀವು ಜೆಡಿಎಸ್‌ನಲ್ಲಿದ್ದುದ್ದು ಮರೆತು ಹೋಯಿತೇ? ವಿಜಯೇಂದ್ರ ಅಪಾರ್ಟ್‌ಮೆಂಟ್‌ನಲ್ಲಿ ನನ್ನನ್ನು ಕರೆದೊಯ್ದಿದ್ದು, ನಿಮ್ಮ ಮಾತಿಗೆ ಬೆಲೆ ಕೊಟ್ಟು ನಾನು ಬಿಜೆಪಿ ಸೇರಿದ್ದು, ಇವೆಲ್ಲವೂ ಮರೆತು ಹೋಯಿತೇ? ನಿಮ್ಮ ಹಿರಿತನಕ್ಕೆ ನೀವು ಒಬ್ಬರು ಹೊರಬಂದರೆ, ಬಲ ಬರುತ್ತೆ ಎಂದು ಹೇಳಿದವರು ನೀವು ಎಂಬುದನ್ನು ಶ್ರೀನಿವಾಸಪ್ರಸಾದ್ ಅವರಿಗೆ ವಿಶ್ವನಾಥ್ ನೆನಪಿಸಿಕೊಟ್ಟರು.

ನಂತರ ಸರ್ಕಾರ ರಚನೆಯಲ್ಲೂ ಮಂತ್ರಿಗಿರಿ ಇಲ್ಲ., ಎಂಎಲ್‌ಸಿಯೂ ಮಾಡಲಿಲ್ಲ. ನಂತರ ಆರ್‌ಎಸ್‌ಎಸ್ ರಾಜ್ಯ ಪ್ರಮುಖರಾದ ಮುಕುಂದ್ ಅವರು ಇಲ್ಲದಿದ್ದರೆ ನನಗೆ ಎಂಎಲ್‌ಸಿಯೂ ಸಿಗುತ್ತಿರಲಿಲ್ಲವೇನೋ. ಇಷ್ಟೆಲ್ಲಾ ಆದರೂ ನಿಮ್ಮ ಸ್ನೇಹಕ್ಕೆ ಬಲಿ ಬಿದ್ದು, ನನ್ನ ರಾಜಕೀಯ ಜೀವನ ಏರುಪೇರಾಗಿದ್ದು ನಿಮ್ಮಿಂದ ಎಂದು ಕುಟುಕಿದರು.

ಮಲ್ಲಿಕಾರ್ಜುನ ಖರ್ಗೆ ಹಿರಿಯ ರಾಜಕಾರಣಿ. ಅವರು ಎಐಸಿಸಿ ಅಧ್ಯಕ್ಷ ರಾದರು. ಸೌಜನ್ಯಕ್ಕೆ ನಾನು ಅವರನ್ನು ಭೇಟಿ ಮಾಡಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಆಸ್ಪತ್ರೆಯಿಂದ ಬಂದಾಗ ಆರೋಗ್ಯ ವಿಚಾರಿಸಲು ಭೇಟಿ ಮಾಡಿದ್ದೆ. ಅವರೆಲ್ಲ ರನ್ನೂ ಸೌಜನ್ಯಕ್ಕೆ ಭೇಟಿ ಮಾಡಿದ್ದನ್ನೇ ಮಹಾಪರಾಧ ಎಂಬಂತೆ ಟೀಕಿಸಿದ್ದೀರಿ. ಸಿದ್ದರಾಮಯ್ಯರಿಗೆ ಕಾಡಿಬೇಡಿ ನೀವು ಮಂತ್ರಿಯಾಗಿರಲಿಲ್ಲವೇ? ನಾನು ಅವಕಾಶವಾದಿ ರಾಜಕಾರಣಿ ಅಲ್ಲ. ನನ್ನ ತತ್ವ ಸಿದ್ಧಾಂತವನ್ನು ಬಿಟ್ಟುಕೊಟ್ಟಿಲ್ಲ. ಸ್ನೇಹ, ಸೌಹಾರ್ದ ಎಲ್ಲೂ ನನ್ನ ಕೈಕೊಡಿಸಿಕೊಂಡಿಲ್ಲ. ವಿಶ್ವನಾಥ್ ಭ್ರಷ್ಟ, ಅಸಮರ್ಥ ಎಂದು ಅನಿಸಿಕೊಂಡಿಲ್ಲ ಎಂದು ವಿಶ್ವನಾಥ್ ಹೇಳಿದರು.

ಆದರೆ ನಿಮಗೂ ನೈತಿಕತೆ ಎಂಬುದಿದೆ ಅದನ್ನೇಕೆ ಬಲಿ ಕೊಟ್ಟಿದ್ದೀರಿ. ನೀವು ಎಷ್ಟು ಬಾರಿ ಅವಕಾಶವಾದಿಯಾಗಿ ಪಕ್ಷಗಳಿಗೆ ಹೋಗಿದ್ದೀರಿ. ಅಶೋಕಪುರಂನಲ್ಲಿ ನೀವೇ ಕಟ್ಟಿದ ಡಾ.ಅಂಬೇಡ್ಕರ್ ಸಾಂಸ್ಕೃತಿಕ ಸಂಘದ ಸ್ಥಿತಿ ಈಗ ಹೇಗಿದೆ. ಹುಟ್ಟಿ ಬೆಳೆದ ಅಶೋಕಪುರಂಗೆ ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು, ಮಾತಿನಲ್ಲಿ ಜಾಗ್ರತೆ ಇರಲಿ ಎಂದು ಶ್ರೀನಿವಾಸಪ್ರಸಾದ್ ಅವರಿಗೆ ಸಲಹೆ ನೀಡಿದರು.

ಬಿಜೆಪಿ ಬಿಡ್ತೇನೆ... ಕಾಂಗ್ರೆಸ್ ಸೇರ್‍ತೇನೆ ಎಂದು ಎಲ್ಲಾದ್ರೂ ಹೇಳಿದ್ದೇನೆಯೇ...?

ನಾನು ಬಿಜೆಪಿ ಬಿಡುತ್ತೇನೆ. ಕಾಂಗ್ರೆಸ್‌ಗೆ ಹೋಗುತ್ತೇನೆ ಅಂತ ನಾನು ಎಲ್ಲಾದರೂ ಹೇಳಿದ್ದೇನೆಯೇ? ಎಂದು ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿಶ್ವನಾಥ್, ನಾನು ಮಾಧ್ಯಮಕ್ಕೆ ತಿಳಿಸಿಯೇ ಹೋಗುತ್ತೇನಲ್ಲವೇ ಎಂದು ಮರು ಪ್ರಶ್ನೆ ಹಾಕಿದರು. ಮತ್ತೊಂದು ಪಕ್ಷದ ನಾಯಕನನ್ನೂ ನೋಡಲು ಸೌಜನ್ಯದ ಭೇಟಿ ನೀಡಿದ್ದು ತಪ್ಪೇ ಎಂದು ಪುನರುಚ್ಚರಿಸಿದ ಅವರು, ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾದ ಮೇಲೆ ಮೋದಿಯವರು ಅಭಿನಂದಿಸಿದರು. ಹಾಗಾದರೆ ಮೋದಿಯವರೂ ಕಾಂಗ್ರೆಸ್ ಸೇರಿಬಿಡುತ್ತಾರೆಂದು ಅರ್ಥವೇ ಎಂದು ಪ್ರಶ್ನಿಸಿದರು.

ಶ್ರೀನಿವಾಸಪ್ರಸಾದ್ ನನ್ನನ್ನು ಬಿಜೆಪಿಗೆ ಕರೆದುಕೊಂಡು ಹೋದಾದರೂ ಯಾರೂ ನನಗೆ ಸಹಾಯ ಮಾಡಲಿಲ್ಲ ಎಂದು ಬಿಜೆಪಿ ನಾಯಕರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ವಿಜಯೇಂದ್ರ ನನಗೆ ಹಣ ಕೊಡಲು ಬಂದಿದ್ದರು!

ಮೈಸೂರು; ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ನನಗೆ ಹಣ ಕೊಡಲು ಬಂದಿದ್ದರು. ಈ ವಿಚಾರವನ್ನು ನಾನು ಬಾಂಬೆ ಡೇಸ್ ಪುಸ್ತಕದಲ್ಲಿ ಪ್ರಸ್ತಾಪ ಮಾಡಿದ್ದೇನೆ ಎಂದು ಎಂಎಲ್‌ಸಿ ಎಚ್.ವಿಶ್ವನಾಥ್ ಬಾಂಬ್ ಸಿಡಿಸಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ಬಾಂಬೆ ಡೇಸ್ ಪುಸ್ತಕ ಪ್ರಿಂಟ್ ಆಗುತ್ತಿದೆ. ಯಾವಾಗ ಬಿಡುಗಡೆ ಅನ್ನೋದನ್ನು ಶೀಘ್ರದಲ್ಲೇ ಹೇಳುತ್ತೇನೆ ಎಂದು ಹೇಳಿದ್ದಾರೆ.

ವಿ.ಶ್ರೀನಿವಾಸಪ್ರಸಾದ್, ಯಡಿಯೂರಪ್ಪ ನಾನು ವಿಜಯೇಂದ್ರ ಅವರ ಅಪಾರ್ಟ್‌ಮೆಂಟ್‌ನಲ್ಲಿ ಮಾತನಾಡಿದ್ದೆವು, ಆಗ ನನಗೆ ವಿಜಯೇಂದ್ರ ಹಣ ಕೊಡಲು ಬಂದಿದ್ದರು. ಬಳಿಕ ಏನಾಯ್ತು ಎಂಬುದನ್ನೆಲ್ಲ ಬಾಂಬೆ ಡೇಸ್ ಪುಸ್ತಕದ ಮೊದಲ ಅಧ್ಯಾಯದಲ್ಲೇ ಬರೆದಿದ್ದೇನೆ. ಡಿಟಿಪಿ ಆಗುವ ಹಂತದಲ್ಲೇ ಪತ್ರಿಕೆಯೊಂದು ಅದನ್ನು ಪ್ರಕಟಿಸಿಯೂ ಬಿಟ್ಟಿದೆ. ಪುಸ್ತಕ ರೆಡಿ ಆಗುತ್ತಿದೆ, ಯಾವಾಗ ಪ್ರಿಂಟ್ ಆಗುತ್ತೆ, ಯಾವಾಗ ಬರುತ್ತೆ ಅನ್ನೋದನ್ನು ಶೀಘ್ರದಲ್ಲೇ ಹೇಳುತ್ತೇನೆ ಎಂದು ವಿಶ್ವನಾಥ್ ಹೇಳಿದ್ದಾರೆ.

ಎಸ್‌ಸಿ, ಎಸ್‌ಟಿ ಸಂಶೋಧನಾ ಅಭ್ಯರ್ಥಿಗಳಿಗೆ

ಬಾಕಿ ಶಿಷ್ಯವೇತನ ಮಂಜೂರಿಗೆ ಆಗ್ರಹಿಸಿ ಧರಣಿ



ಮೈಸೂರು,ಡಿ.15(ಎಂಟಿವೈ)– 2021ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾದ ಎಸ್‌ಸಿ, ಎಸ್ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಹಿಂಬಾಕಿ ಶಿಷ್ಯವೇತನ ಮಂಜೂರು ಮಾಡುವಂತೆ ಒತ್ತಾಯಿಸಿ ಸಂಶೋಧನಾ ವಿದ್ಯಾರ್ಥಿಗಳು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂದೆ ಸಂಶೋಧಕರ ಸಂಘದ ವತಿಯಿಂದ ಆರಂಭವಾದ ಅನಿರ್ದಿಷ್ಟಾವಧಿ ಧರಣಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಮೈಸೂರು ವಿವಿಯ ದುರಾಡಳಿತದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

2020–2021ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿವಿಯ ಪರಿಶಿಷ್ಟ ಜಾತಿ, ಪಂಗಡದ ವಿಶೇಷ ಘಟಕದ ವತಿಯಿಂದ ನೀಡುವ ಸಂಶೋಧನಾ ಶಿಷ್ಯವೇತನಕ್ಕೆ 46 ಜನರನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಶಿಷ್ಯ ವೇತನದ ಆದೇಶ ಪ್ರತಿಯಲ್ಲಿ ಪಿಹೆಚ್.ಡಿ ಪದವಿಗೆ ತಾತ್ಕಾಲಿಕ ನೋಂದಣಿಯಾದ ದಿನಾಂಕದಿಂದ 5 ವರ್ಷಗಳವರೆಗೆ ಶಿಷ್ಯ ವೇತನ ನೀಡಿದ್ದೇವೆ ಎಂದು ನಮೂದಿಸಿದ್ದಾರೆ. ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು 2017–2018 ಮತ್ತು 2019–2020ನೇ ಶೈಕ್ಷಣಿಕ ಸಾಲಿನಲ್ಲಿ ಪಿಹೆಚ್.ಡಿಗೆ ತಾತ್ಕಾಲಿಕ ನೋಂದಣಿಯಾಗಿದ್ದು 2021ಕ್ಕಿಂತ ಹಿಂದಿನ ಸಾಲಿನ ಶಿಷ್ಯ ವೇತನವನ್ನು ಯಾರೂ ಪಡೆದಿಲ್ಲ. ಆದರೂ ನೋಂದಣಿಯಾದ ದಿನಾಂಕದಿಂದಲೇ ಶಿಷ್ಯವೇತನ ನೀಡಿದ್ದೇವೆ ಎಂದು ಆದೇಶ ಪ್ರತಿಯಲ್ಲಿ ನಮೂದಿಸಿದ್ದಾರೆ ಎಂದು ಆರೋಪಿಸಿದರು.

ಕಳೆದ ಎರಡು ವರ್ಷಗಳಿಂದ ವಿಶ್ವವಿದ್ಯಾನಿಲಯಕ್ಕೆ ನಿರಂತರವಾಗಿ ಮನವಿ ಮಾಡುತ್ತಾ ಬಂದರೂ ಸಕಾರಾತ್ಮಕ ಸ್ಪಂದನೆ ದೊರೆತಿಲ್ಲ. ಕೇವಲ ಹುಸಿ ಭರವಸೆ ಗಳನ್ನು ನೀಡುತ್ತಾ ವಿವಿಯ ಆರ್ಥಿಕ ಸ್ಥಿತಿಯ ಕುರಿತು ಹುಸಿ ಸುಳ್ಳುಗಳನ್ನು ಹೇಳಿ ಕಾಲಹರಣ ಮಾಡುತ್ತಿದ್ದಾರೆ. ಈ ಹಿಂದಿನ ಸಾಲಿನ ಶಿಷ್ಯ ವೇತನದ ಹಣವನ್ನೂ ನೀಡದೆ ದುರ್ಬಳಕೆ ಮಾಡಿಕೊಳ್ಳಲಾಗಿದೆ. ಕೂಡಲೇ ಹಿಂಬಾಕಿ ಹಣವನ್ನು ಮಂಜೂರು ಮಾಡಿಕೊಡಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಮರಿದೇವಯ್ಯ, ಸಂಶೋಧಕರಾದ ಪ್ರತಾಪ್.ಸಿ.ಎಂ, ಕಿರಣ್.ಡಿ, ರವಿ.ಕೆ.ಎಂ, ರಾಜೇಂದ್ರ ಅಶ್ವಿನಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.


ಬೇಕರಿ ಕಾರ್ಮಿಕರಿಗೆ ರಕ್ಷಣೆ ಕಲ್ಪಿಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು,ಡಿ.15(ಎಂಟಿವೈ)– ಬೇಕರಿ ಕಾರ್ಮಿಕರ ಮೇಲೆ ಹಲ್ಲೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಕಾರ್ಮಿಕರಿಗೆ ರಕ್ಷಣೆ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಬೇಕರಿ ಪದಾರ್ಥ ತಯಾರಿಕ ಕಾರ್ಮಿಕರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನ್ಯಾಯಾಲಯದ ಮುಂಭಾಗವಿರುವ ಮಹಾತ್ಮಗಾಂಧಿ ಪುತ್ಥಳಿ ಮುಂದೆ ಪ್ರತಿಭಟನೆ ನಡೆಸಿದ ಬೇಕರಿ ಕಾರ್ಮಿಕರು, ಇತ್ತೀಚೆಗೆ ಬೆಂಗಳೂರಿನ ಕುಂದನಹಳ್ಳಿ ಸಮೀಪವಿರುವ ಬೇಕರಿಯಲ್ಲಿ ರಾತ್ರಿ ವೇಳೆ ಕೆಲಸ ಮಾಡು ತ್ತಿದ್ದ ಮೂವರು ಕಾರ್ಮಿಕರ ಮೇಲೆ ಸ್ಥಳೀಯ ರೌಡಿಗಳು ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾರೆ. ಹಲ್ಲೆಗೊಳಗಾದವರು ವಲಸೆ ಕಾರ್ಮಿಕರಾಗಿದ್ದು, ಸಂಕಷ್ಟಕ್ಕೀಡಾಗಿದ್ದಾರೆ. ಹೊಟ್ಟೆಪಾಡಿಗಾಗಿ ದುಡಿಯುವ ಕಾರ್ಮಿಕರಿಗೆ ಯಾವುದೇ ರಕ್ಷಣೆ ಇಲ್ಲದಂತಾಗಿದ್ದು, ಇದರಿಂದ ನೆಮ್ಮದಿಯ ಜೀವನ ನಡೆಸುವುದೇ ಕಷ್ಟವಾಗಿದೆ. ಹೀಗಾಗಿ ಸರ್ಕಾರ ಕೂಡಲೇ ಹಲ್ಲೆ ಮಾಡಿದ ರೌಡಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಬೇಕರಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ರಕ್ಷಣೆ ನೀಡಬೇಕು. ಕಾರ್ಮಿಕ ಇಲಾಖೆಯಿಂದ ಹೊಸ ಯೋಜನೆ ಜಾರಿಗೊಳಿಸಿ ಕಾರ್ಮಿಕರ ಪರ ನಿಲ್ಲಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಶಿವರಾಜು, ಉಪಾಧ್ಯಕ್ಷ ವಿಮಲ್ ಕುಮಾರ್, ಕಾರ್ಯದರ್ಶಿ ಆನಂದ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಡಿ.ಇ. ರಮೇಶಗೆ ಪಿಎಚ್.ಡಿ



ಡಾ. ಎನ್. ಸರಸ್ವತಿ ಅವರ ಮಾರ್ಗದರ್ಶನದಲ್ಲಿ ಡಿ.ಇ. ರಮೇಶ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಡಾ. ರಾಜ್‌ಕುಮಾರ್ ಕುಟುಂಬದೊಂದಿಗೆ ಶಕ್ತಿಧಾಮದ ಮಕ್ಕಳ ನೆರವಿಗೆ ಸದಾ ಸಿದ್ಧ

ತಮಿಳು ನಟ ವಿಶಾಲ್ ಪುನರುಚ್ಚಾರ

ಮೈಸೂರು, ಡಿ.15(ಎಂಟಿವೈ)– ಶಕ್ತಿಧಾಮದ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಡಾ.ರಾಜ್‌ಕುಮಾರ್ ಅವರ ಕುಟುಂಬದೊಂದಿಗೆ ಸೇವೆ ಸಲ್ಲಿಸಲು ಬದ್ಧನಾಗಿದ್ದೇನೆ ಎಂದು ತಮಿಳು ನಟ ವಿಶಾಲ್ ಸ್ಪಷ್ಟಪಡಿಸಿದ್ದಾರೆ. ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ



ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಕ್ತಿಧಾಮದಿಂದ ಯಾವ ಸಹಾಯ ಕೇಳಿದರೂ ಮಾಡಲು ನಾನು ಸಿದ್ಧನಿದ್ದೇನೆ. ಈ ಮೊದಲೇ ಇಲ್ಲಿನ ಮಕ್ಕಳಿಗೆ ಸಹಾಯ ಮಾಡಲು ನಿರ್ಧರಿಸಿದ್ದೆ. ಈಗಲೂ ಪುನೀತ್ ರಾಜ್‌ಕುಮಾರ್ ಅವರ ಆಶಯಗಳನ್ನು ನೆರವೇರಿಸಲು ನಾನು ಬದ್ಧನಾಗಿದ್ದೇನೆ ಎಂದರು.

ನಟ ಪ್ರಕಾಶ್ ರಾಜ್ ಅವರು ಅಪ್ಪು ಅವರ ಹೆಸರಿನಲ್ಲಿ ಆಂಬುಲೆನ್ಸ್ ಕೊಡುಗೆ ನೀಡಿ, ಉತ್ತಮ ಕೆಲಸ ಮಾಡಿದ್ದಾರೆ. ಆ ಸಮಯದಲ್ಲಿ ಅವರು ನನಗೂ ಕರೆ ಮಾಡಿದ್ದರು. ಆಂಬುಲೆನ್ಸ್ ಸೇವೆಗೆ ನನ್ನ ಕೈಲಾದ ಸಹಾಯವನ್ನು ನಾನು ಮಾಡುತ್ತೇನೆ ಎಂದು ಅವರಿಗೆ ತಿಳಿಸಿದ್ದೇನೆ. ನಟರಾಗಿ ನಾವು ಸಮಾಜಕ್ಕೆ ಒಳ್ಳೆಯ ಕೆಲಸಗಳನ್ನು ಮಾಡುತ್ತಿರಬೇಕು. ಅದು ನಮ್ಮ ಆದ್ಯ ಕರ್ತವ್ಯ ಎಂದು ಅಭಿಪ್ರಾಯಪಟ್ಟರು.

ಪೈರಸಿ ವಿರುದ್ಧ ಕ್ರಮಕ್ಕೆ ಆಗ್ರಹ: ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಪೈರಸಿ ಹಾವಳಿ ಹೆಚ್ಚಾಗಿದೆ. ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಸರ್ಕಾರ ಮನಸ್ಸು ಮಾಡಿದರೆ ಸೈಬರ್ ಕ್ರೈಂ ಮೂಲಕ ಪೈರಸಿ ವಿರುದ್ಧ ಕ್ರಮ ಕೈಗೊಳ್ಳಬಹುದು. ನಿರ್ಮಾಪಕರ ಶ್ರಮವನ್ನೆಲ್ಲಾ ಹಾಳು ಮಾಡುತ್ತಿರುವ ಈ ಪೈರಸಿ ಸಮಸ್ಯೆಗೆ ಶಾಶ್ವತ ಬ್ರೇಕ್ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಚಲನಚಿತ್ರೋದ್ಯಮಗಳಿಗೆ ಇರುವ ಶೇ.28ರಷ್ಟು ಜಿಎಸ್‌ಟಿಯನ್ನು ಕಡಿಮೆ ಮಾಡಬೇಕು ಎಂದು ಇದೇ ವೇಳೆ ಒತ್ತಾಯಿಸಿದರು.

ಡಿ.22ರಂದು 'ಲಾಠಿ' ಬಿಡುಗಡೆ: ನಾನು ನಟಿಸಿರುವ 'ಲಾಠಿ' ಚಿತ್ರ ಡಿ.22ರಂದು ತಮಿಳು, ತೆಲುಗು, ಹಿಂದಿ, ಕನ್ನಡ ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಈ ಚಿತ್ರದಲ್ಲಿ ನಾನು ಪೊಲೀಸ್ ಪೇದೆ ಪಾತ್ರದಲ್ಲಿ ನಟಿಸಿದ್ದೇನೆ. ಎಲ್ಲರೂ ಸಾಮಾನ್ಯವಾಗಿ ಹಿರಿಯ ಅಧಿಕಾರಿಗಳ ಕೇಂದ್ರೀಕರಿಸಿ, ಸಿನಿಮಾ ಮಾಡುತ್ತಾರೆ. ಆದರೆ ಒಬ್ಬ ನಟನಾಗಿ ನಾನು ಎಲ್ಲ ರೀತಿಯ ಪಾತ್ರಗಳನ್ನೂ ಮಾಡಲು ಇಚ್ಛಿಸುತ್ತೇನೆ. ಒಬ್ಬ ಕಾನ್‌ಸ್ಟೇಬಲ್‌ನ ದೃಷ್ಟಿಕೋನದಿಂದ ಈ ಚಿತ್ರ ನಿರ್ಮಿಸಲಾಗಿದೆ ಎಂದರು.

ಎಂಐಟಿ ಕಾಲೇಜಿಗೆ ಭೇಟಿ: ತಾಂಡವಪುರದಲ್ಲಿರುವ ಎಂಐಟಿ ಕಾಲೇಜಿಗೆ ನಟ ವಿಶಾಲ್ ಭೇಟಿ ನೀಡಿದ್ದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ವಿಶಾಲ್ ಅವರ ಕಾರ್ಯ ಮೆಚ್ಚಿ ಮುಂದಿನ ಶೈಕ್ಷಣಿಕ ಸಾಲಿನಿಂದ ಇಂಜಿನಿಯರಿಂಗ್‌ನ ಐದು ಸೀಟನ್ನು ಉಚಿತವಾಗಿ ನೀಡಲು ನಿರ್ಧರಿಸಲಾಗಿದೆ. ಈ ಸೌಲಭ್ಯವನ್ನು ವಿಶಾಲ್ ಅವರು ಆರ್ಥಿಕವಾಗಿ ಹಿಂದುಳಿದ, ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ ಬಳಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಭಾರೀ ಪ್ರತಿಭಟನೆ

ತಳ ಸಮುದಾಯಗಳಿಗೆ ಮೀಸಲಾತಿ ವಂಚನೆ ಹುನ್ನಾರ: ಆರೋಪ



ಮೈಸೂರು,ಡಿ.15(ಎಂಟಿವೈ)– ಜನಸಂಖ್ಯೆಗೆ ಅನುಗುಣವಾಗಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವಂತೆ ಆಗ್ರಹಿಸಿ ಮೈಸೂರಲ್ಲಿ ಗುರುವಾರ ಹಿಂದುಳಿದ ಹಾಗೂ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಕಾರ್ಯಕರ್ತರು ಭಾರೀ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ವಿವಿಧ ಸಮುದಾಯಗಳ ಮುಖಂಡರು ಹಕ್ಕೊತ್ತಾಯ ಮಂಡಿಸಿದರು. ಹಿಂದುಳಿದ ವರ್ಗ 2ಎ ಮತ್ತು ಪ್ರವರ್ಗ–1ರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ ಮೀಸಲಾತಿಯ ಆಶಯಕ್ಕೆ ವಿರುದ್ಧವಾಗಿ, ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ತಳ ಸಮುದಾಯಗಳನ್ನು ಮೀಸಲಾತಿಯಿಂದ ವಂಚಿಸುವ ಹುನ್ನಾರಕ್ಕೆ ಸರ್ಕಾರ ಕೈಹಾಕಿದೆ. ಕೇಂದ್ರ ಸರ್ಕಾರ ಸಂವಿಧಾನಕ್ಕೆ 103ನೇ ತಿದ್ದುಪಡಿ ತರುವ ಮೂಲಕ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ.4–5ರಷ್ಟಿರುವವರಿಗೆ ಶೇ.10 ಮೀಸಲಾತಿ ನೀಡಿರುವುದರಿಂದ ಇತರ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗಿದೆ. ಇತರ ಹಿಂದುಳಿದ ವರ್ಗಗಳಿಗೂ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೋಟಾ ಹೆಚ್ಚಿಸಬೇಕು. ಪ್ರಸ್ತುತ 2ಎ ವರ್ಗಕ್ಕೆ ಶೇ.15 ಮೀಸಲಾತಿ ಇದ್ದು, ಈ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮಂಡಲ್ ವರದಿಯ ಶಿಫಾರಸ್ಸಿನಂತೆ ಶೇ.27ಕ್ಕೆ ಹೆಚ್ಚಿಸಬೇಕು. ಪ್ರವರ್ಗ–1ರಡಿಯಲ್ಲಿ ಬರುವ ಮೀಸಲಾತಿ ಪ್ರಮಾಣ ಶೇ.4ರಷ್ಟಿದ್ದು, ಅದನ್ನು ಶೇ.9ಕ್ಕೆ ಹೆಚ್ಚಿಸಬೇಕೆಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ರದ್ದುಗೊಳಿಸಿರುವುದು ಖಂಡನೀಯ. 2 ವರ್ಷಗಳಿಂದಲೂ ವಿದ್ಯಾರ್ಥಿ ವೇತನ ನೀಡದೆ ವಿದ್ಯಾರ್ಥಿಗಳನ್ನು ವಂಚಿಸಲಾಗಿದೆ. ಇದು ಎಸ್‌ಸಿ, ಎಸ್‌ಟಿ, ಓಬಿಸಿ ವಿದ್ಯಾರ್ಥಿಗಳನ್ನು ಶಿಕ್ಷಣದಿಂದ ವಂಚಿತಗೊಳಿಸಿ ಅವರನ್ನು ಶಿಕ್ಷಣದಿಂದ ವಿಮುಖಗೊಳಿಸುವ ಉದ್ದೇಶವಾಗಿದೆ. ಹೀಗಾಗಿ ಕೂಡಲೇ ಸರ್ಕಾರ ಎಚ್ಚೆತ್ತು ವಿದ್ಯಾರ್ಥಿ ವೇತನ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮೇಲ್ವರ್ಗದ ದಬ್ಬಾಳಿಕೆಯಿಂದಾಗಿ ಶೋಷಿತ ಸಮುದಾಯಗಳು ಶತಮಾನಗಳಿಂದಲೂ ದೌರ್ಜನ್ಯಕ್ಕೆ ತುತ್ತಾಗಿವೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಶೋಷಿತ ಸಮುದಾಯಗಳು ತೊಂದರೆ ಅನುಭವಿಸಿವೆ. ಇದನ್ನು ಮನಗಂಡು ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ 1925ರಲ್ಲೇ ಶೋಷಿತ ಸಮುದಾಯಕ್ಕೆ ಶೇ.75ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಿದರು. ನಂತರ ಮಾಜಿ ಸಿಎಂ ದೇವರಾಜ ಅರಸ್ ಅವರ ಕಾಲದಲ್ಲಿ ಶೋಷಿತ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಮುಂದುವರೆಸಲಾಯಿತು. ದೇವರಾಜ ಅರಸ್ ಅವರ ಕಾಲದಲ್ಲಿ ನಿಗದಿಯಾಗಿದ್ದ ಮೀಸಲಾತಿ ಪ್ರಮಾಣ ಇಂದಿಗೂ ಅಷ್ಟೇ ಇದೆ. ಅಂದಿನಿಂದ ಇಂದಿನವರೆಗೂ ಜನಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಂವಿಧಾನದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡುವುದಕ್ಕೆ ಅವಕಾಶ ನೀಡಿಲ್ಲ. ಆದರೂ, ಮೇಲ್ವರ್ಗದ ಹಿಂದುಳಿದವರಿಗೆ ಶೇ.10ರಷ್ಟು ಮೀಸಲಾತಿ ನೀಡಲಾಗಿದೆ. ಜನಸಂಖ್ಯೆಯಲ್ಲಿ ಶೇ.3–4ರಷ್ಟು ಜನ ಇರುವ ಈ ವರ್ಗಕ್ಕೆ ಮೀಸಲಾತಿ ನೀಡಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಇದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಶೇ.60ರಷ್ಟು ಇರುವ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಶೇ.15ರಷ್ಟು ಮೀಸಲಾತಿ ನೀಡಲಾಗಿದೆ. 200ಕ್ಕೂ ಹೆಚ್ಚು ಜಾತಿ ಇರುವ ಈ ವರ್ಗಗಳಿಗೆ ಇದು ಸಾಲುವುದಿಲ್ಲ. ಈ ಹಿಂದೆಯೇ ಮಂಡಲ್ ವರದಿಯಲ್ಲಿ ಹಿಂದುಳಿದ ವರ್ಗಗಳಿಗೆ ಶೇ.27ರಷ್ಟು ಮೀಸಲಾತಿ ನೀಡಬೇಕು ಎಂದು ಉಲ್ಲೇಖಿಸಲಾಗಿದೆ. ಪ್ರವರ್ಗ 1ರ ಸಮುದಾಯಗಳಿಗೆ ನೀಡಿರುವ ಶೇ.4ರ ಮೀಸಲಾತಿ ಸೌಲಭ್ಯವನ್ನು ಶೇ.9ಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಜಿಲ್ಲಾಧ್ಯಕ್ಷ ಪಿ.ನಾಗಭೂಷಣ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಸಿ.ಟಿ.ಆಚಾರ್ಯ, ಲೋಕೇಶ್‌ಕುಮಾರ್ ಮಾದಾಪುರ, ಮಹೇಂದ್ರ ಕಾಗಿನೆಲೆ, ಎಸ್.ಆರ್.ರವಿ, ಮೈಸೂರು ಬಸವಣ್ಣ, ಆರ್.ಕೆ.ರವಿ, ಹರೀಶ್ ಮೊಗಣ್ಣ ಸೇರಿದಂತೆ ಹಲವರು ಭಾಗವಹಿಸಿದ್ದರು.

ಫಿಫಾ ಫುಟ್‌ಬಾಲ್: ಹಾಲಿ ಚಾಂಪಿಯನ್ ಫ್ರಾನ್ಸ್ ಫೈನಲ್ ಪ್ರವೇಶ

● ಸುಲಭ ತುತ್ತಾದ ಮೊರಕೊ ● ಭಾನುವಾರ ಕಪ್‌ಗಾಗಿ ಅರ್ಜೆಂಟೀನಾದೊಂದಿಗೆ ಸೆಣಸಾಟ

ಕತಾರ್, ಡಿ.15– ಅಲ್‌ಬೈತ್ ಕ್ರೀಡಾಂಗಣವನ್ನು ಕೆಂಪು ಸಮುದ್ರವಾಗಿ ಬದಲಾಯಿಸಿದ್ದ ಮೊರೊಕ್ಕೊ ಅಭಿಮಾನಿಗಳ ಕನಸನ್ನು ನುಚ್ಚುನೂರು ಮಾಡಿದ ಫ್ರಾನ್ಸ್ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ರೋಚಕತೆಯಿಂದ ಕೂಡಿದ್ದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಮೊರಾಕೊ ವಿರುದ್ಧ 2–0 ಅಂತರದಲ್ಲಿ ಗೆಲುವು ಪಡೆದ ಹಾಲಿ ಚಾಂಪಿಯನ್ ಫ್ರಾನ್ಸ್, ಸತತ 2ನೇ ಬಾರಿ ಫೈನಲ್ ಪ್ರವೇಶಿಸಿದ್ದು, ಡಿ.18 ರಂದು ಭಾನುವಾರ ಪ್ರಶಸ್ತಿಗಾಗಿ ನಡೆಯುವ ಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ ಸವಾಲನ್ನು ಎದುರಿಸಲಿದೆ. ಟೂರ್ನಿಯ ಅಂತಿಮ ಹಣಾಹಣಿಯನ್ನು ದಿಗ್ಗಜ ಆಟಗಾರ ಲಯೊನೆಲ್ ಮೆಸ್ಸಿ ಮತ್ತು 'ನವತಾರೆ' ಕಿಲಿಯನ್ ಎಂಬಾಪೆ ನಡುವಿನ ಹೋರಾಟ ಎಂದೇ ಬಿಂಬಿಸಲಾಗಿದೆ.

2002ರಲ್ಲಿ ಬ್ರೆಜಿಲ್ ಬಳಿಕ ಇದೇ ಮೊದಲ ಬಾರಿಗೆ ಹಾಲಿ ಚಾಂಪಿಯನ್ ತಂಡವೊಂದು ಸತತ 2ನೇ ಬಾರಿ ಫಿಫಾ ವಿಶ್ವಕಪ್ ಟೂರ್ನಿಯ ಫೈನಲ್ ಪ್ರವೇಶಿಸಿದ ಕೀರ್ತಿಗೆ ಫ್ರಾನ್ಸ್ ಭಾಜನವಾಗಿದೆ. ಒಂದು ವೇಳೆ ಫೈನಲ್ ಪಂದ್ಯದಲ್ಲಿ ಗೆದ್ದು ಪ್ರಶಸ್ತಿ ಮುಡಿಗೇರಿಸಿಕೊಂಡರೆ, ಬ್ರೆಜಿಲ್(1962) ಹಾಗೂ ಇಟಲಿ(1938) ತಂಡಗಳ ಬಳಿಕ ಪ್ರಶಸ್ತಿ ಉಳಿಸಿಕೊಂಡ 3ನೇ ತಂಡ ಎಂಬ ಸಾಧನೆಗೆ ಫ್ರಾನ್ಸ್ ಪಾತ್ರವಾಗಲಿದೆ.

ಫಿಫಾ ವಿಶ್ವಕಪ್ ಟೂರ್ನಿ ಇತಿಹಾಸದಲ್ಲಿಯೇ ಸೆಮಿಫೈನಲ್‌ಗೆ ಅರ್ಹತೆ ಪಡೆದ ಮೊದಲ ಆಫ್ರಿಕಾ ಖಂಡದ ತಂಡ ಎಂಬ ಕೀರ್ತಿಗೆ ಭಾಜನವಾಗಿದ್ದ ಮೊರಾಕೊ, ಸೆಮಿಫೈನಲ್ ಪಂದ್ಯದಲ್ಲಿ ನಿರಾಶೆ ಅನುಭವಿಸಿತು. ಇದೀಗ ಫಿಫಾ ವಿಶ್ವಕಪ್ ಟೂರ್ನಿಯ 3ನೇ ಸ್ಥಾನಕ್ಕಾಗಿ ಮೊರಾಕೊ ತಂಡ ಶನಿವಾರ ಕ್ರೊಯೆಷ್ಯಾ ವಿರುದ್ಧ ಸೆಣಸಲಿದೆ.

ಪಂದ್ಯದ ಆರಂಭದಲ್ಲೇ ಫ್ರಾನ್ಸ್ ಯೋಜನೆ ಸಕಾರವಾಯಿತು. ಫ್ರಾನ್ಸ್ ತಂಡ ಐದನೇ ನಿಮಿಷದಲ್ಲೇ ಮುನ್ನಡೆ ಗಳಿಸಿತು. ಆಂಟೋನ್ ಗ್ರೀಸ್‌ಮನ್ ಅವರ ಪಾಸ್‌ನಿಂದ ದೊರೆತ ಚೆಂಡನ್ನು ಎಂಬಾಪೆ ಅವರು ಗುರಿಯತ್ತ ಒದ್ದರೂ ಮೊರೊಕ್ಕೊ ಡಿಫೆಂಡರ್‌ಗೆ ತಾಗಿ ಹೆರ್ನಾಂಡಿಜ್ ಬಳಿ ಹೋಯಿತು. ಮೇಲಕ್ಕೆ ಪುಟಿದ ಚೆಂಡನ್ನು ತಮ್ಮ ಎಡಗಾಲಿನಿಂದ ಚಾಣಾಕ್ಷ ರೀತಿಯಲ್ಲಿ ಗುರಿ ಸೇರಿಸಿದರು. ಆರಂಭದಲ್ಲೇ ಗೋಲು ಬಿದ್ದದ್ದು, ಫ್ರಾನ್ಸ್ ಆಟಗಾರರ ಉತ್ಸಾಹವನ್ನು ಇಮ್ಮಡಿಗೊಳಿಸಿತು.

44ನೇ ನಿಮಿಷದಲ್ಲಿ ಮೊರೊಕ್ಕೊ ತಂಡದ ಜವಾದ್ ಎಲ್ ಯಾಮಿಕ್ ಅವರು 'ಓವರ್‌ಹೆಡ್' ಕಿಕ್ ಮಾಡಿ ಗೋಲು ಗಳಿಸಲು ನಡೆಸಿದ ಪ್ರಯತ್ನವನ್ನು ಗೋಲ್‌ಲೈನ್ ಬಳಿ ಎದುರಾಳಿ ಡಿಫೆಂಡರ್ ತಡೆದರು. ಎರಡನೇ ಅವಧಿಯ ಆರಂಭದಲ್ಲಿ ಸಮಬಲದ ಗೋಲಿಗಾಗಿ ಮೊರೊಕ್ಕೊ ಮೇಲಿಂದ ಮೇಲೆ ಯತ್ನಿಸಿತಾದರೂ, ಯಶಸ್ಸು ದೊರೆಯಲಿಲ್ಲ.

ಸ್ಟಾರ್ ಆಟಗಾರ ಎಂಬಾಪೆ ಈ ಪಂದ್ಯದಲ್ಲಿ ಗೋಲು ಗಳಿಸಲಿಲ್ಲ. ಆದರೆ ಎರಡನೇ ಗೋಲು ಗಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. 79ನೇ ನಿಮಿಷದಲ್ಲಿ ಮೊರೊಕ್ಕೊದ ಇಬ್ಬರು ಡಿಫೆಂಡರ್‌ಗಳನ್ನು ತಮ್ಮ ಕಾಲ್ಚಳಕದಿಂದ ತಪ್ಪಿಸಿ, ಚೆಂಡನ್ನು ಗೋಲ್‌ಪೋಸ್ಟ್‌ನತ್ತ ತಳ್ಳಿದರು. ಅಲ್ಲೇ ಕಾಯುತ್ತಿದ್ದ ಕೊಲೊ ಮುವಾನಿ ಗುರಿ ಸೇರಿಸಿದರು. ಸಬ್‌ಸ್ಟಿಟ್ಯೂಟ್ ಆಟಗಾರನಾಗಿ ಅಂಗಳಕ್ಕಿಳಿದು 44 ಸೆಕೆಂಡುಗಳು ಆಗುವಷ್ಟರಲ್ಲೇ ಅವರು ಗೋಲು ಗಳಿಸಿದರು. ಎರಡು ಗೋಲುಗಳ ಮುನ್ನಡೆ ಪಡೆದ ಬಳಿಕ ಫ್ರಾನ್ಸ್ ರಕ್ಷಣೆಗೆ ಒತ್ತು ನೀಡಿತು.

ಪಂದ್ಯಕ್ಕೆ ಮುನ್ನ ತಾಲೀಮಿನ ವೇಳೆ ನಯೇಫ್ ಅಗುಯೆದ್ ಗಾಯಗೊಂಡದ್ದು ಮತ್ತು ನಾಯಕ ಹಾಗೂ ಸೆಂಟರ್ ಬ್ಯಾಕ್ ಆಟಗಾರ ರೊಮೇನ್ ಸೇಸ್ 21ನೇ ನಿಮಿಷದಲ್ಲಿ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿ ಅಂಗಳದಿಂದ ನಿರ್ಗಮಿಸಿದ್ದು ಮೊರೊಕ್ಕೊಗೆ ಹಿನ್ನಡೆಯಾಗಿ ಪರಿಣಮಿಸಿತು.

ಉದ್ಬೂರು ಶಾಲೆಯ ವಿದ್ಯಾರ್ಥಿನಿಗೆ ಪ್ರಶಸ್ತಿಯ ಗರಿ





ಮೈಸೂರು,ಡಿ.15(ಎಂಟಿವೈ)– ಗದಗದಲ್ಲಿ ಕರ್ನಾಟಕ ಬಾಲವಿಕಾಸ ಅಕಾಡೆಮಿ ಹಾಗೂ ಬಣ್ಣದ ಮನೆ ಸಾಂಸ್ಕೃತಿಕ ವೇದಿಕೆ ವತಿಯಿಂದ ಇತ್ತೀಚೆಗೆ ನಡೆದ ಚಿಣ್ಣರ ಚಿತ್ತಾರ ರಾಜ್ಯಮಟ್ಟದ ಮಕ್ಕಳ ಚಿತ್ರ ಕಲೋತ್ಸವದಲ್ಲಿ ಮೈಸೂರು ತಾಲೂಕಿನ ಉದ್ಬೂರು ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಪಿ.ಕಾವ್ಯ ಎಂಬಾಕೆ ಬರೆದ ಪಟದ ಚಿತ್ರಕ್ಕೆ ಬಹುಮಾನ ದೊರೆತಿದ್ದು, ಪ್ರಶಸ್ತಿ ಫಲಕ, ಸ್ಮರಣಿಕೆ, ಪ್ರಮಾಣ ಪತ್ರದೊಂದಿಗೆ 3 ಸಾವಿರ ರೂ.ನಗದು ನೀಡಿ ಗೌರವಿಸಲಾಗಿದೆ. ಪ್ರಶಸ್ತಿ ಪಡೆದು ಬಂದ ವಿದ್ಯಾರ್ಥಿನಿ ಪಿ.ಕಾವ್ಯ ಹಾಗೂ ಚಿತ್ರಕಲಾ ಶಿಕ್ಷಕಿ ಭಾನುಮತಿ ಅವರಿಗೆ ಉದ್ಬೂರು ಶಾಲೆಯ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಸದಸ್ಯರು, ಅಧ್ಯಾಪಕ ವೃಂದ ಅಭಿನಂದಿಸಿದೆ.

'ಮರೆಯದೆ ಕ್ಷಮಿಸು' ಹೊಸ ಪ್ರೇಮಕಥೆ



ಪ್ರಮೋದ್ ಬೋಪಣ್ಣ, ಮೇಘನಾಗೌಡ ನಟಿಸಿರುವ 'ಮರೆಯದೆ ಕ್ಷಮಿಸು' ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದ್ದು, ಜ6ಕ್ಕೆ ದಿನಾಂಕ ನಿಗದಿಯಾಗಿದೆ. ಕೆ.ರಾಘವ್ ಅವರ ನಿರ್ದೇಶನವಿರುವ ಈ ಚಿತ್ರವನ್ನು ಬಾಳೆಕಾಯಿ ವ್ಯಾಪಾರಿ ಶಿವರಾಂ ನಿರ್ಮಿಸಿದ್ದಾರೆ. ನಿರ್ದೇಶಕ ರಾಘವ್ ಮಾತನಾಡಿ, ಈಗಿನ ಕಾಲದ ಯುವಕರಿಗೆ ಉತ್ತಮ ಸಂದೇಶ ಈ ಚಿತ್ರದಲ್ಲಿದೆ. ಗಾರೆಕೆಲಸ ಮಾಡುವ ಯುವಕನನ್ನು ಶ್ರೀಮಂತರ ಮನೆಯ ಹುಡುಗಿಯೊಬ್ಬಳು ಪ್ರೀತಿಸಿದಾಗ ಏನಾಗುತ್ತದೆ ಎಂದು ಈ ಚಿತ್ರದ ಮೂಲಕ ಹೇಳಿದ್ದೇವೆ. ಪ್ರೀತಿ ಮಾಡುವುದು ತಪ್ಪಲ್ಲ, ಅದರಿಂದ ಒಳ್ಳೆಯದು, ಕೆಟ್ಟದ್ದು ಎರಡೂ ಉಂಟು. ಈಗಿನ ಸಮಾಜದಲ್ಲಿ ನಡೆಯುವ ನೈಜ ಘಟನೆಗಳನ್ನೇ ಇಟ್ಟುಕೊಂಡು ಈ ಕಥೆ ಮಾಡಿದ್ದೇವೆ. ಪೋಷಕರು ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕು, ಅಲ್ಲದೆ ಮಕ್ಕಳು ಪೋಷಕರಿಗೆ ಯಾವ ರೀತಿ ಗೌರವಿಸಬೇಕು ಎಂದು ನಮ್ಮ ಚಿತ್ರದಲ್ಲಿ ಹೇಳಿದ್ದೇವೆ. ಟಿ.ನರಸೀಪುರದದಲ್ಲಿ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಲಾಗಿದೆ ಎಂದು ಹೇಳಿದರು.

ನಾಯಕ ಪ್ರಮೋದ್ ಬೋಪಣ್ಣ ಮಾತನಾಡುತ್ತಾ ಬ್ರೇಕ್ ಫೇಲ್ಯೂರ್ ನಂತರ ನನ್ನ ಮೂರನೇ ಚಿತ್ರವಿದು. ಚಿತ್ರದಲ್ಲಿ ಕಟ್ಟಡ ಕೆಲಸಗಾರನಾಗಿ ನಟಿಸಿದ್ದು, ಹೀರೋಯಿಸಂ ಬಿಟ್ಟು ಅಭಿನಯಕ್ಕೆ ಹೆಚ್ಚು ಅವಕಾಶವಿರುವ ಪಾತ್ರ ಎಂದು ಹೇಳಿದರು.

ನಾಯಕಿ ಮೇಘನಾಗೌಡ ಮಾತನಾಡಿ, ಹಿಂದೆ 'ಹಳ್ಳಿಪಂಚಾಯ್ತಿ' ಎಂಬ ಚಿತ್ರದಲ್ಲಿ ಅಭಿನಯಿಸಿದ್ದೆ. ಇದು ನನ್ನ ಫಸ್ಟ್ ಕಮರ್ಷಿಯಲ್ ಸಿನಿಮಾ. ನಂದಿನಿ ಎಂಬ ಪಕ್ಕಾ ಹಳ್ಳಿಹುಡುಗಿ. ಶ್ರೀಮಂತರ ಮನೆಯ ಟ್ರೆಡಿಷನಲ್ ಹುಡುಗಿಯಾದ ನಾನು ಬಡ ಹುಡುಗನನ್ನು ಲವ್‌ಮಾಡಿ ನಂತರ ಫ್ಯಾಮಿಲಿಯನ್ನು ಹೇಗೆ ಎದುರಿಸುತ್ತೇನೆ ಎಂಬುದನ್ನು ನಿರ್ದೇಶಕರು ಚಿತ್ರದಲ್ಲಿ ತೋರಿಸಿದ್ದಾರೆ ಎಂದು ಹೇಳಿದರು. ಕೊನೆಗೆ ನಿರ್ಮಾಪಕ ಶಿವರಾಮ್ ಮಾತನಾಡುತ್ತಾ ಚಿಕ್ಕಂದಿನಿಂದಲೂ ಒಂದೊಳ್ಳೇ ಸಿನಿಮಾ ಮಾಡಬೇಕೆಂಬ ಆಸೆಯಿತ್ತು. ನಿರ್ದೇಶಕರು ಬಂದು ಈ ಕಥೆ ಹೇಳಿದಾಗ ನೈಜವಾಗಿದೆ ಎನಿಸಿ ನಿರ್ಮಾಣ ಮಾಡಿದ್ದೇನೆ. ಇದರ ಜೊತೆಗೆ ನಮ್ಮ ಬ್ಯಾನರ್‌ನಿಂದ ಇನ್ನೂ ಎರಡು ಚಿತ್ರಗಳು ನಿರ್ಮಾಣ ಹಂತದಲ್ಲಿವೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಕಾರ್ತೀಕ್ ವೆಂಕಟೇಶ್ ಮಾತನಾಡಿ, ನನ್ನ ಸಂಗೀತದ 53ನೇ ಚಿತ್ರವಿದು. ಚಿತ್ರಕ್ಕೆ ಯು/ಎ ಸರ್ಟಿಫಿಕೇಟ್ ಸಿಕ್ಕಿದ್ದು, ಹಳ್ಳಿ ಸೊಗಡಿನ 4 ಇಂಪಾದ ಹಾಡುಗಳು ಈ ಚಿತ್ರದಲ್ಲಿವೆ ಎಂದು ಹೇಳಿದರು,

ಕಡಲತೀರದ ಜನರನ್ನು ರಂಜಿಸಿದ ನಮ್ರತಾ...



ದಕ್ಷಿಣಕನ್ನಡದ ಪರಂಪರೆಯನ್ನು ಹೇಳುವಂಥ ಮತ್ತೊಂದು ಚಿತ್ರ ತೆರೆ ಮೇಲೆ ಬರಲು ಸಿದ್ದವಾಗಿದೆ. ಆ ಚಿತ್ರದ ಹೆಸರು 'ಕುದ್ರು'. ಇತ್ತೀಚೆಗೆ ಅಭಿಮಾನ್ ಸ್ಟುಡಿಯೋದಲ್ಲಿ ಈ ಚಿತ್ರದ ಐಟಂ ಹಾಡೊಂದರ ಚಿತ್ರೀಕರಣ ನಡೆಯುತ್ತಿತ್ತು, ಸ್ಥಳಕ್ಕಾಗಮಿಸಿದ ಮಾದ್ಯಮಗಳ ಜೊತೆ ಮಾತನಾಡಿದ ಚಿತ್ರತಂಡ, ಕೆಲವು ಮಾಹಿತಿಗಳನ್ನು ಹಂಚಿಕೊಂಡಿತು. ಮಧು ವೈಜಿ ಹಳ್ಳಿ ಅವರ ನಿರ್ದೇಶನದ, ಈ ಚಿತ್ರಕ್ಕೆ ಭಾಸ್ಕರ್‌ನಾಯಕ್ ಕಥೆ ಬರೆದು ನಿರ್ಮಾಣ ಮಾಡಿದ್ದಾರೆ.

ಮೊದಲು ಮಾತನಾಡಿದ ನಿರ್ಮಾಪಕರು ನೀರಿನಿಂದ ಸುತ್ತುವರೆದ ದ್ವೀಪವನ್ನು ಕುದ್ರು ಎನ್ನುತ್ತಾರೆ. ಕಳೆದ ಮೇನಲ್ಲಿ ಶೂಟಿಂಗ್ ಆರಂಭಿಸಿ 60 ದಿನಗಳ ಕಾಲ ಚಿತ್ರೀಕರಣ ನಡೆಸಿದ್ದೇವೆ. ತುಳು ಸಾಂಸ್ಕೃತಿಕ ಹಿನ್ನೆಲೆಯ ಕಥೆ ಇದಾಗಿದ್ದು, ಕುದ್ರು ದ್ವೀಪದಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಈ ಮೂರೂ ಪಂಗಡದವರು ಸ್ನೇಹಿತರಂತೆ ಜೀವನ ನಡೆಸುತ್ತಿರುತ್ತಾರೆ. ಅವರ ಜೀವನದಲ್ಲಿ ಒಮ್ಮೆ ಬಿರುಗಾಳಿಯಂತೆ ಬರುವ ಮೆಸೇಜೊಂದು ಅಲ್ಲಿದ್ದವರ ನೆಮ್ಮದಿಯನ್ನೇ ಹಾಳು ಮಾಡಿಬಿಡುತ್ತದೆ. ಉಡುಪಿ, ಬೆಂಗಳೂರು, ಗೋವಾ ಹಾಗೂ ಸೌದಿ ಅರೇಬಿಯಾದಲ್ಲಿ ಚಿತ್ರೀಕರಿಸಿದ್ದೇವೆ. ಇಲ್ಲಿ ನಡೆಯುತ್ತಿರುವ ವಿಶೇಷ ಹಾಡಿನ ಚಿತ್ರೀಕರಣದೊಂದಿಗೆ ಶೂಟಿಂಗ್ ಮುಗಿದಂತಾಗುತ್ತದೆ. ಈ ಹಾಡಿಗೆ ಹೆಜ್ಜೆ ಹಾಕಲು ದೆಹಲಿ ಮೂಲದ ನಮ್ರತಾ ಬಂದಿದ್ದಾರೆ ಎಂದು ಹೇಳಿದರು. ನಿರ್ದೇಶಕ ಮಧು ವೈ.ಜಿ. ಹಳ್ಳಿ ಮಾತನಾಡಿ, ನಾನು ನಿರ್ದೇಶಿಸುತ್ತಿರುವ ಮೊದಲ ಚಿತ್ರವಿದು. ಸಣ್ಣ ದ್ವೀಪದಲ್ಲಿ ಬೇರೆ ಬೇರೆ ಸಮುದಾಯದವರು ಸಾಮರಸ್ಯದಿಂದ ಬಾಳುತ್ತಿದ್ದಾಗ, ಹೊತ್ತಿದ ಒಂದು ಚಿಕ್ಕ ಕಿಡಿ ಹೇಗೆ ದೊಡ್ಡದಾಗಿ ಆ ಜನರ ನಡುವೆ ಅಶಾಂತಿ ಹುಟ್ಟುಹಾಕುತ್ತದೆ, ಹಾಗೂ ಅವರೆಲ್ಲ ಮತ್ತೆ ಸಾಮರಸ್ಯದಿಂದ ಜೀವನ ನಡೆಸುವಂತಾಯಿತೇ ಎಂಬುದನ್ನು ಕುದ್ರು ಚಿತ್ರದ ಮೂಲಕ ತೋರಿಸುತ್ತಿದ್ದೇವೆ. ಹರ್ಷಿತ್‌ಶೆಟ್ಟಿ, ಗಾಡ್ವಿನ್ ಹಾಗೂ ಫರ್ಹಾನ್ ಚಿತ್ರದ ನಾಯಕರಾಗಿದ್ದು, ಪ್ರಿಯಾ ಹೆಗ್ಡೆ, ವಿನುತಾ ಹಾಗೂ ಡೈನಾ ಡಿಸೋಜ ನಾಯಕಿಯರು. 4 ಹಾಡುಗಳಿಗೆ ಪ್ರತೀಕ್ ಕುಂಡು ಸಂಗೀತ ಮಾಡಿದ್ದಾರೆ. ದೀಪು ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಎಪ್ಪತ್ತರಷ್ಟು ಭಾಗದ ಕಥೆ ಮಳೆಯಲ್ಲೇ ನಡೆಯುವುದು ಚಿತ್ರದ ವಿಶೇಷ ಎಂದರು.


ಮುಸ್ಲಿಂ ಹುಡುಗಿಯಾಗಿ ಡೈನಾ ಡಿಸೋಜ, ಬ್ರಾಹ್ಮಣ ಹುಡುಗನಾಗಿ ಹರ್ಷಿತ್‌ಶೆಟ್ಟಿ, ಕ್ರಿಶ್ಚಿಯನ್ ಹುಡುಗನಾಗಿ ಗಾಡ್ವಿನ್ ಹಾಗೂ ಮುಸ್ಲಿಂ ಯುವಕನಾಗಿ ಫರ್ಹಾನ್ ಅಭಿನಯಿಸಿದ್ದಾರೆ.

'ಪದವಿ ಪೂರ್ವ' ತಂಡಕ್ಕೆ ಸುದೀಪ್ ಸಾಥ್



ಹದಿಹರೆಯದ ಯುವಕ, ಯುವತಿಯರು ಕನಸು, ಪ್ರೀತಿ ಪ್ರೇಮದ ಸುತ್ತ ಸಾಗುವ ಕಥಾ ಹಂದರ ಹೊಂದಿರುವ 'ಪದವಿ ಪೂರ್ವ' ಚಿತ್ರ ಡಿ.30ಕ್ಕೆ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಪೃಥ್ವಿ ಶಾಮನೂರು ನಾಯಕನಾಗಿರುವ ಈ ಚಿತ್ರದಲ್ಲಿ ಅಂಜಲಿ ಅನೀಶ್, ಯಶಾ ಶಿವಕುಮಾರ್ ನಾಯಕಿಯರಾಗಿ ನಟಿಸಿದ್ದಾರೆ, ಈಗಾಗಲೇ ಚಿತ್ರದ ಪ್ರೊಮೋಷನ್ ಕಾರ್ಯ ಜೋರಾಗೇ ನಡೆಯುತ್ತಿದ್ದು, ರಾಜ್ಯಾದ್ಯಂತ ಸಂಚರಿಸುತ್ತಿರುವ ಟೀಮ್, ಜನರಿಗೆ ಚಿತ್ರದ ಬಗ್ಗೆ ಮಾಹಿತಿ ನೀಡುತ್ತಿದೆ, ಜೊತೆಗೆ ಕನ್ನಡದ ಹಲವಾರು ಸ್ಟಾರ್ ನಟರು ಈ ಚಿತ್ರಕ್ಕೆ ಸಾಥ್ ನೀಡುತ್ತಿದ್ದಾರೆ. ಕಳೆದ ವಾರವಷ್ಟೇ ನವರಸ ನಾಯಕ ಜಗ್ಗೇಶ್ ಅವರು ಚಿತ್ರದ ಟ್ರೈಲರ್ ಬಿಡುಗಡೆ ಮಾಡಿದ್ದರು. ಈಗ ಕಿಚ್ಚ ಸುದೀಪ್ ಅವರು "ಯಾಕೆ ಸಿಕ್ಕೆ" ಎಂಬ ರೊಮ್ಯಾಂಟಿಕ್ ವಿಡಿಯೋ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ. ಸುದೀಪರ ನಿವಾಸದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಯೋಗರಾಜಭಟ್, ನಿರ್ದೇಶಕ ಹರಿಪ್ರಸಾದ್ ಜಯಣ್ಣ, ಪೃಥ್ವಿ, ಅಂಜಲಿ ಅನೀಶ್ ಭಾಗ ವಹಿಸಿದ್ದರು. 1996–97ರ ಸಮಯದಲ್ಲಿ ನಡೆಯುವ ಕಾಲೇಜ್ ಸ್ಟೋರಿ, ಪ್ರೇಮಕಥೆ ಈ ಚಿತ್ರದಲ್ಲಿದ್ದು, ಹರಿಪ್ರಸಾದ್ ಜಯಣ್ಣ ಮೊದಲ ಬಾರಿಗೆ ಆ್ಯಕ್ಷನ್‌ಕಟ್ ಹೇಳಿದ್ದಾರೆ. ಸಾಗರ, ಶಿವಮೊಗ್ಗ, ಹೊಸನಗರ, ಕವಲೆದುರ್ಗ, ಬೆಂಗಳೂರು ಹಾಗೂ ಮಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಯೋಗರಾಜ್‌ಭಟ್ ಹಾಗೂ ರವಿ ಶಾಮನೂರ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಚಿತ್ರದ ಮೂಲಕ ಪೃಥ್ವಿ ಶಾಮನೂರು ನಾಯಕನಾಗಿ ಎಂಟ್ರಿ ಕೊಡುತ್ತಿದ್ದಾರೆ. ವಿಶೇಷ ಪಾತ್ರದಲ್ಲಿ ಹಿರಿಯ ನಟ ಶರತ್ ಲೋಹಿತಾಶ್ವ, ರಂಗಾಯಣ ರಘು ನಟಿಸಿದ್ದು, ಯೋಗರಾಜ್ ಭಟ್, ಅದಿತಿ ಪ್ರಭುದೇವ, ದಿವ್ಯ ಉರುಡುಗ, ಪ್ರಭು ಮುಂಡ್ಕೂರು, ಶ್ರೀಮಹದೇವ್ ಅತಿಥಿ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರದ ಬಹುತೇಕ ಕಥೆ ಫ್ಲ್ಯಾಷ್‌ಬ್ಯಾಕ್‌ನಲ್ಲೇ ಸಾಗಲಿದ್ದು, ದಿವ್ಯ ಉರಡಗ, ನಟರಾಜ್, ಸೋನಲ್ ಮಾಂಟೆರೋ, ಶ್ರೀಮಹದೇವ್ ಈಗಿನ ಕಾಲದ ಕಥೆಯಲ್ಲಿದ್ದರೆ, ಉಳಿದವರೆಲ್ಲ ಫ್ಲಾಷ್‌ಬ್ಯಾಕ್ ಕತೆಯಲ್ಲಿ ಬರುವ ಪಾತ್ರಧಾರಿಗಳು. ಚಿತ್ರದಲ್ಲಿ 5 ಹಾಡುಗಳಿದ್ದು, ಅರ್ಜುನ್ ಜನ್ಯ ಮ್ಯೂಸಿಕ್ ನೀಡಿದ್ದಾರೆ, ಯೋಗರಾಜ ಭಟ್ ಸಾಹಿತ್ಯ, ಸಂತೋಷ್ ರೈ ಪಾತಾಜೆ ಅವರ ಕ್ಯಾಮೆರಾ ಕೈಚಳಕ ಈ ಚಿತ್ರಕ್ಕಿದೆ.

ಡಾರ್ಲಿಂಗ್ ಕೃಷ್ಣ ಇನ್ನೂ 'ಮಿಸ್ಟರ್ ಬ್ಯಾಚುಲರ್'!



'ಲವ್ ಮಾಕ್ಟೇಲ್' ಖ್ಯಾತಿಯ ಡಾರ್ಲಿಂಗ್ ಕೃಷ್ಣ ಈಗ 'ಮಿ.ಬ್ಯಾಚುಲರ್' ಆಗಿದ್ದಾರೆ. ಕೃಷ್ಣ ನಾಯಕನಾಗಿ ಅಭಿನಯಿಸಿರುವ ಮಿ.ಬ್ಯಾಚುಲರ್ ಚಿತ್ರದ ಹಾಡೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು, ಮದುವೆ ಯಾವಾಗ ಎಂಬ ಸಾಹಿತ್ಯ ಇರುವ ಈ ಹಾಡನ್ನು ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ಅವರು ಬಿಡುಗಡೆ ಮಾಡಿದರು. ವಿಜಯ್‌ಪ್ರಕಾಶ್ ದನಿಯಲ್ಲಿ ಮೂಡಿಬಂದಿರುವ ಈ ಹಾಡಿಗೆ ಮಣಿಕಾಂತ್ ಕದ್ರಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಪೂರಿ ಜಗನ್ನಾಥ್ ಅವರ ಜೊತೆ ಕೆಲಸ ಮಾಡಿದ ನಾಯ್ಡು ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳಿದ್ದಾರೆ, ಚಿತ್ರದ ನಾಯಕಿಯಾಗಿ ನಿಮಿಕಾ ರತ್ನಾಕರ್, ವಿಶೇಷ ಪಾತ್ರದಲ್ಲಿ ಮಿಲನ ನಾಗರಾಜ್ ಅಭಿನಯಿಸಿದ್ದಾರೆ.

ನಾಯಕ ಕೃಷ್ಣ ಮಾತಾಡುತ್ತಾ ಈ ಚಿತ್ರದಿಂದ ಬಂದ ಸಂಭಾವನೆಯಿಂದಲೇ ನಾನು 'ಲವ್‌ಮಾಕ್ಟೇಲ್' ಚಿತ್ರವನ್ನು ಶುರುಮಾಡಿದೆ. ಹಾಗಾಗಿ ನನಗೆ ಈ ಚಿತ್ರದ ಮೇಲೆ ವಿಶೇಷವಾದ ಪ್ರೀತಿಯಿದೆ. ನಾಯ್ಡು ಅವರು ಅದ್ಭುತವಾದ ಕಥೆಯನ್ನು ಈ ಚಿತ್ರದಲ್ಲಿ ಹೇಳಿದ್ದಾರೆ. ಮನರಂಜನೆಯ ಜೊತೆಗೆ ಆಕ್ಷನ್ ಹಾಗೂ ಉತ್ತಮ ಸೆಂಟಿಮೆಂಟ್ ಸನ್ನಿವೇಶಗಳೂ ಇದೆ ಎಂದು ಹೇಳಿದರು,

ನಿರ್ದೇಶಕ ನಾಯ್ಡು ಮಾತನಾಡುತ್ತಾ ಮದುವೆಯ ವಯಸಿಗೆ ಬಂದ ಹುಡುಗನನ್ನು ಸಾಮಾನ್ಯವಾಗಿ ನಿನ್ನ ಮದುವೆ ಯಾವಾಗ ಅಂತ ಕೇಳುತ್ತಾರೆ. ನಾಯಕ ಯಾಕೆ ಮಿ.ಬ್ಯಾಚುಲರ್ ಆಗಿರ್ತಾನೆ ಅನ್ನುವುದೇ ಚಿತ್ರದ ಎಳೆ. ಶ್ರೀನಿವಾಸ್, ಹನುಮಂತರಾವ್ ಹಾಗೂ ಸ್ವರ್ಣಲತಾ ಸೇರಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮಣಿಕಾಂತ್ ಕದ್ರಿ ಅವರ ಸಂಗೀತ ಹಾಗೂ ಕ್ರೇಜಿಮೈಂಡ್ಸ್‌ನ ಶ್ರೀ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಶ್ರೀನಿವಾಸ ಮೂರ್ತಿ, ಸಾಧುಕೋಕಿಲ, ಅಯ್ಯಪ್ಪ ಶರ್ಮ, ಚಿಕ್ಕಣ್ಣ, ಪವಿತ್ರ ಲೋಕೇಶ್ ಮುಂತಾದವರು ಚಿತ್ರದ ಉಳಿದ ತಾರಾ ಬಳಗದಲ್ಲಿದ್ದಾರೆ ಎಂದು ಹೇಳಿದರು.

ನಾಯಕಿ ನಿಮಿಕಾ ರತ್ನಾಕರ್ ಮಾತನಾಡಿ, ಡಾರ್ಲಿಂಗ್ ಕೃಷ್ಣ ಅವರ ಜೊತೆ ಮೊದಲ ಬಾರಿಗೆ ನಟಿಸಿದ್ದೇನೆ. ಪಾತ್ರ ತುಂಬಾ ಚೆನ್ನಾಗಿದೆ ಎಂದು ಹೇಳಿದರು. ನಿರ್ಮಾಪಕ ಶ್ರೀನಿವಾಸ್ ಮಾತನಾಡಿ 'ಮಿ.ಬ್ಯಾಚುಲರ್' ಚಿತ್ರವನ್ನು ಮಾಡಿದ ಉದ್ದೇಶದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ–453

ಉಮ್ಮತ್ತೂರು ಇಂದುಶೇಖರ್
ಮೊ.9880820462

1			■	2				3		■
	■	■	■		■	■	■		■	4
5		6			■	7				
	■		■	■	■		■		■	
	■	■	■	8	■		■		■	
9		10	■	11			■	12		
	■		■		■		■	■	■	
	■		■		■	■	■	13	■	
14					■	15				
	■		■	■	■		■	■	■	
■	16						■	17		

ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

11. ಪುನೀತ್ " ರಾಜ ವಂಶಸ್ಥ" 3
2.ಮಂಡ್ಯದ ಗಂಡು ದಾನಶೂರನೂ ಹೌದು 6
5.ಹುಣಸೂರು ಕೃಷ್ಣಮೂರ್ತಿಯ ಬೆಲೆ ಬಾಳುವ ಮಣಿಗಳ ಗೊಂಚಲು 5
7.ರವಿಚಂದ್ರನ್ ಕೊಡಲಿ,ಹಲಾಯುಧ ಹಿಡಿದಿಲ್ಲ 5
9.ದಾತನ "ಹುಟ್ಟು" 3
11.ಮದುವೆ ಇಲ್ಲಿ ಅಸ್ತವ್ಯಸ್ತ 3
12.ಟೈಗರ್ ಪ್ರಭಾಕರ್ ಪುತ್ರ 3
14.ಪ್ರೇಮ್–ಮೇಘನಾ ಗಾಂವ್ಕರ್ ನಿರ್ಮಿಸಿದ ಸ್ಮಾರಕ 5
15.ಕ್ರೇಜಿ ಸ್ಟಾರ್ ಡ್ರೀಮ್ ಬಾಯ್ 5
16. ಶಂಕರ್ ನಾಗ್ ಅಭಿನಯದಲ್ಲಿ ನರ, ರಾಕ್ಷಸ ಇದ್ದಾರೆ 6
17.ಇಲ್ಲೇ ಎಡದಿಂದ ಬಲಕ್ಕೆ 12 ರಲ್ಲಿರುವವನನ್ನು ಹೀಗೆನ್ನಿ 3

ಮೇಲಿನಿಂದ ಕೆಳಕ್ಕೆ

1.ಕಲ್ಯಾಣಿ ಚಾಲುಕ್ಯರು, ಹೊಯ್ಸಳ ಕಾಲದ ಕೆತ್ತನೆಗಾರ ಚಿರ ಶಾಶ್ವತ 10
2.ವೀರ ಹಿಡಿದ ಖಡ್ಗ 3
3." – – – – – – ಮೂಡಿ ಬಂದ ಮುನ್ನಡೆವ ಬೆಳಕನ್ನೇ ತಂದ ....", 6
4.ಕಾಡುಗಳ್ಳ, ನರಹಂತಕ ನರಕದಲ್ಲೂ ಪ್ರತ್ಯಕ್ಷ ! 10.
6.ತೆರೆ ಸರಿಸಿದ ಹಿಮ 2
7.ಅಶ್ವತ್, ಬಿ.ಸರೋಜಾದೇವಿ ಅಭಿನಯಕ್ಕೆ ಎಸ್. ಎ.ನಟರಾಜನ್ ನಿರ್ದೇಶಕ 5
8.ಕೆಂಪೇಗೌಡ ಚಿತ್ರದ ಆರ್ಮುಗಂ 5
10.ಶ್ರೀನಾಥ್ ಅಭಿನಯದ ಸಿಹಿ ಸಂಗಮ 6
13.ಗುರಿ ಚಿತ್ರದ ನಿರ್ದೇಶಕ ಇಲ್ಲಿ ಇನ್ಶಿಲ್ ಕಳೆದು ಕೊಂಡಿದ್ದಾನೆ 2
15. ಕವಿತೆ ಇಲ್ಲಿ ಅಸ್ತವ್ಯಸ್ತ 3

ವಿಜೇತರು: ದಾಕ್ಷಾಯಿಣಿ ಸಿಜಿಸಿ, #122, 10ನೇ ಮೇನ್, 25ನೇ ಕ್ರಾಸ್, ಡಿ ಬ್ಲಾಕ್, ಜೆ.ಪಿ.ನಗರ

ಸಿನಿ ಪದಬಂಧ 452ರ ಸರಿ ಉತ್ತರ

ಕಿ	ಲಾ	ಡಿ	■	ಕಾ	ಡಿ	ನ	ರ	ಹ	ಸ್ಯ	■
ರಂ	■	■	■	ಳಿಂ	■	■	■	ತ್ತೂ	■	ಕ
ಗೂ	ಳಿ	ಕಾ	ಳ	ಗ	■	ಅ	ಮ	ರ	ಪ್ರೇ	ಮ
ರಿ	■	ಡು	■	■	■	ಭಿ	■	ಒ	■	ಲ
ನ	■	■	■	ಪಂ	■	ಸಾ	■	ಡೆ	■	ರ
ಗ	ಟ್ಲಿಂ	ಪು	■	ಚ	ಕೋ	ರಿ	■	ಯ	ಲ	ಮ
ಯ್ಯಾ	■	ಷ್ಟ	■	ಮ	■	ಕೆ	■	■	■	ಣ
ಳಿ	■	ಕ	■	ವೇ	■	■	■	ಧ	■	ನಾ
ಗ	ಡಿ	ವಿ	ವಾ	ದ	■	ನ	ಯ	ನ	ತಾ	ರಾ
ಳು	■	ಮಾ	■	■	■	ದ	■	■	■	ಯ
■	ತ	ನ	ನಂ	ತ	ನ	ನಂ	■	ಮ	ರ	ಣ

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮಾಜಿ ಶಾಸಕ ದಿವಂಗತ ಚಿಕ್ಕಮಾದು ಪುತ್ರಿ ರಂಜಿತಾ, ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ ಸೇರಿ ನೂರಾರು ಮಂದಿ ಜೆಡಿಎಸ್ ಸೇರ್ಪಡೆ

● ಹುಣಸೂರು ಜೆಡಿಎಸ್ ಸಂಭವನೀಯ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡರಿಗೆ ಆನೆ ಬಲ ● ಮಾಜಿ ಸಿಎಂ ಕುಮಾರಸ್ವಾಮಿ ಘೋಷಣೆ ● ಹರೀಶ್‌ಗೌಡರ ಗೆಲುವಿನ ಹಾದಿ ಸುಗಮ ● ಮೊದಲ ಬಾರಿ ಮುಖ್ಯಮಂತ್ರಿ ಆಗುವ ಮುನ್ನವೇ ಜಿ.ಟಿ.ದೇವೇಗೌಡರು ನನ್ನ ಮುಖ್ಯಮಂತ್ರಿ ಎಂದು ಘೋಷಿಸಿದ್ದರು





ಬೆಂಗಳೂರು, ಡಿ.15– ಮಾಜಿ ಶಾಸಕ ದಿವಂಗತ ಚಿಕ್ಕಮಾದು ಪುತ್ರಿ ರಂಜಿತಾ ಚಿಕ್ಕಮಾದು, ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ ಸೇರಿದಂತೆ ಹುಣಸೂರು ಭಾಗದ ಕಾಂಗ್ರೆಸ್ ಹಾಗೂ ಬಿಜೆಪಿಯ ನೂರಕ್ಕೂ ಹೆಚ್ಚು ಮುಖಂಡರು ಹಾಗೂ ಕಾರ್ಯಕರ್ತರು ಇಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಮ್ಮುಖದಲ್ಲಿ ಜೆಡಿಎಸ್ ಸೇರುವ ಮೂಲಕ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪುತ್ರ ಜಿ.ಡಿ.ಹರೀಶ್ ಗೌಡರಿಗೆ ಬೆಂಬಲ ವ್ಯಕ್ತಪಡಿಸಿದರು.

ಬೆಂಗಳೂರಿನ ರಾಜ್ಯ ಜೆಡಿಎಸ್ ಕಚೇರಿ ಜೆ.ಪಿ.ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಪಕ್ಷಕ್ಕೆ ಬರಮಾಡಿಕೊಂಡ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹುಣಸೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ನೂರಾರು ಮಂದಿ ಕಾಂಗ್ರೆಸ್ ಮತ್ತು ಬಿಜೆಪಿ ತೊರೆದು ಜೆಡಿಎಸ್ ಸೇರುತ್ತಿರುವುದರಿಂದ ಅಲ್ಲಿನ ಅಭ್ಯರ್ಥಿಯಾಗಲಿರುವ ಜಿ.ಡಿ.ಹರೀಶ್‌ಗೌಡರಿಗೆ ಆನೆ ಬಲ ಬಂದಂತಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅವರ ಗೆಲುವಿನ ಹಾದಿ ಸುಗಮವಾಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ತಾವು ಕಳೆದ ಎರಡು ಬಾರಿ ಅಲ್ಪಾವಧಿ ಸರ್ಕಾರ ನಡೆಸಿದ್ದರೂ, ಎಲ್ಲಾ ವರ್ಗದ ಜನರ ಒಳಿತಿಗಾಗಿ ಕೆಲಸ ಮಾಡಿರುವುದನ್ನು ಜನರು ಮರೆತಿಲ್ಲ. ತಮಗೆ ಪೂರ್ಣಾವಧಿಯ ಅಧಿಕಾರ ದೊರೆಯದ ಕಾರಣ ಎಲ್ಲಾ ವರ್ಗಗಳನ್ನು ಮುಟ್ಟಲು ಸಾಧ್ಯವಾಗಿಲ್ಲ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಅವರು ಜನತೆಯಲ್ಲಿ ಮನವಿ ಮಾಡಿದರು.

ತಾವು ಸಿಎಂ ಆಗುವ ಮುನ್ನವೇ ಮೈಸೂರಿನಲ್ಲಿ ಜಿ.ಟಿ.ದೇವೇಗೌಡರು ನನ್ನನ್ನು ಮುಖ್ಯಮಂತ್ರಿ ಎಂದು ಘೋಷಿಸಿದ್ದರು. ಅವರು ಹೇಳಿದಂತೆಯೇ ನಾನು ಮುಖ್ಯಮಂತ್ರಿ ಆದೆ. ಹೀಗಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಪಕ್ಷವನ್ನು ಸಮರ್ಥವಾಗಿ ಸಂಘಟಿಸಿ 13 ಅಭ್ಯರ್ಥಿಗಳನ್ನು ಗೆಲ್ಲಿಸುವ ಹೊಣೆಗಾರಿಕೆಯನ್ನು ಜಿ.ಟಿ.ದೇವೇಗೌಡರಿಗೆ ನೀಡಲಾಗಿದೆ ಎಂದರು.

ನಮ್ಮ ಪಕ್ಷದ ಮಾಜಿ ಶಾಸಕ ದಿವಂಗತ ಚಿಕ್ಕಮಾದು ಪುತ್ರಿ ರಂಜಿತಾ ಚಿಕ್ಕಮಾದು, ಜಿಪಂ ಮಾಜಿ ಸದಸ್ಯರಾದ ಹಿರಿಯ ಮುಖಂಡ ಸಿ.ಟಿ.ರಾಜಣ್ಣ, ತಟ್ಟೆಕೆರೆ ಶ್ರೀನಿವಾಸ್, ಜಾಬಗೆರೆ ತಿಮ್ಮನಾಯಕ, ರವಿನಾಯಕ, ಜಗದೀಶ್ ಸೇರಿದಂತೆ ನೂರಾರು ಮುಖಂಡರು ಹಾಗೂ ಸ್ಥಳೀಯ ಚುನಾಯಿತ ಪ್ರತಿನಿಧಿಗಳು ತಮ್ಮ ಹಾಗೂ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಪಕ್ಷಕ್ಕೆ ಸೇರುವ ಮೂಲಕ ಜಿ.ಡಿ.ಹರೀಶ್ ಗೌಡರ ಗೆಲುವಿಗೆ ಸಹಕಾರಿಯಾಗುವುದರ ಜೊತೆಗೆ ಜೆಡಿಎಸ್‌ಗೆ ಹೊಸ ಚೈತನ್ಯ ತುಂಬುತ್ತಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ರಾಜ್ಯದಲ್ಲಿ ಜೆಡಿಎಸ್ ಅನ್ನು ಅಧಿಕಾರಕ್ಕೆ ತರುವ ಮೂಲಕ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೆ ಮುಖ್ಯಮಂತ್ರಿ ಮಾಡಬೇಕೆಂಬ ಹೆಚ್.ಡಿ.ದೇವೇಗೌಡರ ಕನಸನ್ನು ನನಸು ಮಾಡಲು ಪ್ರತಿಯೊಬ್ಬ ಮುಖಂಡರೂ ಶ್ರಮಿಸಬೇಕಾಗಿದೆ. ಆ ಕೆಲಸ ಈಗ ಹುಣಸೂರಿನಿಂದ ಆರಂಭವಾಗಿದೆ. ರಾಜ್ಯದ ಅಭಿವೃದ್ಧಿ ಮತ್ತು ರೈತರು, ಬಡವರು ಹಾಗೂ ನೊಂದವರ ಪರ ಕೆಲಸ ಮಾಡಲು ಕುಮಾರಸ್ವಾಮಿಯವರು ಸಿಎಂ ಆಗಲೇಬೇಕಿದೆ. ಅದಕ್ಕಾಗಿ ಕಾರ್ಯಕರ್ತರು ಸೈನಿಕರಂತೆ ಕೆಲಸ ಮಾಡಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಬೇಕಾಗಿದೆ. ತಾವೂ ಸೇರಿದಂತೆ ಶಾಸಕರಾದ ಸಾ.ರಾ.ಮಹೇಶ್, ಕೆ.ಮಹದೇವ್, ಅಶ್ವಿನ್ ಕುಮಾರ್ ಒಟ್ಟಿಗೆ ಸೇರಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡುತ್ತೇವೆ ಎಂದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿತಿನ್ ಕುಮಾರಸ್ವಾಮಿ ಮಾತನಾಡಿ, ಪಂಚರತ್ನ ಯೋಜನೆ ಯಾತ್ರೆ ಮೂಲಕ ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಜಿ.ಟಿ.ದೇವೇಗೌಡರು ಪಕ್ಷದಲ್ಲೇ ಉಳಿದಿದ್ದರಿಂದ ಜೆಡಿಎಸ್ ಅನ್ನು ಅಧಿಕಾರಕ್ಕೆ ತರುವ ಕಾರ್ಯಕ್ಕೆ ಮತ್ತಷ್ಟು ಬಲ ಬಂದಂತಾಗಿದೆ ಎಂದರು.

ಹುಣಸೂರು ಕ್ಷೇತ್ರದ ಜೆಡಿಎಸ್ ಸಂಭವನೀಯ ಅಭ್ಯರ್ಥಿ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ ಮಾತನಾಡಿ, ರಂಜಿತಾ ಚಿಕ್ಕಮಾದು ಮತ್ತು ಸಿ.ಟಿ.ರಾಜಣ್ಣ ಸೇರಿದಂತೆ ನೂರಾರು ಮುಖಂಡರು ಪಕ್ಷಕ್ಕೆ ಸೇರಿದ್ದರಿಂದ ತಮಗೆ ಮತ್ತಷ್ಟು ಬಲ ಬಂದಂತಾಗಿದೆ. ನಾವೆಲ್ಲಾ ಸೇರಿ ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರ ಕೈಬಲಪಡಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರಾದ ಕೆ.ಮಹದೇವ್, ಅಶ್ವಿನ್ ಕುಮಾರ್, ಬಿ.ಎಂ.ಫಾರೂಖ್, ಹೆಚ್.ಎಂ.ರಮೇಶ್ ಗೌಡ, ಮಾಜಿ ಶಾಸಕರಾದ ಶಾರದಾ ಪೂರ್ಯನಾಯಕ್, ಪಾವಗಡ ತಿಮ್ಮರಾಯಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಶ್ರೀ ತ್ರಿಪುರ ಸುಂದರಿ ಅಮ್ಮನವರ ಹುಂಡಿಯಲ್ಲಿ 14.67 ಲಕ್ಷ ಸಂಗ್ರಹ

ಮೂಗೂರು, ಡಿ.15– ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಹುಂಡಿಯಲ್ಲಿ 14.67 ಲಕ್ಷ ರೂ. ಸಂಗ್ರಹವಾಗಿದೆ.

ದೇವಾಲಯದ ಆವರಣದಲ್ಲಿ ಉಪ ತಹಶೀಲ್ದಾರ್ ಲಕ್ಷ್ಮೀ ಅಮ ಸಮ್ಮುಖದಲ್ಲಿ ನಡೆದ ಹುಂಡಿ ಎಣಿಕೆಯಲ್ಲಿ 14,67,783 ರೂ. ದೊರೆತಿದ್ದು, ಹಣವನ್ನು ಮೂಗೂರು ಎಸ್‌ಬಿಐ ಶಾಖೆಗೆ ಜಮಾ ಮಾಡಲಾಯಿತು ಎಂದು ಆರ್‌ಐ ಬಸವರಾಜು ತಿಳಿಸಿದರು. ಹುಂಡಿ ಎಣಿಕೆಯಲ್ಲಿ ಕಂದಾಯ ಇಲಾಖೆ ಗ್ರಾಮ ಸಹಾಯಕರು, ವಿದ್ಯಾರ್ಥಿಗಳು, ಬ್ಯಾಂಕ್ ಸಿಬ್ಬಂದಿ ಭಾಗವಹಿಸಿದ್ದರು. ಈ ವೇಳೆ ಗ್ರಾಮ ಲೆಕ್ಕಿಗರಾದ ಸಾಗೇರಪ್ಪ, ಪ್ರವೋದ್, ಪದ್ಮಶ್ರೀ, ಚೈತ್ರ ಶೃತಿ, ದೇವಾಲಯ ಸಮಿತಿ ಮಾಜಿ ಅಧ್ಯಕ್ಷ ಗೌಡರು ಎಂ.ಪಿ.ನಾಗರಾಜು, ಪಾರುಪತ್ತೇದಾರ ಎಂ.ಬಿ.ಸಾಗರ್, ಎಸ್‌ಬಿಐ ಶಾಖೆ ಯತೀಶ್, ಮುಖ್ಯಪೇದೆ ಮಹದೇವ್ ಹಾಜರಿದ್ದರು.

8.5 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಹೆಚ್.ಡಿ.ಕೋಟೆ, ಡಿ.15– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿ ಕೆಲಸ ಮಾಡುತ್ತಿದ್ದೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣ ವ್ಯಾಪ್ತಿಯಲ್ಲಿ ಗುರುವಾರ ಮುಖ್ಯಮಂತ್ರಿ ಅಮೃತ ನಗರೋತ್ಥಾನ ಯೋಜನೆ ಹಂತ–4ರ ಅಡಿ 8.5 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನ ಅಭಿವೃದ್ಧಿ ನನ್ನ ಮುಖ್ಯ ಗುರಿಯಾಗಿದ್ದು, ಕ್ಷೇತ್ರದ ಶಾಸಕನಾಗಿ ಕಳೆದ 4 ವರ್ಷದಿಂದ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದೇನೆ. ಜನಸಂಖ್ಯೆಗನುಗುಣವಾಗಿ ನಗರೋತ್ಥಾನ ಯೋಜನೆ ಅಡಿ ಪಟ್ಟಣಕ್ಕೆ 8.5 ಕೋಟಿ ಅನುದಾನ ಮಂಜೂರಾಗಿದೆ. ಕಳೆದ 3 ವರ್ಷದಿಂದ ಅನುದಾನ ಬಿಡುಗಡೆಯಾಗಿರಲಿಲ್ಲ. ಪ್ರತಿ ವರ್ಷ ಅನುದಾನ ಬಿಡುಗಡೆಯಾಗಿದ್ದರೆ 24 ಕೋಟಿ ರೂ. ವೆಚ್ಚದಲ್ಲಿ ಪಟ್ಟಣವನ್ನು ಅಭಿವೃದ್ಧಿ ಪಡಿಸಬಹುದಾಗಿತ್ತು. ಅಲ್ಲದೇ ಶೇ.80 ರಷ್ಟು ಅಭಿವೃದ್ಧಿ ಕೆಲಸ ಪೂರ್ಣಗೊಳ್ಳುತ್ತಿದ್ದವು ಎಂದರು.

ಈ ಹಿಂದೆ ಹೆಚ್.ಡಿ.ರೇವಣ್ಣ ಅವರು ಲೋಕೋಪಯೋಗಿ ಸಚಿವರಾಗಿದ್ದ ವೇಳೆ ಹ್ಯಾಂಡ್‌ಪೋಸ್ಟ್‌ನಿಂದ ಹೆಬ್ಬಾಳದವರೆಗಿನ ಜೋಡಿ ರಸ್ತೆ ಅಭಿವೃದ್ಧಿಗೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಇದೀಗ ಅನುಮೋದನೆ ದೊರೆತಿದ್ದು, ರಸ್ತೆ ಅಭಿವೃದ್ಧಿ ಕಾಮಗಾರಿ ಜನವರಿಯಲ್ಲಿ ಪ್ರಾರಂಭಗೊಳ್ಳಲಿದೆ. ಅಲ್ಲದೇ 25 ಲಕ್ಷರೂ.ಗಳ ವಿಶೇಷ ಅನುದಾನದಲ್ಲಿ ಪಟ್ಟಣದ ಸಂತೆಮಾಳ ಅಭಿವೃದ್ಧಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ. ಹಳೆ ಆಸ್ಪತ್ರೆ ಜಾಗದಲ್ಲಿ 10 ಕೋಟಿ ವೆಚ್ಚದಲ್ಲಿ ನೂತನ ವಾಣಿಜ್ಯ ಮಳಿಗೆಗಳ ನಿರ್ಮಾಣ ಹಾಗೂ ಮಿನಿ ಚಿತ್ರಮಂದಿರ ನಿರ್ಮಾಣಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಈಗ 3 ಕೋಟಿ ಅನುದಾನ ಮಂಜೂರಾಗಿದ್ದು, ಜನವರಿ ಮೊದಲ ವಾರ ಭೂಮಿ ಪೂಜೆ ನೆರವೇರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಪುರಸಭಾಧ್ಯಕ್ಷೆ ಅನಿತಾ, ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಸುಹಾಸಿನಿ, ಪುಟ್ಟು ಬಸವನಾಯಕ, ನಂಜಪ್ಪ, ಆಸಿಫ್ ಇಕ್ಬಾಲ್, ಲೋಕೇಶ್, ಮಧು, ಮುಖಂಡರಾದ ನಿಂಗ ನಾಯಕ, ದಿನೇಶ್, ಸೌಮ್ಯ, ಸಿಪಿಎಂ ಶಿವಣ್ಣ, ಎಲ್‌ಐಸಿ ಗೋಪಾಲ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಇಂಜಿನಿಯರ್ ಸುರೇಶ್, ಗುತ್ತಿಗೆದಾರ ಚಿನ್ನಸ್ವಾಮಿ, ರಾಜು ಇದ್ದರು.

ಸಾರ್ವಜನಿಕರ ಸಹಕಾರದಿಂದ ಮಾತ್ರ ತ್ಯಾಜ್ಯ ವಿಲೇವಾರಿ

ಘನ ತ್ಯಾಜ್ಯ ವಿಲೇವಾರಿ ಘಟಕ ಲೋಕಾರ್ಪಣೆಗೊಳಿಸಿದ ಶಾಸಕ ಡಾ.ಯತೀಂದ್ರ



ತಿ.ನರಸೀಪುರ, ಡಿ.15– ಸಾರ್ವಜನಿಕರು ಸಹಕಾರ ನೀಡಿದರೆ ಮಾತ್ರ ತ್ಯಾಜ್ಯ ವಿಲೇವಾರಿ ಘಟಕ ಸಫಲತೆ ಕಾಣಲು ಸಾಧ್ಯ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಹಳೇ ಕೆಂಪಯ್ಯನಹುಂಡಿ (ಹೊಸಕೋಟೆ ಗ್ರಾಪಂ) ಗ್ರಾಮದಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆಯಡಿ 9.98 ಲಕ್ಷ ರೂ. ವೆಚ್ಚದಲ್ಲಿ ಹಾಗೂ ಗರ್ಗೇಶ್ವರಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಘನ ತ್ಯಾಜ್ಯ ವಿಲೇವಾರಿ ಘಟಕ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಸರ್ಕಾರ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ ಘನತ್ಯಾಜ್ಯ ಘಟಕ ನಿರ್ಮಿಸುತ್ತಿದೆ. ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ತ್ಯಾಜ್ಯ ಘಟಕಗಳನ್ನು ತೆರೆಯುವ ಮೂಲಕ ಈ ಎರಡೂ ಗ್ರಾಮಗಳು ಮಾದರಿಯಾಗಿವೆ. ಇತರೆ ತಾಲೂಕಿನ ಗ್ರಾಪಂನವರು ಇಲ್ಲಿನ ಘಟಕ ಅನುಕರಣೆ ಮಾಡಿ ತಮ್ಮ ಗ್ರಾಪಂ ಅನ್ನು ಸ್ವಚ್ಛ ಪಂಚಾಯ್ತಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು. ಘನ ತ್ಯಾಜ್ಯ ಘಟಕ ಒಳ್ಳೆಯ ಉದ್ದೇಶಕ್ಕೆ ನಿರ್ಮಾಣವಾಗಿದೆಯಾದರೂ ಸಾರ್ವಜನಿಕರ ಸಹಕಾರ ಅತಿ ಮುಖ್ಯ. ಜನಪ್ರತಿನಿಧಿಗಳು, ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಿ ಘಟಕಗಳನ್ನು ಅಭಿವೃದ್ಧಿ ಪಡಿಸಬೇಕೆಂದು ತಿಳಿಸಿದರು.

ಘನತ್ಯಾಜ್ಯ ನಿರ್ವಹಣೆ ಮನೆಯಿಂದಲೇ ಆರಂಭವಾಗುತ್ತಿದ್ದು, ಅಲ್ಲಿ ಕಸವನ್ನು ಹಸಿ ಹಾಗೂ ಒಣ ಕಸವನ್ನಾಗಿ ವಿಂಗಡಿಸಲಾಗುತ್ತದೆ. ಹಸಿ ಕಸವನ್ನು ಗೊಬ್ಬರವಾಗಿ, ಒಣ ಕಸವನ್ನು ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತದೆ. ಹಾಗಾಗಿ ಸಾರ್ವಜನಿಕರು ಮನೆಯಲ್ಲಿಯೇ ಕಸ ವಿಂಗಡಣೆ ಮಾಡಿಕೊಡಬೇಕು. ಘನತ್ಯಾಜ್ಯ ವಿಲೇವಾರಿ ಘಟಕಗಳ ಸಮರ್ಪಕ ಅನುಷ್ಠಾನದಿಂದ ಗ್ರಾಮೀಣ ಪ್ರದೇಶಗಳು ಸ್ವಚ್ಛ, ಸುಂದರ, ಆರೋಗ್ಯಪೂರ್ಣವಾಗಿರಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬರಲ್ಲೂ ಘಟಕದ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಅಧ್ಯಯನ ಪ್ರವಾಸ ತಂಡದ ಭೇಟಿ: ಘನ ತ್ಯಾಜ್ಯ ನಿರ್ವಹಣೆ ಕಲಿಕಾ ಅಧ್ಯಯನ ಪ್ರವಾಸ ಕೈಗೊಂಡಿದ್ದ ಹೆಚ್.ಡಿ.ಕೋಟೆ ತಾಲೂಕಿನ ಅಣ್ಣೂರು ಗ್ರಾಪಂ ಸದಸ್ಯರು ಹಾಗೂ ನೀರು ಮತ್ತು ನೈರ್ಮಲ್ಯ ಸಮಿತಿ ಹಾಗೂ ಸ್ವಸಹಾಯ ಸಂಘದ ಸದಸ್ಯರು ಗರ್ಗೇಶ್ವರಿಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ತ್ಯಾಜ್ಯ ಘಟಕಕ್ಕೆ ಭೇಟಿ ನೀಡಿ ಘಟಕದ ಕಾರ್ಯ ವಿಧಾನ ವೀಕ್ಷಿಸಿದರು. ವಿಲೇವಾರಿ ಘಟಕವನ್ನು ತಮ್ಮ ಪಂಚಾಯ್ತಿಯಲ್ಲೂ ನಿರ್ಮಿಸುವ ಸಲುವಾಗಿ ಪಿಡಿಓ ಅಮ್ಜದ್ ಪಾಷ ಅವರಿಂದ ಮಾಹಿತಿ ಪಡೆದರು.

ಈ ವೇಳೆ ಹೊಸಕೋಟೆ ಗ್ರಾಪಂ ಅಧ್ಯಕ್ಷ ಎಂ.ಆನಂದ್, ಉಪಾಧ್ಯಕ್ಷೆ ಚನ್ನಮ್ಮ, ಸದಸ್ಯರಾದ ಗಂಗಾಧರ್, ನಾಗರಾಜು, ಶೋಭಾ, ಕಾವ್ಯ, ನಾಗರಾಜು, ಜಯಲಕ್ಷ್ಮಮ್ಮ, ಮಾಜಿ ಸದಸ್ಯ ಕೆ.ಎಸ್. ಮಹೇಶ್, ಮಹದೇವಸ್ವಾಮಿ, ಹರೀಶ್, ಲೋಕೇಶ್, ಗಿರೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಜಿಪಂ ಮಾಜಿ ಸದಸ್ಯ ಮಹದೇವ್, ತಾಪಂ ಇಓ ಸಿ.ಕೃಷ್ಣ ಕುಮಾರ್, ರಾಜೇಂದ್ರ, ಬಸವರಾಜು, ಲೋಕೇಶ್, ಕಾರ್ತಿಕ್, ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ, ಕಾರ್ಯದರ್ಶಿ ಪುಟ್ಟರಾಜು, ಸ್ವಚ್ಛ ಭಾರತ್ ಮಿಷನ್ ಸಮಾಲೋಚಕಿ ದಿವ್ಯ, ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಶ್ವೇತಾ ಮತ್ತಿತರರಿದ್ದರು.

ಹುಲಿ ಪ್ರತ್ಯಕ್ಷ: ಗ್ರಾಮಸ್ಥರಲ್ಲಿ ಆತಂಕ

ಮಲ್ಕುಂಡಿ, ಡಿ.15– ನಂಜನಗೂಡು ತಾಲೂಕಿನ ತರಗನಹಳ್ಳಿ ಶ್ರೀಕಂಠೆ ಮಹದೇಶ್ವರ ಬೆಟ್ಟದ ಬಳಿ ಹುಲಿ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ.

ಇತ್ತೀಚೆಗೆ ಬಳ್ಳೂರುಹುಂಡಿ ಗ್ರಾಮದ ಬಳಿ ರೈತನ ಮೇಲೆ ದಾಳಿ ಮಾಡಿದ್ದ ಹುಲಿ ತರಗನಹಳ್ಳಿ ಬಳಿ ಪ್ರತ್ಯಕ್ಷವಾಗಿದೆ. ಇದರಿಂದ ರೈತರು ಹಾಗೂ ಸಾರ್ವಜನಿಕರು ಆತಂಕಕ್ಕೆ ಒಳಗಾಗಿದ್ದು, ತಕ್ಷಣ ಹುಲಿ ಸೆರೆಗೆ ಕ್ರಮ ವಹಿಸಬೇಕಾಗಿ ಒತ್ತಾಯಿಸಿದ್ದಾರೆ.

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಚಿರತೆ ದಾಳಿಗೆ ಟಗರು ಬಲಿ

ಬೈಲಕುಪ್ಪೆ, ಡಿ.15– ಚಿರತೆ ದಾಳಿಗೆ ಟಗರು ಬಲಿಯಾಗಿರುವ ಘಟನೆ ಬುಧವಾರ ರಾತ್ರಿ ಪಿರಿಯಾಪಟ್ಟಣ ತಾಲೂಕಿನ ಬೈಲಕೊಪ್ಪ ಗ್ರಾಪಂ ವ್ಯಾಪ್ತಿಯ ಚಿಕ್ಕಹೊನ್ನೂರು ಅರಣ್ಯ ವ್ಯಾಪ್ತಿಯಲ್ಲಿ ನಡೆದಿದೆ.

ಅಕ್ರಂ ಎಂಬುವರಿಗೆ ಸೇರಿದ ಟಗರು ಬಲಿಯಾಗಿರುವುದು. ಅಕ್ರಂ ಅವರು ಎಂದಿನಂತೆ ಬುಧವಾರ ರಾತ್ರಿ ತಮ್ಮ ಮನೆ ಹಿಂಭಾಗದಲ್ಲಿರುವ ಕೊಟ್ಟಿಗೆಯಲ್ಲಿ ಟಗರನ್ನು ಕಟ್ಟಿ ಹಾಕಿದ್ದರು. ಈ ವೇಳೆ ಕೊಟ್ಟಿಗೆಗೆ ನುಗ್ಗಿರುವ ಚಿರತೆ ಟಗರಿನ ಮೇಲೆ ದಾಳಿ ಮಾಡಿ ತಿಂದು ಪರಾರಿಯಾಗಿದೆ. ಇದರಿಂದ ಅಕ್ರಂ ಅವರಿಗೆ 20 ಸಾವಿರ ರೂ. ನಷ್ಟ ಸಂಭವಿಸಿದ್ದು, ಈ ಭಾಗದ ಜನತೆ ಘಟನೆಯಿಂದ ಭಯಗೊಂಡಿದ್ದಾರೆ. ಆದ್ದರಿಂದ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಚಿರತೆ ಸೆರೆಗೆ ಕ್ರಮ ವಹಿಸಬೇಕು ಎಂದು ಗ್ರಾಪಂ ಸದಸ್ಯ ಹರೀಶ್ ಹಾಗೂ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಇಂದಿನಿಂದ ಅಯ್ಯಪ್ಪಸ್ವಾಮಿ ಬ್ರಹ್ಮೋತ್ಸವ



ನಂಜನಗೂಡು, ಡಿ.15– ಇಲ್ಲಿನ ಕಪಿಲಾ ನದಿ ತೀರದಲ್ಲಿರುವ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಡಿ.16ರಿಂದ 11 ದಿನ ಅಯ್ಯಪ್ಪಸ್ವಾಮಿಯವರ 25ನೇ ವರ್ಷದ ಬ್ರಹ್ಮೋತ್ಸವ ನಡೆಯಲಿದೆ ಎಂದು ದೇವಾಲಯದ ಗುರುಸ್ವಾಮಿ ಪಿ.ದೇವರಾಜ ಸ್ವಾಮಿಗಳು ತಿಳಿಸಿದ್ದಾರೆ.

ಅಂದು ಬೆಳಗ್ಗೆ 9 ರಿಂದ 10.30 ರವರೆಗೆ ಧ್ವಜಾರೋಹಣ ಹಾಗೂ ಸಂಜೆ 6 ಗಂಟೆಗೆ ಉಷಾ ವೇಣುಗೋಪಾಲ್ ಅವರಿಂದ ನೃತ್ಯ ರೂಪಕ ನಡೆಯಲಿದೆ. ಡಿ.17 ರಂದು ಸಂಜೆ 6ಕ್ಕೆ ವಿಶೇಷ ಪಡಿ ಪೂಜೆ ನಡೆಯಲಿದೆ. ಡಿ.20ರಂದು ಬೆಳಗ್ಗೆ 7 ಗಂಟೆಗೆ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಹಾಗೂ 11 ಗಂಟೆಗೆ ಅನ್ನ ಸಂತರ್ಪಣೆ, ಮಧ್ಯಾಹ್ನ 2 ಗಂಟೆಗೆ ನಗರದ ರಾಜಬೀದಿಯಲ್ಲಿ ಶ್ರೀ ಅಯ್ಯಪ್ಪ ಸ್ವಾಮಿ ಉತ್ಸವ, ಸಂಜೆ 7 ಗಂಟೆಗೆ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ ಎಂದು ಮಾಹಿತಿ ನೀಡಿದರು.

ಗೌರವಾನ್ವಿತ ಮೂರನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಮೈಸೂರು

ಅಸಲು ದಾವಾ ಸಂಖ್ಯೆ : 284/2017

ವಾದಿಗಳು : ಶ್ರೀ ಯಶವಂತ್ ಸಿಂಗ್ ಮತ್ತು ಇತರರು

ವಿರುದ್ಧ

ಪ್ರತಿವಾದಿಗಳು: ಶ್ರೀ ರಮೇಶ್ ಬಾಬು ಹಾಗೂ ಇತರರು

7. ಶ್ರೀ ಟಿ.ಜಸ್ವಂತ್ ಸಿಂಗ್, ವಯಸ್ಸು 61 ವರ್ಷ.
8. ಶ್ರೀ ಎಸ್.ನವೀನ್ ಕುಮಾರ್ ಸಿಂಗ್, ಬಿನ್ ಟಿ.ಜಸ್ವಂತ್ ಸಿಂಗ್, ವಯಸ್ಸು 35 ವರ್ಷ.

7 ಮತ್ತು 8ನೇ ಪ್ರತಿವಾದಿಗಳ ವಾಸ #271, 1ನೇ ಮಹಡಿ, 20ನೇ ಮುಖ್ಯ ರಸ್ತೆ, 1ನೇ ಹಂತ, 'ಡಿ' ಬ್ಲಾಕ್, ಜೆ.ಪಿ.ನಗರ, ಮೈಸೂರು.

13. ಶ್ರೀ ಪ್ರಮುಖ್ ಬಿನ್ ಲೇಟ್ ಕೆ.ಆರ್.ಮುರಳೀಧರ್, ವಯಸ್ಸು 22 ವರ್ಷ, #8/2, ರಾಮವಿಲಾಸ ರಸ್ತೆ, ಮೈಸೂರು

ಸಾರ್ವಜನಿಕ ಪ್ರಕಟಣೆ

ವಾದಿಗಳು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ದಾವಾ ಸ್ವತ್ತುಗಳ ಸಂಬಂಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ದಾವೆಯಲ್ಲಿ 7, 8 ಮತ್ತು 13ನೇ ಪ್ರತಿವಾದಿಗಳಿಗೆ ನ್ಯಾಯಾಲಯದ ಸಮನ್ಸ್ ಜಾರಿಯಾಗಿರುವುದಿಲ್ಲ. ಹಾಗಾಗಿ ಸದರಿ 7, 8 ಮತ್ತು 13ನೇ ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆಯ ಮೂಲಕ ನೋಟಿಸ್ ನೀಡಲಾಗುತ್ತಿದ್ದು, ಮೇಲ್ಕಂಡ 7, 8 ಮತ್ತು 13ನೇ ಪ್ರತಿವಾದಿಗಳು ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕವಾಗಲೀ ದಿನಾಂಕ: 03/01/2022 ರಂದು ಬೆಳಗ್ಗೆ 11 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು
ಗೌರವಾನ್ವಿತ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಧೀಶರು ಮತ್ತು ಸಿ.ಜೆ.ಎಂ
ದಿನಾಂಕ:15.12.2022 ನ್ಯಾಯಾಲಯ, ಮೈಸೂರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು